೪. ಶ್ವೇತಾಂಬರ ಆಮ್ನಾಯದ–ಆಗಮ.

ದಿಗಂಬರ ಮತ್ತು ಶ್ವೇತಾಂಬರ ಪಂಥಗಳಲ್ಲಿ ಆಗಮಗಳನ್ನು ಹೆಸರಿಸುವಲ್ಲಿ ಸ್ಥೂಲ ದೃಷ್ಟಿಯಿಂದ ಅಂತಹ ವ್ಯತ್ಯಾಸವೇನಿಲ್ಲವೆಂದು ಹೇಳಬಹುದು. ಎರಡು ಪಂಥಗಳಲ್ಲಿಯೂ (ಶ್ರುತ) ಆಗಮವನ್ನು ಮೂಲಭೂತವಾಗಿ ಅಂಗಪ್ರವಿಷ್ಟ ಮತ್ತು ಅನಂಗ ಪ್ರವಿಷ್ಟ ಅಥವಾ ಅಂಗಬಾಹ್ಯ ಎಂಬ ಎರಡು ಪ್ರಕಾರಗಳಾಗಿ ಹೇಳಿದೆ. ಎರಡು ಪಂಥಗಳಲ್ಲಿಯೂ ಅಂಗಪ್ರವಿಷ್ಟದಲ್ಲಿ ದ್ವಾದಶಾಂಗಗಳನ್ನು ಹೇಳಿದೆ. ಅಂಗಾಬಾಹ್ಯ ಪ್ರಕಾರಗಳನ್ನು ಹೇಳುವಲ್ಲಿ ಈ ಎರಡು ಪಂಥಗಳ ಮಧ್ಯೆ ವಿಶೇಷವಾದ ಮತಭೇದ ವಿದೆಯಾದರೂ ಈ ಪ್ರಕಾರಗಳಲ್ಲಿಯೂ ಅನೇಕ ಗ್ರಂಥಗಳ ಹೆಸರುಗಳು ಒಂದೇ ರೀತಿಯವಾಗಿವೆ. ಸೂಕ್ಷ್ಮರೀತಿಯಿಂದ ನೋಡುವಾಗ ಈ ಎರಡು ಪಂಥಗಳ ಆಗಮಗಳ ವಿವರಣೆಯಲ್ಲಿ ಗಮನಾರ್ಹ ವ್ಯತ್ಯಾಸವೂ ಇದೆ. ಈ ದೃಷ್ಟಿಯಿಂದ ಇಲ್ಲಿ ಶ್ವೇತಾಂಬರ ಆಗಮದ ಸ್ಥೂಲ ಪರಿಚಯದ ಅವಶ್ಯಕತೆಯಿದೆ.[೧]

ಜೈನ ಮತದಂತೆ ಈ ಜಗತ್ತು ಯಾರಿಂದಲೂ ಸೃಷ್ಟಿಯಾದುದಲ್ಲಿ. ಮತ್ತು ಯಾರಿಂದಲೂ ಲಯ ಹೊಂದುವುದಿಲ್ಲ. ಎಂದರೆ, ಇದಕ್ಕೆ ಆದಿಯೂ ಇಲ್ಲ ಕೊನೆಯೂ ಇಲ್ಲ. ಸಮಸ್ತ ಜಗತ್ತನ್ನು ದೃಷ್ಟಿಯಲ್ಲಿರಿಸಿ ಹೇಳುವುದಾದರೆ ಜೈನ ಧರ್ಮವು ಸದಾಕಾಲ ಇರುವುದು, ಹಾಗೆಯೇ ಜೈನ ಆಗಾಮವೂ ಕೂಡ ಇರುವುದು. ಆದರೆ ಭರತ ಖಂಡ ದೇಶದ ದ್ರಿಷ್ಟಿಯಿಂದ ಪರಿಶೀಲನೆ ಮಾಡಿದಲ್ಲಿ ಈ ವಿಷಯದಲ್ಲಿ ಸ್ವಲ್ಪ ವಿಶೇಷವಿದೆ. ಕಾಲ ಚಕ್ರಾದ ಗತಿಯಲ್ಲಿ ಈಗ ನಡೆಯುತ್ತಿರುವ ಹುಂಡಾವಸರ್ಪಿಣೀ ಕಾಲದಲ್ಲಿ, ಜೈನ ಧರ್ಮವು ಏಳುಬಾರಿ ಪರಿಪೂರ್ಣವಾಗಿ ಅಳಿದಿದ್ದಿತು. ಜೈನ ಆಗಮದ ಸ್ಥಿತಿಯೂ ಇದೇ ರೀತಿಯದಾಗಿದ್ದಿತು. ಆದರೆ ಇದು ಅತ್ಯಂತ ದೂರದ ಕಾಲಕ್ಕೆ ಸಂಬಂಧಿಸಿದ ಸಂಗತಿಯಾಗಿದೆ. ಕಳೆದ ಲಕ್ಷ ಲಕ್ಷಾಂತರ ವರ್ಷಗಳಿಂದ ಜೈನ ಧರ್ಮವು ಈ ದೇಶದಲ್ಲಿ ಉಳಿದು ಬಂದಿದೆ. ಇದನ್ನು ಖಚಿತರೀತಿಯಿಂದ ಹೇಳಬೇಕೆಂದರೆ, ಈಗಿನ (ವೃಷಭಾದಿ ಮಹಾವೀರಾಂತ್ಯ) ೨೪ ತೀರ್ಥಂಕರರಲ್ಲಿ ೧೬ನೆಯವನಾದ ಭಗವಾನ್ ಶಾಂತಿನಾಥ ತೀರ್ಥಂಕರನಿಂದ

ಧರ್ಮತೀರ್ಥ ಪ್ರವರ್ತನೆಯಾದಂದಿಂನಿಂದ ಈ ಧರ್ಮವು ಆಳಿಯದೆ ಉಳಿದುಬಂದಿದೆ.[೨] ಹೀಗಿದ್ದರೂ ಆಗ ರಚಿತವಾದ ಅಥವಾ ಸಂಕಲಿತವಾದ ಆಗಮವು ತದ್ವತ್ತಾಗಿ ಪದಶಃ ಭಾಷಾರೂಪದಲ್ಲಿ ಇಂದಿನವರೆಗೂ ಉಳಿದುಬಂದಿದೆಯೆಂಬುದು ಇದರ ಅರ್ಥವಲ್ಲ. ಆದರೆ ಆ ಕಾಲದಾರಭ್ಯ ಧರ್ಮವು ಅಂತರ್ವಾಹಿನಿ ಸತ್ತ್ವ ರೂಪದಿಂದ ಒಂದಲ್ಲ ಒಂದು ರೀತಿಯಿಂದ ಈಗಲೂ ಉಳಿದಿದೆ. ಜೈನ ಆಮ್ನಾಯದನುಸಾರ ಕೇವಲಾಜ್ಞಾನವು ಪ್ರಕಟವಾಗುತ್ತಿದ್ದಂತೆಯೇ ತೀರ್ಥಂಕರನು ಧರ್ಮೋಪದೇಶ ಮಾಡುವನು. ಆಗ ಆ ಸಭೆಯಲ್ಲಿರುವವರಲ್ಲಿ ಕೆಲವರು ಜೈನ ದೀಕ್ಷೆ ಪಡೆಯುವರು. ಅವರಲ್ಲಿ ಧರ್ಮೋಪದೇಶಕ್ಕೆ ಯೋಜಿತರಾಗುವಲ್ಲಿ ಅಗ್ರಮಾನ್ಯತೆ ಹೊಂದಿದವರು ಎಂದರೆ ಗಣಧರರು, ಇವರು ದ್ವಾದಶಾಂಗಿಯ ರಚನೆ ಮಾಡುವರು. ಇವರ ನೇತೃತ್ವದಲ್ಲಿ ಋಷಿ, ಅರ್ಯಿಕ ಶ್ರಾವಕ ಮತ್ತು ಶ್ರಾವಿಕಾ ಎಂಬ ನಾಲ್ಕು ವರ್ಗಗಳನ್ನೊಳಗೊಂಡ ಚತುಸ್ಸಂಘದ ಸ್ಥಾಪನೆಯಾಗುವುದು.

ಭಗವಾನ್ ಮಹಾವೀರ[೩] : ದುಃಷಮ–ಸುಷಮಾ ಕಾಲವು ಕೊನೆಗೊಳ್ಳಲು ೭೫ ವರ್ಷ ೧೧ ತಿಂಗಳು ಏಳುವರೇ ದಿನಗಳ ಕಾಲ ಉಳಿದಿದ್ದಿತು, ಗ್ರೀಷ್ಮ ಋತು ಚೈತ್ರ ಶುಕ್ಲತ್ರಯೋದಶಿಯ ಮಧ್ಯರಾತ್ರಿ ಸಮಯ, ಆಗ ಭಗವಾನ್ ಮಹಾವೀರನು ಜನಿಸಿದನು. ಇದು ಕ್ರಿ. ಪೂ. ೫೯೯ರ ಸಂಗತಿ. ವಿದೇಹದಲ್ಲಿ ಕುಂಡಪುರವೆಂಬ ಒಂದು ಗ್ರಾಮ. ಅದರಲ್ಲಿ ಎರಡು ಭಾಗಗಳು, ಉತ್ತರಭಾಗದ ಹೆಸರು ಕ್ಷತ್ರಿಯ ಕುಂಡ ಗ್ರಾಮ, ದಕ್ಷಿಣಭಾಗದ ಹೆಸರು ಬ್ರಾಹ್ಮಣ ಕುಂಡಗ್ರಾಮ. ಭಗವಂತನು ಕ್ಷತ್ರಿಯ ಕುಂಡಗ್ರಾಮದಲ್ಲಿ ಜನಿಸಿದನು.

ಭಗವಂತನ ತಾಯಿ ತ್ರಿಶಲಾ ಕ್ಷತ್ರಿಯಾಣೀ ಮತ್ತು ತಂದೆ ಸಿದ್ಧಾರ್ಥ. ಇವರು ಪಾರ್ಶ್ವತೀರ್ಥಂಕರನ ಪರಂಪರೆಯ ಶ್ರವಣೋಪಾಸಕರು. ತ್ರಿಶಲಾದೇವಿಯು ವೈಶಾಲೀ ಗಣರಾಜ್ಯದ ಪ್ರಮುಖನಾಗಿದ್ದ ಚೇಟಕನ ಭಗನಿ. ಸಿದ್ಧಾರ್ಥನು ಕ್ಷತ್ರಿಯ ಕುಂಡ ಗ್ರಾಮದ ಅಧಿಪತಿ.

ಭಗವಂತನ ಅಣ್ಣ ನಂದಿವರ್ಧನ. ಇವನು ಚೇಟಕನ ಮಗಳು ಜ್ಯೇಷ್ಠೆಯನ್ನು ಮದುವೆಯಾಗಿದ್ದನು. ಭಗವಂತನ ಚಿಕ್ಕಪ್ಪ ಸುಪಾರ್ಶ್ವ ಮತ್ತು ಅಕ್ಕ ಸುದರ್ಶನಾ. ಭಗವಂತನು ತ್ರಿಶಲಾದೇವಿಯ ಗರ್ಭಸೇರಿದಾರಭ್ಯ ಸಂಪತ್ತಿಯ ವೃದ್ಧಿಯಾದುದರಿಂದ ತಂದೆ ತಾಯಿಯರು ಇವನಿಗೆ 'ವರ್ಧಮಾನ' ನೆಂದು ಹೆಸರಿಟ್ಟರು. ಭಗವಂತನು 'ಜ್ಞಾತ' ನಾಗಕುಲದಲ್ಲಿ ಜನಿಸಿದವನಾದ್ದರಿಂದ

ಇವನಿಗೆ ಕುಲಧಾಧಾರದಿಂದ 'ನಾಗ ಪುತ್ರ' ಎಂಬ ಹೆಸರಾಯಿತು. ಸಾಧನೆಯ ದೀರ್ಘ ಕಾಲದಲ್ಲಿ ಅನೇಕ ಕಷ್ಟಗಳನ್ನು ವೀರ ಪ್ರವೃತ್ತಿಯಿಂದ ಎದುರಿಸಿ ತನ್ನ ಗುರಿಯಿಂದ ವಿಚಲಿತನಾಗದಿದ್ದುದರಿಂದ ಇವನಿಗೆ ಮಹಾವೀರನೆಂಬ ಹೆಸರುಂಟಾಗಿ ಈ ಹೆಸರೇ ಹೆಚ್ಚಾಗಿ ಪ್ರಚಲಿರ್ತವಾಯಿತು. ಸಿದ್ಧಾರ್ಥನು ಕಾಶ್ಯಪಗೋತ್ರದ ಕ್ಷತ್ರಿಯ. ತಂದೆಯ ಗೋತ್ರವು ಮಗನ ಗೋತ್ರವಾಗುವುದಾದ್ದರಿಂದ ಭಗವಾನ್ ಮಹಾವೀರನನ್ನು ಕಾಶ್ಯಪಗೋತ್ರಾದವಾನೆಂದು ಹೇಳಿದೆ.

ಭಗವಂತನ ವಿದ್ಯಾಭ್ಯಾಸ ಸಮಯ ಬಂದಿತು. ತೀರ್ಥಂಕರರು ಗರ್ಭಕಾಲದಿಂದಲೇ ಅವಧಿಜ್ಞಾನ ಸಂಪನ್ನರಾಗಿರುವರು. ಇದರಂತೆ ಭಗವಾನ್ ಮಹಾವೀರನೂ ಅವಧಿ ಜ್ಞಾನಿಯಾಗಿದ್ದನು. ಭಗವಂತನು ಓದಲು ಹೋದನು, ಅಧ್ಯಾಪಕನು ಪಾಠಹೇಳಲು ಇಚ್ಛಿಸಿದುದೆಲ್ಲವೂ ಅದಾಗಲೇ ಬಾಲಕ ಮಹಾವೀರನಿಗೆ ತಿಳಿದುರುತ್ತಿದ್ದಿತು. ಫಲಿ ತಾಂಶವಾಗಿ ಅಧ್ಯಾಪಕನು 'ನೀವು ಸ್ವಯಂ ಸಿದ್ಧರಿರುವಿರಿ. ನೀವು ಅಧ್ಯಯನ ಮಾಡಬೇಕಾದ ಅಗತ್ಯವಿಲ್ಲ' ಎಂದು ಹೇಳಿದನು. ತಾರುಣ್ಯ ಹೊಂದಿದ  ಭಗವಾನ್ ಮಹಾವೀರನಿಗೆ ಮದುವೆಯಾಯಿತು ; ಸಹಜವಾಗಿ ಅವನು ವಿರಕ್ತನಿದ್ದನು, ವಿವಾಹವಾಗುವ ಇಚ್ಛೆ ಅವನಿಗಿರಲಿಲ್ಲ ; ಆದರೆ ತಂದೆ ತಾಯಿಯರ ಆಗ್ರಹದಿಂದಾಗಿ ಮದುವೆಯಾದನು. (ದಿಗಂಬರ ಸಂಪ್ರದಾಯದ ಹೇಳಿಕೆಯಂತೆ ಭಗವಾನ್ ಮಹಾವೀರನು ಮದುವೆಯಾಗಲಿಲ್ಲ). ಶ್ವೇತಾಂಬರ ಸಾಹಿತ್ಯದನುಸಾರ ಅವನ ವಿವಾಹವು ಕ್ಷತ್ರಿಯ ಕನ್ಯೆ ಯಶೋದೆಯೊಡನಾಯಿತು. ಪ್ರಿಯದರ್ಶನೆಯೆಂಬ ಮಗಳು ಹುಟ್ಟಿದಳು. ಅವಳ ವಿವಾಹ ಸುದರ್ಶನೆಯ ಮಗ ಜಾಮಾಲಿಯೊಡನೆ ಆಯಿತು. ಶೇಷವತೀ (ಅಪರನಾಮ ಯಶಸ್ವತೀ) ಎಂಬ ಹೆಸರಿನ ಮಮ್ಮಗಳಾದಳು.

ಭಗವಾನ್ ಮಹಾವೀರನು ೨೮ ವರ್ಷ ವಯೋಮಾನದವನಾಗಿದ್ದಾಗ ಅವನ ತಂದೆ ಮತ್ತು ತಾಯಿ ದಿವಂಗತರಾದರು. ಆಸಮಯದಲ್ಲಿಯೇ ಭಗವಂತನು ಶ್ರಮಣ ದೀಕ್ಷೆ ಪಡೆಯಲು ಇಚ್ಛಿಸಿದನಾದರೂ ನಂದಿವರ್ಧನನು ಮನೆಯಲ್ಲಿಯೇ ಇರುವಂತೆ ಒತ್ತಾಯ ಮಾಡಿದನಾಗಿ ಹಾಗೆ ದೀಕ್ಷೆ ಹೊಂದಲಾಗಲಿಲ್ಲ. ಮತ್ತೆ ಎರಡು ವರ್ಷಕಾಲ ಮನೆಯಲ್ಲಿಯೇ ಇದ್ದು ಏಕಾಂತ ವಿರಕ್ತಿಯ ಜೀವನ ಕಳೆದನು. ಈ ಕಾಲದಲ್ಲಿ ಭಗವಂತನು ಶುದ್ಧಿ ಮಾಡದಿದ್ದ ನೀರನ್ನು ಉಪಯೋಗಿಸುತ್ತಿರಲಿಲ್ಲ.

ರಾತ್ರಿ ಭೋಜನ ಮಾಡುತ್ತಿರಲಿಲ್ಲ ಅಲ್ಲದೆ ಬ್ರಹ್ಮಚರ್ಯೆಯಲ್ಲಿದ್ದನು ಮುವ್ವತ್ತನೇ ವಯಸ್ಸಿನಲ್ಲಿ ಭಗವಂತನ ಅಭಿ ನಿಷ್ಕ್ರಮಣವಾಯಿತು. ಅವನು ಅಮರತ್ವ (ಮರಣವಿಲ್ಲದಿರುವಿಕೆಯ) ಸಿದ್ಧಿಗಾಗಿ ಹೊರನಡೆದನು. 'ಇಂದಿನಿಂದ ನಾನು ಯಾವ ರೀತಿಯದೇ ಪಾಪಾಚರಣೆಯನ್ನೂ ಮಾಡುವುದಿಲ್ಲ' ಎಂಬ ಪ್ರತಿಜ್ಞೆಯೊಡನೆ ಅವನು ಶ್ರವಣನಾದನು. ಅನಂತರ ಹನ್ನೆರಡು ವರ್ಷಗಳ ಕಾಲ ಶಾಂತ, ಮೌನ ಮತ್ತು ದೀರ್ಘ ತಪಸ್ವೀ ಜೀವನ ಕಳೆದನು. ಈ ಕಾಲದಲ್ಲಿ ಭಗವಂತನು ಮೌನವಾಗಿ ಶೂನ್ಯ ಗೃಹವಾಸಿಯಾಗಿರುತ್ತಿದ್ದುದರಿಂದ ಅನೇಕ ಕಷ್ಟಗಳನ್ನು ಸಹಿಸಬೇಕಾಯಿತು. ಗ್ರಾಮ ಕಕ್ಷಕ, ರಾಜಪುರುಷ, ಮತ್ತು ದುಷ್ಟವ್ಯಕ್ತಿಗಳ ಕೋಪಕ್ಕೊಳಗಾಗಬೇಕಾಯಿತು. ಅವರಿಂದಾದ ಪೀಡೆ–ಬಾಧೆಯನ್ನು ಸಹನಶೀಲವಾಗಿ ಸಹಿಸಬೇಕಾಯಿತು. ದೇವತಗಳಿಂದಲೂ ಭಗವಂತನಿಗೆ ಘೋರ ಉಪಸರ್ಗವಾಅಯಿತು, ಮಾಧ್ಯಸ್ಥ ಭಾವದಿಂದಿದ್ದು ಕಷ್ಟ ಕೋಟಲೆಗಳನ್ನು ಸಹಿಸಿ ಅವಿಚಲಿತನಾಗಿ ತಪಸ್ಸಾಧನೆ ಮಾಡಿದನು.

ಗ್ರೀಷ್ಮ ಋತುವಿನ ವೈಶಾಖ ಮಾಸ ಶುಕ್ಲ ದವಿಮೀದಿನ, ನೆರಳು ಪೂರ್ವದಿಕ್ಕಿನತ್ತ ತಿರುಗಿದ್ದಿತು, ಅಪರಾಹ್ಣ ಪ್ರಹರದ ಸಮಯ, ವಿಜಯ ಮುಹೂರ್ತ ಮತ್ತು ಉತ್ತರಾ ಫಲ್ಗುನೀ ಯೋಗವಾಗಿದ್ದಿತು. ಆ ವೇಳೆಯಲ್ಲಿ ಭಗವಾನ್ ಮಹಾವೀರನು ಜ್ರಂಭಿಯ ಗ್ರಾಮ ನಗರದ ಹೊರಗೆ ಋಜುವಾಲಿಕಾ ನದಿಯ ಉತ್ತರ ದಡದಲ್ಲಿದ್ದ ಗಾಥಾ ಪತಿಯ ಕೃಷಿ ಭೂಮಿಯಲ್ಲಿ ವ್ಯಾವರ್ತಕವೆಂಬ ಚೈತ್ಯದ ಸಮೀಪದ ಶಾಲಾ ವೃಕ್ಷದ ಕೆಳಗೆ 'ಗೋದೋಹಿಕಾ' (ಹಸುವಿನ ಹಾಲು ಕರೆಯುವ?) ಆಸನದಲ್ಲಿ ಕುಳಿತಿದ್ದು ಈಶಾನ್ಯ ದಿಕ್ಕಿನತ್ತ ಮುಖ ಮಾಡಿ ಸೂರ್ಯನ ಬಿಸಿಲಿಗೆ ಅಭಿಮುಖನಾಗಿದ್ದನು.

ಎರಡು ದಿನಗಳ ನಿರ್ಜಲ (ನೀರನ್ನೂ ತೆಗೆದುಕೊಳ್ಳದಿದ್ದ) ಉಪವಾಸದಲ್ಲಿದ್ದ ಭಗವಾನ್ ಮಹಾವೀರನು ಶುಕ್ಲಧ್ಯಾನದಲ್ಲಿ ಲೀನನಾಗಿದ್ದನು, ಧ್ಯಾನದ ಉತ್ಕರ್ಷ ಹೆಚ್ಚಿತು, ಕ್ಷಪಕಶ್ರೇಣೀಯಲ್ಲಿ ಆರೂಢನಾಗಿ ಮೇಲೇರಿದನು, ಬಳಿಕ ಕೆಲವೇ ಕ್ಷಣಗಳಲ್ಲಿ ಆತ್ಮವಿಕಾಸದ ಎಂಟು, ಒಂಭತ್ತು ಮತ್ತು ಹತ್ತನೆಯ ಭೂಮಿಕೆಗಳನ್ನು (ಗುಣಸ್ಥಾನಗಳನ್ನು) ದಾಟಿ ಹನ್ನೆರಡನೆಯ ಭೂಮಿಕೆಯನ್ನು ಸೇರುತ್ತಿದ್ದ ಹಾಗೆಯೇ ಅವನ ಮೋಹದ ಬಂಧನವು ಪೂರ್ಣವಾಗಿ ತುಂಡಾಯಿತಾಗಿ ವೀತರಾಗನಾದನು. ಹದಿ ಮೂರನೆ ಭೂಮಿಕೆಯ ಪ್ರವೇಶ  ದ್ವಾರ ತೆರೆಯಿತು, ಆಗ ಜ್ಞಾನಾವರಣಾ, ದರ್ಶನಾವರಣ, ಮತ್ತು

ಅಂತರಾಯಕರ್ಮಗಳ ಕಟ್ಟುಗಳೂ ತುಂಡಾದವು. ಈಗ ಭಗವಂತನು ಅನಂತಜ್ಞಾನಿಯೂ, ಅನಂತ ದರ್ಶನನೂ, ಅನಂತ ಆನಂದಮಯನೂ ಅನಂತ ವೀರ್ಯನೂ ಆದನು. ಸರ್ವಲೋಕದ, ಸರ್ವಜೀವಿಗಳ, ಸರ್ವಭಾವಗಳನ್ನು ತಿಳಿಯುವವನಾಗಿ ಮತ್ತು ಕಾಣುವವನಾಗಿ ಆದನು, ಅವನ ಸಾಧನೆ ಕಾಲವು ಸಮಾಪ್ತವಾಗಿ ಸಿದ್ಧಿಕಾಲದ ಎಲ್ಲೆಯನ್ನು ಸೇರಿದನು. (ದೀಕ್ಷಾ ನಂತರದ) ಹದಿಮೂರನೇ ವರ್ಷದ ಏಳನೇ ತಿಂಗಳಲ್ಲಿ ಕೇವಲಿಯಯಾದನು.

ಧರ್ಮದ ಸಾಂಘಿಕ ಪ್ರಯೋಗ–ಭಗವಂತನ ಪ್ರಥಮ ಪ್ರವಚನ ದೇವತೆಗಳ ಪರಿಷತ್ತಿನಲ್ಲಿ ನಡೆಯಿತು. ದೇವತೆಗಳು ಅತೀವ ವಿಲಾಸಿಗಳು, ಅವರು ವ್ರತ–ಸಂಯಮ ಸ್ವೀಕಾರ ಮಾಡುವುದಿಲ್ಲ, ಭಗವಂತನ ಮೊದಲ ಪ್ರವಚನ ನಿಷ್ಫಲವಾಯಿತು.

ಭಗವಂತನು ಜಂಭಿಯಗ್ರಾಮ ನಗರದಿಂದ ವಿಹಾರಮಾಡಿ ಮಧ್ಯಮ ಪಾವಾಪುರಿ ಸೇರಿದನು. ಅಲ್ಲಿ ಸೋಮಿಲನೆಂಬ ಬ್ರಾಹ್ಮಣನು ಒಂದು ವಿರಾಟ್ ಯಜ್ಞದ ಆಯೋಜನೆ ಮಾಡಿದ್ದನು, ಇದರ ಅನುಷ್ಠಾನ ಪೂರ್ತಿಗಾಗಿ ಅಲ್ಲಿಗೆ ಇಂದ್ರಭೂತಿ ಮುಂತಾದ ಹನ್ನೊಂದು ಜನ ವೇದಪಾರಂಗತ ಬ್ರಾಹ್ಮಣರು ಬಂದಿದ್ದರು, ಭಗವಂತನ ಆಗಮನದ ಸಂಗತಿಯನ್ನು ತಿಳಿದ ಅವರಲ್ಲಿ ಪಾಂಡಿತ್ಯದ ಅಹಂಭಾವ ಜಾಗೃತವಾಯಿತು. ಇಂದ್ರಭೂತಿಯು ಮೇಲೆದ್ದು ಭಗವಂತನನ್ನು ಸೋಲಿಸಲೋಸುಗ ತನ್ನಶಿಷ್ಯ ಸಂಕುಲದೊಡನೆ ಭಗವಾಂತನ ಸಮವಸರಣ ಸೇರಿದನು. ಅವನಿಗೆ 'ಜೀವ' ದ ಬಗ್ಗೆ ಸಂದೇಹವಿದ್ದಿತು. ಅವನಲ್ಲಿ ಮರೆಯಾಗಿ ಅಡಗಿದ್ದ ಪ್ರಶ್ನೆಯನ್ನು ಭಗವಂತನೇ ಆವನೆದುರಿಗಿರಿಸಿದನು. ಇಂದ್ರಭೂತಿಯು ಬೆರಗಾದನು, ಎಲ್ಲ ರೀತಿಯಿಂದಲೂ ತನ್ನಲ್ಲಿಯೇ ಅಡಗಿ ಮರೆಯಾಗಿದ್ದ ಗೂಢವಿಚಾರದ ಪ್ರಕಾಶನದಿಂದ ಅವನಿಗೆ ಅಚ್ಚರಿಯಾಯಿತು. ಅವನ ಅಂತರಾತ್ಮನು ಭಗವಂತನ ಚರಣಗಳಲ್ಲಿ ಬಾಗಿತು. ಭಗವಂತನು ಅವನ ಸಂದೇಹವನ್ನು ನಿವಾರಿಸಿದನು. ಇಂದ್ರಭೂತಿಯು ಎದ್ದು ನಮಸ್ಕರಿಸಿ ಶ್ರದ್ಧಾ ಪೂರ್ವಕ ಭಗವಂತನ ಶಿಷ್ಯನಾದನು. ಭಾಗವಂತನು ಅವನಿಗೆ ಷಟ್ ಜೀವನಿಕಾಯ, ಪಂಚಮಹಾವ್ರತ, ಮತ್ತು ಇಪ್ಪತ್ತೈದು ಭಾವನೆಗಳ ಉಪದೇಶವಿತ್ತನು.

ಇಂದ್ರಭೂತಿಯು ಗೌತಮ ಗೋತ್ರದವನು 'ಗೌತಮ' ಎಂಬುದು ಜೈನ ಸಾಹಿತ್ಯದಲ್ಲಿ ಸುವಿಶ್ರುತವಾದ ಹೆಸರು. ಭಗವಂತನೊಡನೆ ನಡೆದ ಇವನ ಸಂವಾದ ಮತ್ತು ಪ್ರಶ್ನೋತ್ತರಗಳು ಇದೇ

ಹೆಸರಿನಿಂದ ಉಪಲಬ್ಧವಿವೆ. ಇವನು ಭಗವಂತನ ಪ್ರಥಮ ಗಣಧರ ಮತ್ತು ಜ್ಯೇಷ್ಠ ಶಿಷ್ಯನಾಗಿ ಆದನು.

ಇಂದ್ರಭೂತಿಯ ಈ ಸಂಗತಿಯನ್ನು ತಿಳಿದ ಇತರ ಪಂಡಿತರು ಒಬ್ಬೊಬ್ಬರಾಗಿ ಬಂದು ಭಗವಂತನ ಶಿಷ್ಯರಾದರು. ಅವರಲ್ಲಿ ಮೃತಿಯೊಬ್ಬೊನಿಗೂ ಇದ್ದ ಒಂದೊಂದು ಸಂದೇಹ–

೧. ಇಂದ್ರಭೂತಿ–ಜೀವನಿದ್ದಾನೆಯೇ ಅಥವಾ ಇಲ್ಲವೆ ?

೨. ಅಗ್ನಿಭೂತಿ– ಕರ್ಮಇದೆಯೇ ಅಥವಾ ಇಲ್ಲವೆ ?

೩. ವಾಯುಭೂತಿ–ಶರೀರ ಮತ್ತು ಜೀವ ಒಂದೇ ಆಗಿವೆಯೆ ಅಥವಾ ಭಿನ್ನವೆ ?

೪. ವ್ಯಕ್ತ–ಪೃಥ್ವೀ ಮುಂತಾದುವು ಭೂತಗಳೆ ಅಥವಾ ಅಲ್ಲವೆ ?

೫. ಸುಧರ್ಮಾ–ಇಲ್ಲಿಯಾವುದು ಹೇಗಿದೆಯೋ ಅದು ಪರಲೋಕದಲ್ಲಿಯೂ ಹಾಗೆಯೇ ಇರುವುದೇ ಅಥವಾ ಇಲ್ಲವೆ?

೬. ಮಂಡಿತಪುತ್ರ–ಬಂಧ–ಮೋಕ್ಷಗಳಿವೆಯೇ ಅಥವಾ ಇಲ್ಲವೆ ?

೭. ಮೌರ್ಯ ಪುತ್ರ–ದೇವನಿದ್ದನೆಯೇ ಅಥವಾ ಇಲ್ಲವೆ?

೮. ಅಕಂಪಿತ–ನರಕವಿದೆಯೆ ಅಥವಾ ಇಲ್ಲವೆ?

೯. ಅಚಲಭ್ರಾತಾ– ಪುಣ್ಯವೇ ಸ್ವರೂಪಭೇದದಿಂದ ಸುಖ–ದುಃಖಗಳ ಕಾರಣವಾಗುವುದೆ ಅಥವಾ ಅದರಿಂದ ಬೇರೆಯದಾಗಿ 'ಪಾಪ' ವಿದೆಯೆ ?

೧೦ ಮೇತಾರ್ಯ– ಆತ್ಮನಿದ್ದರೂ ಪರಲೋಕವಿರುವುದೆ ಅಥವಾ ಇಲ್ಲವೆ ?

೧೧. ಪ್ರಭಾಸ– ಮೋಕ್ಷವಿದಯೆ ಅಥವಾ ಇಲ್ಲವೆ ?

ಭಗವಾಂತನು ಇವರೆಲ್ಲರ ಅಂತರಂಗದಲ್ಲಿ ಹುದುಗಿದ್ದ ಸಂಶಯಗಳನ್ನು ಪ್ರಕಾಶಕ್ಕೆ ತಂದು ಅವುಗಳಿಗೆ ಸಮಾಧಾನಕರ ಉತ್ತರವಿತ್ತನಾಗಿ ಇವರೆಲ್ಲರೂ ತಮ್ಮನ್ನು ತಾವು ಭಗವಂತನಿಗೆ ಸಮರ್ಪಣೆ ಮಾಡಿಕೊಂಡರು. ಈ ರೀತಿಯಾಗಿ ಮೊದಲ ಪ್ರವಚನದಲ್ಲಿಯೇ ಭಗವಂತನ ಶಿಷ್ಯ ಸಂಪತ್ತು ಸಮೃದ್ಧವಾಯಿತು. ಎಂಭತ್ತನಾಲ್ಕುನೂರು ಜನ ಶಿಷ್ಯರಾದರು. ಭಗವಂತನು ಇಂದ್ರಬೂತಿಯೇ ಮೊದಲಾದ, ಮೇಲೆ ಹೆಸರಿಸಿರುವ, ಹನ್ನೊಂದು ಜನರನ್ನು ಗಣಧರ ಪದವಿಯಲ್ಲಿ ನಿಯೋಜಿಸಿದನು.

ಮತ್ತು ಈಗ ಭಗವಂತನ ತೀರ್ಥ ವಿಸ್ತಾರ ಹೊಂದಲಾರಂಭಿಸಿತು. ಸ್ತ್ರೀಯರು ಪ್ರವ್ರಜ್ಯೆದೀಕ್ಷೆ ಪಡೆದರು ಸಾಧ್ವಿಯರ ಸಂಘದ ನೇತೃತ್ವವನ್ನು ಭಗವಂತನು ಚಂದನಬಾಲೆಗೆ ವಹಿಸಿದನು. ಕೆಲಕಾಲದ ಬಳಿಕ ಭಗವಂತನ 'ಶಿಷ್ಯಗಣದಲ್ಲಿ ಹದಿನಾಲ್ಕು ಸಾವಿರ ಸಾಧುಗಳು ಮತ್ತು ಮುವ್ವತ್ತಾರುಸಾವಿರ ಸಾಧ್ವಿಯರು. ಒಂದುಲಕ್ಷದ ಐವತ್ತೊಂಬತ್ತು ಸಾವಿರ ಶ್ರಾವಕರು ಮತ್ತು ಮೂರುಲಕ್ಷದ ಹದಿನೆಂಟು ಸಾವಿರ ಶ್ರಾವಿಕೆಯರಿದ್ದರು. ಭಗವಂತನು ವಿಕ್ರಮ ಪೂರ್ವ ೪೭೦ರಲ್ಲಿ (ಕ್ರಿ.ಪೂ. ೫೨೭ರಲ್ಲಿ) ಪಾವಾಪುರದಲ್ಲಿ ಕಾರ್ತಿಕ ಬಹುಳ ಅಮಾವಾಸ್ಯೆಯಂದು ನಿರ್ವಾಣ ಹೊಂದಿದನು.

[೫]ಇಂದ್ರಭೂತಿ ಗೌತಮ ಗಣಧರನು ಭಗವಂತನಿಂದ ದೀಕ್ಷೆ ಪಡೆದ ಅನಂತರ 'ಕಿಂ ತತ್ತಂ' (ವಸ್ತುಸ್ವರೂಪವೇನು !) ಎಂದು ಪ್ರಶ್ನಿಸಿದನು. ಇದಕ್ಕೆ ಭಗವಂತನು 'ಉಪ್ಪನ್ನೇಇವಾ' (ಒಂದು ದೃಷ್ಟಿಯಿಂದ ಹುಟ್ಟುಳ್ಳದ್ದಾಗಿರುವುದು ಎಂದು ಹೇಳಿದನು) ಈ ಉತ್ತರದಿಂದ ಗೌತಮ ಇಂದ್ರಭೂತಿಗೆ ಸಮಾಧಾನ ದೊರೆಯದ್ದರಿಂದ ಮತ್ತೆ ಎರಡು ಬಾರಿ ಇದೇ ಪ್ರಶ್ನೆಯನ್ನು ಕೇಳಿದನಾಗಿ ಭಗವಂತನು 'ವಿಗಮೇಇವಾ' (ಒಂದು ದೃಷ್ಟಿಯಿಂದ ಅಳಿಯುವುದು) ಎಂದು ಮತ್ತು 'ಧುವೇಇವಾ' (ಒಂದು ದೃಷಿಯಿಂದ ಸ್ಥಿರವಾದುದು) ಎಂದು ಉತ್ತರಿಸಿದನು. ಈ ಕೊನೆಯ ಉತ್ತರದಿಂದ ಗೌತಮಗಣಧರನ ಸಂಶಯ ನಿವಾರಣೆಯಾಗಿ ಅವನು ಜೈನಧರ್ಮದ ನಿಜವಾದ ಅಂತರಾರ್ಥವನ್ನು ತಿಳಿದುಕೊಂಡನು. ಈ ರೀತಿಯಿಂದ ಅವನಲ್ಲಿ ಮೂಡಿದ ಜ್ಞಾನವು ಅವನನ್ನು ದ್ವಾದಶಾಂಗೀ ರಚನೆ ಮಾಡಲು ಪ್ರೇರಣೆ ಮಾಡಿತು. ಇದು ಗಣಧರ ನಾಮಕರ್ಮದ ಫಲ. ಮೇಲೆ ಹೇಳಿದ ಗೌತಮಗಣಧರನ ಮೂರು ಪ್ರಶ್ನೆಗಳಲ್ಲಿ ಪ್ರತಿಯೊಂದೂ 'ನಿಸೆಜ್ಜಾ' ನಿಷದ್ಯಾ ಎನ್ನಿಸಿಕೊಂಡಿದೆ. ಒಟ್ಟಿನಲ್ಲಿ ಈ ಮೂರು ಪ್ರಶ್ನೆಗಳು 'ನಿಷದ್ಯಾತ್ರಯ' ಎನ್ನಿಸಿಕೊಂಡಿವೆ. ಇದೇ ರೀತಿಯಾಗಿ ಮೇಲೆ ಹೇಳಿದ ಭಗವಂತನ ಪ್ರತಿಯೊಂದು ಉತ್ತರವೂ 'ಪದ' ಅಥವಾ ಮಾತೃಕಾಪದವೆನ್ನಿಸಿ ಕೊಂಡಿದೆ. ಒಟ್ಟಿನಲ್ಲಿ ಈ ಮೂರು ಉತ್ತರಗಳು 'ತ್ರಿಪದಿ' ಅಥವಾ 'ಪದತ್ರಯೀ' ಎನ್ನಿಸಿಕೊಂಡಿವೆ. ಗೌತಮ ಗಣಧರನಂತೆ ಇತರ ಹತ್ತು ಗಣಧರರಿಗೆ ಸಂಬಂಧಿಸಿದ ನಿಷದ್ಯಾಗಳ ಸಂಖ್ಯೆಗಳ ಬಗ್ಗೆ ಮಾಹಿತಿ ಈಗ ದೊರಕುವುದಿಲ್ಲವಾದರೂ ಈ ಹತ್ತು ಗಣಧರರಲ್ಲಿ ಒಬ್ಬರ ಬಗ್ಗೆ ಹದಿನೈದು ವಿಷದ್ಯಾಗಳ ಉಲ್ಲೇಖ ದೊರೆಯುವುದು. ಗೌತಮಗಣಧರನಂತೆ ಇನ್ನಿತರ ಹತ್ತು ಜನ ಗಣಧರರೂ ದ್ವಾದಶಾಂಗೀ ರಚನೆ

ಮಾಡಿದರು 'ದ್ವಾದಶಾಂಗೀ' ಎಂದರೆ ಹನ್ನೆರಡು ಅಂಗಗಳ ಸಮುದಾಯ. ಕೆಲವರು ಆಚಾರ್ಯರ ಅಭಿಮತದಂತೆ ಈ ಅಂಗಗಳ ರಚನಾಕ್ರಮ ಮುಂದಿನಂತಿದೆ.

೧. ಆಯಾರ, ೨. ಸೂಯಗಡ, ೩. ಥಾಣ, ೪. ಸಮವಾಯು, ೫. ವಾಹಪಣ್ಣತ್ತಿ, ೬.ಣಾಯಾಧಮ್ಮಕಹಾ, ೭. ಉವಾಸಗದಸಾ, ೮. ಅಂತಗಡದಸಾ, ೯. ಅನುತ್ತರೋವ ವಾಯಿಯದಸಾ, ೧೦. ಪಣ್ಹಾವಾಗರಣ, ೧೧. ವಿವಾಗಸುಯ, ೧೨. ದಿಟ್ಠಿವಾಯ.

ಮತ್ತೆ ಕೆಲವರು ಆಚಾರ್ಯರು ಮತದಂತೆ ಗಣಧರನು ಹನ್ನೆರಡನೆಯದಾದ ದೃಷ್ಟಿವಾದದ ಐದು ವಿಭಾಗಗಳಲ್ಲಿ ಒಂದಾದ ಪುವ್ವಗಯದ ಹದಿನಾಲ್ಕು ಪೂರ್ವಗಳನ್ನು ಮೊದಲು ರಚನೆ ಮಾಡಿ ಆ ಬಳಿಕ ಮಿಕ್ಕ ದ್ವಾಂದಶಾಂಗೀ ಭಾಗದ ರಚನೆ ಮಾಡಿದನು.

ದೃಷ್ಟಿವಾದ ಅಂಗದ ವಿಭಾಗಗಳ ಅನುಕ್ರಮವನ್ನು ಹೇಳುವಲ್ಲಿ ಶ್ವೇತಾಂಬರ ಮತ್ತು ದಿಗಂಬರ ಅಮ್ನಾಯಗಳ ಮಧ್ಯೆ ಮುಂದಿನಂತೆ ಮತಭೇದವಿದೆ :

I.೧. ಪರಿಕಮ್ಮ, ೨. ಸುತ್ತ, ೩. ಪುವ್ವಗಯ, ೪. ಅಣುಓಗ, ೫. ಚೂಲಿಯಾ

II. ೧. ಪರಿಕಮ್ಮ, ೨. ಸುತ್ತ, ೩. ಅಣುಓಗ, ೪. ಪುವ್ವಗಯ, ೫. ಚೂಲಿಯಾ ೫

ದಿಗಾಂಬರ ಆಮ್ನಾಯದನುಸಾರ (ಪ್ರಥಮ) ಅನುಯೋಗವು ೩ನೆಯದಾಗಿಯೂ ಪುವ್ವಗಯವು ೪ನೆಯದಾಗಿಯೂ ಇದೆ.

ಆಗಮವು, ಅಂಗಪ್ರವಿಷ್ಟ ಮತ್ತು ಅಂಗಬಾಹ್ಯ ಎಂಬ ಪ್ರಧಾನ ವಿಭಾಗಗಳುಳ್ಳದ್ದಾಗಿದ್ದು ಅಂಗಪ್ರವಿಷ್ಟವು ದ್ವಾದಶ ಅಂಗಗಳನ್ನೊಳಗೊಂಡಿದೆಯೆಂದು ಮತ್ತು ಈ ಹನ್ನೆರಡು ಅಂಗಗಳ ಸಮುದಾಯವನ್ನು ದ್ವಾದಶಾಂಗೀ ಎಂದು ಕರೆಯಲಾಗಿದೆಯೆಂದು ಹಿಂದೆ ಹೇಳಿದೆ.[೬] ಆಗಮಗಳಲ್ಲಿ ಇದನ್ನುಅನೇಕ ಬಾರಿ 'ದ್ವಾದಶಾಂಗ ಗಣಿಪಿಡಗ' (ದ್ವಾದ ಶಾಂಗಗಣಿಪಿಟಕ) ಎಂದೂ ನಿರ್ದೇಶಿಸಲಾಗಿದೆ. ಈ ಆಚಾರಾಂಗವೇ ಮೊದಲಾದ ಹನ್ನೆರಡು ಅಂಗಗಳನ್ನು ಶ್ರುತಪುರುಷನ ೨ ಪಾದಗಳು ೨ ಜಂಘಾ (ಮೊಣಕಾಲು)ಗಳು, ೨ ತೊಡೆಗಳು, ೨ಗಾತ್ರಾರ್ಧಗಳು (ಬೆನ್ನು ಮತ್ತು ಹೊಟ್ಟೆ). ೨ ಬಾಹು (ತೋಳೂ)ಗಳೂ, ೧ ಗ್ರೀವಾ (ಕುತ್ತಿಗೆ) ಮತ್ತು ೧ ಶಿರಸ್ (ತಲೆ)ಎಂಬ ಹನ್ನೆರಡು ಅಂಗಗಳೆಂದು ಸಾರೂಪ್ಯ ಮಾಡಲಾಗಿದೆ.

ಒಂದು ಮತದಂತೆ, ಅಂಗಚಿಪ್ರವಿಷ್ಟ ಎಂದರೆ ದ್ವಾದಶಾಂಗೀಯ ರಚನೆ ಗಣಧರರಿಂದಾಗಿದ್ದು ಅಂಗಬಾಹ್ಯವು ಶ್ರುತಸ್ಥವಿರರಿಂದಾಗಿದೆ. ಆದರೆ ಮತ್ತೊಂದು ಮತದಂತೆ, ಇದು ಗಣಧರರಿಂದಲೂ ಹಾಗೂ ಗಣಧರರಲ್ಲದವ(ಶ್ರುತಸ್ಥವಿರ)ರಿಂದಲೂ ರಚಿತವಾಗಿದೆ.

ಅಂಗಬಾಹ್ಯ ಗ್ರಂಥಗಳನ್ನು ಹೇಳುವಲ್ಲಿ ಮತಭೇದ ಕಂಡು ಬರುತ್ತದೆ. ಇದರಿಂದಾಗಿ ಆಗಮ ಗ್ರಂಥಗಳ ಒಟ್ಟು ಸಂಖ್ಯೆಯನ್ನು ಹೇಳುವಲ್ಲಿಯೂ ಮತಭೇದ ವೇರ್ಪಟ್ಟಿದೆ. ದ್ವಾದಶಾಂಗಗಳಲ್ಲಿ ಹನ್ನೆರಡನೆಯದಾದ ದೃಷ್ಟಿವಾದಾಂಗವು ಕಾಲಾನು ಕ್ರಮದಲ್ಲಿ ಲುಪ್ತವಾಯಿತಾಗಿ ಆಗಮ ಗ್ರಂಥಗಳ ಗಣನೆಯಲ್ಲಿ ಹನ್ನೊಂದು ಅಂಗಗಳು ಮಾತ್ರ ಗಣನೆ ಹೊಂದಿವೆ.

ಮೂರ್ತಿ ಪೂಜಕ ಶ್ವೇತಾಂಬರ ಪಂಥದಲ್ಲಿ ಕೆಲವರು ಈ ಮುಂದೆ ಕಾಣಿಸಿರುವ ೪೫ ಆಗಮ ಗ್ರಂಥಗಳನ್ನು ಮಾನ್ಯ ಮಾಡುತ್ತಾರೆ.

೧೧. ಆಚಾರಾದಿ ಅಂಗಗಳು.

೧೨. ಉಪಾಂಗಗಳು[೭]: ೧. ಉಪಪಾತಿಕ, ೨. ರಾಜಪ್ರಶ್ನೀಯ, ೩. ಜೀವಾಭಿಗಮಾಧ್ಯಯನ, ೪. ಪ್ರಜ್ಞಾಪನಾ, ೫. ಜಂಬೂದ್ವೀಪ ಪ್ರಜ್ಞಪ್ತಿ. ೬. ಚಂದ್ರಪ್ರಜ್ಞಪ್ತಿ. ೭. ಸೂರ್ಯಪ್ರಜ್ಞಪ್ತಿ, ೮. ನಿರಯಾವಲಿಕಾ, ೯. ಕಲ್ಪಾವಾತಂಸಿಕಾ, ೧೦. ಪುಷ್ಪಿಕಾ, ೧೧. ಪುಷ್ಪ ಚೂಲಿಕಾ ಮತ್ತು ೧೨. ವೃಷ್ಣಿದಶಾ.

೬. ಛೇದ ಸೂತ್ರಗಳು : ೧. ಕಪ್ಪ, ೨. ವವಹಾರ, ೩. ನಿಸೀಹ, ೪. ಪಿಂಡನಿಜ್ಜುತ್ತಿ, ೫. ಓಹನಿಜ್ಜುತ್ತಿ ಮತ್ತು ೬. ಮಹಾನಿಸೀಹ.[೮]

೪. ಮೂಲಸೂತ್ರಗಳು: ೧. ಉತ್ತರ ಜ್ಝಯಣ, ೨. ಆವಶ್ಯಕ, ೩. ಪಿಂಡನಿರ್ಯುಕ್ತಿಮತ್ತು ೪. ದಶವೈಕಾಲಿಕ.[೯]

೧೦ ಪ್ರಕೀರ್ಣಕಗಳು :೧. ಚಉಸರಣ ೨. ಆಉರಪಚ್ಚಕ್ಖಾಣ, ೩. ಭಟ್ಟಪರಿಣ್ಣಾ, ೪. ಸಂಥಾರಗ, ೫. ತಂಡುಲವೇಯಾಲಿಯ, ೬. ಚಂದಾವಿಜ್ಝಯ, ೭. ದೇವಿಂದತ್ಥವ, ೮. ಗಣಿವಿಜ್ಜಾ, ೯. ಮಹಾಪಚ್ಚಕ್ಖಾಣ ಮತ್ತು ೧೦. ವೀರತ್ಥವ[೧೦].

೨. ಚೂಲಿಯಾ ಸೂತ್ರಗಳು : ೧. ನಂದಿ ಮತ್ತು ೨. ಅನುಯೋಗದ್ವಾರ ಶ್ವೇತಾಂಬರ ಮೂರ್ತಿ ಪೂಜಕ ಪಂಥದಲ್ಲಿ ಮತ್ತೆ ಕೆಲವರು ಮುಂದೆ ಹೇಳಿರುವ ೮೪ ಆಗಮಗ್ರಂಥಗಳನ್ನು ಮಾನ್ಯಮಾಡುತ್ತಾರೆ.[೧೧]

೧೧ ಅಂಗಗಳು, ೧೨ ಉಪಾಂಗಗಳು, ೫ ಛೇಯಸುತ್ತಗಳು, ೭ ಮೂಲಸುತ್ತಗಳು,೩೦ ಪಇಣ್ಣಗಗಳು, ೨ ಚೂಲಿಯಾ ಸುತ್ತಗಳು, ೧ ಪಕ್ಖಿಯಸುತ್ತ, ೧ ಖಾಮಣಾಸುತ್ತ, ೧ ವಂದಿತ್ತುಸುತ್ತ, ೧ ಇಸಿಭಾಸಿಯ, ೧ ಪಜ್ಜೋಸಣಾಕಪ್ಪ, ೧ ಜೀಯಕಪ್ಪ, ೧ ಜೈಜೀಯಕಪ್ಪ (?), ೧ ಸಡ್ಢಜೀಯಕಪ್ಪ, ೧೦ ನಿಜ್ಜುತ್ತಿಗಳು, ೧ ಪಿಂಡನಿಜ್ಜುತ್ತಿ, ೧ ಸಂಸತ್ತ ನಿಜ್ಜುತ್ತಿ ಮತ್ತು ೧ ವಿಸೇಸಾವಸ್ಸಯಭಾಸ. ಈ ಆಗಮ ಗ್ರಂಥಗಳ ವಿಶೇಷ ಪರಿಚಯಕ್ಕೆ ಶ್ರೀಯುತರಾದ ವ್ಹೆಬರ್, ಎಂ. ವಿಟರ್‌ನಿಟ್ಜ್, ಶುಬ್ರಿಂಗ್, ಹೆಚ್. ಅರ್. ಕಪಾಡಿಯಾ, ವಿದ್ವಾನ್ ಡಾ. ಹೀರಾಲಾಲ ಜೈನ್ (ಭಾರತೀಯ ಸಂಸ್ಕೃತಿಮೇ ಜೈನ ಧರ್ಮಾಕಾಯೋದಾನ್' ಕನ್ನಡ ಅನುವಾದ 'ಭಾರತೀಯ ಸಂಸ್ಕೃತಿಗೆ' ಜೈನ ಧರ್ಮದ ಕೊಡುಗೆ). ಮುಂತಾದವರ ಕೃತಿಗಳ ಅವಲೋಕನ ಮಾಡಬಹುದು.

ಆಗಮ ಪುನರುದ್ಧರಣ (ರಿಡ್ಯಾಕ್ಷನ್)

ಭಗವಾನ್ ಮಹಾವೀರನಲ್ಲಿ ಪ್ರಶ್ನೆ ಮಾಡಿ ತಮ್ಮ ತಮ್ಮ ಸಂಶಯಗಳನ್ನು ನಿವಾರಣೆ ಮಾಡಿಕೊಂಡ ಇಂದ್ರಭೂತಿ ಗೌತಮರೇ ಮೊದಲಾದ ಹನ್ನೊಂದು ಜನರು ಗಣಧರರಾಗಿ ನಿಯೋಜಿತರಾದರೆಂದು ಮತ್ತು ಇವರೆಲ್ಲರೂ ದ್ವಾದಶಾಂಗಿಯನ್ನು ರಚಿಸಿದರೆಂದು ಹಿಂದೆ ಹೇಳೀದೆ. ಭಗವಾನ್ ಮಹಾವೀರನ ಹನ್ನೊಂದು ಜನ ಗಣಧರರಲ್ಲಿ ಸುಧರ್ಮ ಸ್ವಾಮಿಯವರು ಮಾತ್ರ ಇತರರೆಲ್ಲರಿಗಿಂತ ದೀರ್ಘಕಾಲ ಜೀವಿಸಿದ್ದರು. ಭಗವಾನ್ ಮಹಾವೀರನ ನಿರ್ವಾಣಾನಂತರ ಸುಧರ್ಮಸ್ವಾಮಿಯವರ ಗಣ ಮಾತ್ರ ಮುಂದುವರಿಯಿತು. ಆದ್ದರಿಂದ ಇತರ ಗಣಧರರ ದ್ವಾದಶಾಂಗಿಗಳು, ಅವರು ಅನಶನ (ಆಹಾರವರ್ಜನೆ) ಮಾಡಿ ತಮ್ಮ ತಮ್ಮ ಗಣಗಳನ್ನು ಸುಧರ್ಮ ಸ್ವಾಮಿಯವರಿಗೆ ಒಪ್ಪಿಸಿದಾಗಲೇ, ಕೊನೆಗೊಂಡವು[೧೨]. ಸುಧರ್ಮಸ್ವಾಮಿಯವರು ತಮ್ಮ ಐವತ್ತನೇ ವಯಸ್ಸಿನಲ್ಲಿ ವ್ರತಸ್ವೀಕಾರ ಮಾಡಿದರು. ಬಳಿಕ ೩೦ ವರ್ಷಕಾಲ ಚರಮಾರ್ಹತ (ಭ. ಮಹಾವೀರ)ಮ ಶುಶ್ರೂಷೆ ಮಾಡಿದರು. ಭಗವಾನ್ ಮಹಾವೀರನು ಮೋಕ್ಷಹೊಂದಿದ ಅನಂತರ,

ಗಣಧರವರನಾದ ಸುಧರ್ಮರು ಛದ್ಮಸ್ಥಸ್ಥಿತಿಯಲ್ಲಿ ೧೨ ವರ್ಷಗಳ ಕಾಲ ತೀರ್ಥ ಪ್ರವರ್ತನೆ ಮಾಡಿದರು. ಅನಂತರ ತಮ್ಮ ೯೨ನೇ ವಯಸ್ಸಿನಲ್ಲಿ ಕೇವಲಜ್ಞಾನ ಹೊಂದಿದರು. ಆ ಬಳಿಕ ೮ ವರ್ಷಕಾಲ ವಿಹಾರ ನಡೆಸಿ ಭವ್ಯರಿಗೆ ಬೋಧೆಮಾಡಿದರು, ೧೦೦ ವರ್ಷ ತುಂಬಿದ ವಯೋಮಾನದವರಾಗಿರುವಲ್ಲಿ ನಿರ್ಮಾಣ ಸಮಯ ಸಂಘಟಿಸಿರಲು ಜಂಬೂಸ್ವಾಮಿಯವರನ್ನು ಗಣಾಧಿ ಪರನ್ನಾಗಿ ನಿಯೋಜಿಸಿದರು. ಜಂಬೂಸ್ವಾಮಿಯವರು ತಪ್ಪಸನ್ನಾಚರಿಸಿ ಕೇವಲಜ್ಞಾನ ಸಂಪನ್ನರಾಗಿ ಭಾವ್ಯ ಭವಿಕರಿಗೆ ಬೋಧೆ ಮಾಡಿದರು. ಭಗವಾನ್ ಮಹಾವೀರನ ಮೋಕ್ಷ ದಿನದಿಂದ ೬೪ ವರ್ಷ ಕಳೆಯುವಲ್ಲಿ ಜಂಬೂಸ್ವಾಮಿಯವರು. ಶಿಷ್ಯನಾದ ಕಾತ್ಯಾಯನ ಪ್ರಭವಸ್ವಾಮಿಯವರನ್ನು ತಮ್ಮ ಸ್ಥಾನದಲ್ಲಿ ನಿಯೋಜಿಸಿ ನಿರ್ವಾಣ ಹೊಂದಿದರು.[೧೩] ಜಂಬೂಸ್ವಾಮಿಯವರ ನಿರ್ವಾಣದೊಡನೆ ಮನಃ ಪರ್ಯಾಯ ಜ್ಞಾನ, ಪರಮಾವಧಿ ಜ್ಞಾನ, ಆಹಾರಕ ಶರೀರ ಲಬ್ಧಿ, ಜಿನಕಲ್ಪ, ಪುಲಾಕ ಲಬ್ಧಿ ಕ್ಷಪಕಶ್ರೇಣ್ಯಾರೋಹಣ, ಮೇಲಿನ ಶ್ರೇಣಿಯ ಮೂರು ಸಂಯಮಗಳು ಮತ್ತು ಕೇವಲಿ ಸಿದ್ಧಿಗಳು ಕೊನೆ ಹೊಂದಿದವು. ಮುಂದೆ ಋದ್ಧಿಗಳು ಕುಂದುಕೊಳ್ಳುತ್ತಾ ನಡೆದವು.[೧೪]

ಜಂಬೂಸ್ವಾಮಿಯವರು ಅಂತಿಮಕೇವಲಿ ಎಂಬುದು ಶ್ವೇತಾಂಬರ ಮತ್ತು ದಿಗಂಬರ ಪಂಥಗಳೆರಡರಲ್ಲಿಯೂ ಸಂಮ್ಮತವಾಗಿರುವ ಸಂಗತಿ. ಜಂಬೂಸ್ವಾಮಿಯವರ ಆನಂತರ ದ್ವಾದಶಾಂಗ ಶ್ರುತಧರರ ಅನುಕ್ರಮವನ್ನು ಎರಡೂ ಪಂಥಗಳಲ್ಲಿ ಹೇಳಲಾಗಿದೆಯಾದರೂ ಇವರುಗಳ ಹೆಸರುಗಳನ್ನು ಹೇಳುವಲ್ಲಿ, ಭದ್ರಬಾಹುಸ್ವಾಮಿಯವರೊಬ್ಬರ ಹೊರತಾಗಿ ಮಿಕ್ಕೆಲ್ಲರ ಬಗ್ಗೆ ಒಮ್ಮತವಿಲ್ಲ. ಶ್ವೇತಾಂಬರ ಪಂಥದನುಗುಣವಾಗಿ ದ್ವಾದಶಾಂಗ ಶ್ರುತಧರರ ಅನುಕ್ರಮವು ಮುಂದಿನಂತಿದೆ.[೧೫]

೧. ಪ್ರಭವಸ್ವಾಮಿ–ಆಚಾರ್ಯರಾಗಿ ೧೧ ವರ್ಷ–ಮರಣ, ವೀ. ನಿ. ಸಂ. ೭೫ರಲ್ಲಿ.

೨. ಶಯ್ಯಂಭವ ಸೂರಿ– ಆಚಾರ್ಯರಾಗಿ ೨೩ ವರ್ಷ, ಮರಣ– ವೀ. ನಿ. ಸ, ೯೮ ರಲ್ಲಿ ಇವರು ತಮ್ಮ ಮಗ ಮನಕನಿಗಾಗಿ ದಶವೈಕಾಲಿಕ ಸೂತ್ರ ರಚನೆ ಮಾಡಿದರು.

೩. ಯಶೋಭದ್ರ ಸೂರಿ– ಆಚಾರ್ಯರಾಗಿ ೫೦ ವರ್ಷ, ಮರಣ–ವೀ, ನಿ. ಸಂ. ೧೪೮ ಇವರಿಗೆ ಸಂಭೂತಿವಿಜಯ ಮತ್ತು ಭದ್ರಬಾಹು ಎಂಬಿಬ್ಬರು ಪ್ರಧಾನ ಶಿಷ್ಯರು, ಇವರಿಬ್ಬರನ್ನು ಜೋಡಿಯಾಗಿ ತಮ್ಮ ಅನಂತರದ ಆಚಾರ್ಯರನ್ನಾಗಿ ನಿಯೋಜಿಸಿದರು.

೪. ಸಂಭೂತಿ ವಿಜಯಸೂರಿ,– ಆಚಾರ್ಯರಾಗಿ ೮ ವರ್ಷ, ಮರಣ– ವೀ. ನಿ. ಸಂ. ೧೫೬ ರಲ್ಲಿ.

೫. ಭದ್ರಬಾಹುಸ್ವಾಮಿ ಆಚಾರ್ಯರಾಗಿ ೧೪ ವರ್ಷ, ಮರಣ, ವೀ. ನಿ. ಸಂ. ೧೭೦ ರಲ್ಲಿ ಉಪಸರ್ಗಹರಸ್ತೋತ್ರ, ಕಲ್ಪಸೂತ್ರ, ಮತ್ತು ಆವಶ್ಯಕ, ದಶವೈಕಾಲಿಕಾದಿ ಹತ್ತು ಶಾಸ್ತ್ರಗಳಿಗೆ ನಿರ್ಯುಕ್ತಿಗಳು–ಇವುಗಳ ರಚನಾಕಾರರು.

೬. ಸ್ಥೂಲಭದ್ರಸೂರಿ–ಆಚಾರ್ಯರಾಗಿ ೪೯ ವರ್ಷ, ಮರಣ ವೀ. ನಿ. ಸಂ. ೨೧೯, ಇವರು ಸಂಭೂತಿವಿಜಯರ ಶಿಷ್ಯ, ೯ನೇ ನಂದರಾಜನ ಮಂತ್ರಿ ಶಕಟಾಲನ (ಅಥವಾ ಶಕಡಾಲನ) ಮಗ, ಇವರ ತಾಯಿ ಲಾಚ್ಛಲದೇವಿ ಅಥವಾ ಲಕ್ಷ್ಮಾವತಿ. ವೇಶ್ಯೆಕೋಶಾಳನ್ನು ಜಿನಧರ್ಮದಲ್ಲಿ ಶ್ರದ್ಧೆಯುಳ್ಳವಳನ್ನಾಗಿ ಪರಿವರ್ತಿಸಿದರು. ೧೪ ಪೂರ್ವಗಳ ಜ್ಞಾನ ಹೊಂದಿದ್ದವರಲ್ಲಿ ಇವರು ಕೊನೆಯವರಾದರೂ ಎರಡು ವಸ್ತುಗಳೆಂಬ ವಿಭಾಗಗಳಿಂದ ಕಡಿಮೆಯಾದ ದಶ (೧೦) ಪೂರ್ವಗಳನ್ನು ಅರ್ಥಸಹಿತ ಸೂತ್ರಾಧ್ಯನ ಮಾಡಿದ್ದರು. ಮಿಕ್ಕ ನಾಲ್ಕು (೪) ಪೂರ್ವಗಳ ಸೂತ್ರ ಮಾತ್ರ ಅಧ್ಯಯನ ಮಡಿದ್ದರು, ಅರ್ಥತಿಳಿದಿರಲಿಲ್ಲ. ಇದು ವೃದ್ಧಪ್ರವಾದ– ಖರತರಗಚ್ಛ ಪಟ್ಟಾವಲಿ. ಈ ಹೇಳಿಕೆಯಿಂದ ತಪಾಗಚ್ಛ ಪಟ್ಟಾವಲಿಯ ಹೇಳೀಕೆಯಲ್ಲಿ ಸ್ವಲ್ಪ ವ್ಯತ್ಯಾಸವಿದೆ. ಇದರ ಪ್ರಕಾರ ಇವರು ಆಚಾರ್ಯರಾಗಿ ೪೫ ವರ್ಷಕಾಲ ಇದ್ದು ವೀ. ನಿ. ಸಂ. ೨೧೫ರಲ್ಲಿ ದಿವಂಗತರಾಗಿದ್ದಾರೆ. ಇದೇ ವರ್ಷದಲ್ಲಿ ೯ನೇ ನಂದನು ಚಂದ್ರಗುಪ್ತನಿಂದ ಹತನಾದನು (ಅ.ಟಿ.೩೫)

ಚತುರ್ದಶಪೂರ್ವಗಳಲ್ಲಿ ಕೊನೆಯ ನಾಲ್ಕು ಪೂರ್ವಗಳ ವಿಚ್ಛಿತ್ತಿ ಮತ್ತು ಮೊದಲನೆ ಬಾರಿಯದಾಗಿ ಆಗಮದ ಪುನರುದ್ಧರಣವಾದ ಐತಿಹ್ಯವು ಭದ್ರಬಾಹುಸ್ವಾಮಿಯವರ ಮತ್ತು ಸ್ಥೂಲ ಭದ್ರಸ್ವಾಮಿಯವರ ಜೀವನೈತಿಹ್ಯಗಳೊಡನೆ ಸಂಗತವಾಗಿರುವುದರಿಂದ ಈ ಐತಿಹ್ಯ ಪ್ರಸಂಗಗಳನ್ನು ಇಲ್ಲಿ ಹೇಳಬೇಕಾಗಿದೆ.

[೧೬] ಶ್ರುತಕೇವಲಿ ಭದ್ರಬಾಹು ಸ್ವಾಮಿಯವರು ದಕ್ಷಿಣ ಭಾರತದೇಶದ ಪ್ರತಿಷ್ಠಾನ ಪುರದ ಬ್ರಾಹ್ಮಣ ಮನೆತನದವರು. ಪಟುಮತಿಗಳಾದ ಇವರು ವ್ಯಾಕರಣ, ತರ್ಕ, ನ್ಯಾಯ, ಧರ್ಮಾಶಾಸ್ತ್ರ, ಜ್ಯೋತಿಷ್ಯವೇ ಮುಂತಾದ ಶಾಸ್ತ್ರ ಸಾಹಿತ್ಯದ ಅಧ್ಯಯನ ಮಾಡಿ ಪಂಡಿತೋತ್ತ್ರಮರೆಂದು ಖ್ಯಾತರಾದರು. ಪುಣ್ಯೋದಯದಿಂದ ಶ್ರುತ ಕೇವಲಿ ಯಶೋಭದ್ರಸ್ವಾಮಿಯವರ ದರ್ಶನ ಮಾಡಿ ನಿಜವಾದ ಧರ್ಮ ಸ್ವರೂಪವನ್ನು ಮನ ಗಂಡರು, ಮತ್ತು ಅವರಿಂದ ದೀಕ್ಷೆ ಹೊಂದಿ ತಮ್ಮ ಅಸಾಧಾರಣ ಧೀಶಕ್ತಿಯ ಸಾಮರ್ಥ್ಯದಿಂದ ಚತುರ್ದಶ ಪೂರ್ವಗಳಲ್ಲಿ ಪಾರಗಾಮಿಯಾದರು. ಅಲ್ಲದೆ ಜ್ಯೋತಿಷ ಮತ್ತು ಖಗೋಳ ವಿಷಯಗಳಲ್ಲಿ ವಿಶೇಷ ಪರಿಣತಿ ಹೊಂದಿದರು.

ಭದ್ರಬಾಹುಸ್ವಾಮಿಯವರಿಗೆ ವರಾಹಮಹಿರ ಎಂಬ ಸಹೋದರರಿದ್ದರು. ಇವರೂ ಭಾಗವತೀದೀಕ್ಷೆ ಕೈಗೊಂಡಿದ್ದರು. ಭದ್ರಬಾಹುಸ್ವಾಮಿಯವರು ಗುರುಗಳಿಂದ ಆಚಾರ್ಯರಾಗಿ ಹಾಗೂ ಸಂಘಾಧಿಪತಿಯಾಗಿ ನಿಯೋಜಿತರಾದುದನ್ನು ಕಂಡು ವರಾಹಮಹಿರರು ರೋಷಗೊಂಡು ಯತಿ ಜೀವನವನ್ನು ತೊರೆದು ತಮ್ಮ ಜ್ಯೋತಿಷ ಜ್ಞಾನದ ಉಪಯೋಗ ಪಡೆದು ಭವಿಷ್ಯವನ್ನು ಹೇಳುವುದು ಜಾತಕಗಳನ್ನು ಬರೆಯುವುದು ಇವೇ ಮುಂತಾದ ವೃತ್ತಿಯನ್ನುವಲಂಬಿಸಿ ಜೀವಿಸಲಾರಂಭಿಸಿದರು. ಈ ವೃತ್ತಿಯಲ್ಲಿ ಇವರ ಬಗ್ಗೆ ಜನಾದರಣೆ ಹೆಚ್ಚಿದಂತೆಲ್ಲಾ ಜೈನಸಾಧುಗಳ ಬಗ್ಗೆ ಇವರ ದ್ವೇಷ ಭಾವ ಹೆಚ್ಚುತ್ತಾ ಹೋಯಿತು ಜೈನ ಸಾಧುಗಳನ್ನು ಮತ್ತು ಜೈನ ಧರ್ಮವನ್ನು ನಿಂದಿಸುವ ಪ್ರವೃತ್ತಿ ಇವರಲ್ಲಿ ಬೆಳೆಯಿತು. ಇವರ ಜ್ಯೋತಿಷ ಜ್ಞಾನದಲ್ಲಿ ಜನಕ್ಕೆ ವಿಶೇಷ ನಂಬಿಕೆ ಹುಟ್ಟಿತಾಗಿ ಇವರು ಎಲ್ಲೆಡೆಯೂ ಪ್ರಸಿದ್ಧಿಪಡೆದರು. ಕಾಲಾನುಕ್ರಮದಲ್ಲಿ ಇವರು ನಂದರಾಜನ ಆಸ್ಥಾನದಲ್ಲಿ ರಾಜಪುರೋಹಿತ ಸ್ಥಾನವನ್ನಲಂಕರಿಸಿ ಮಹದ್ಗೌರವ ಭಾಜನರಾದರು. ಇದರೊಡನೆ ಜೈನಧರ್ಮವನ್ನು ಕುರಿತು ಇವರ ದ್ವೇಷಭಾವನೆ ಮತ್ತೂ ವರ್ಧಿಸಿತು.

ನಂದರಾಜನಿಗೆ ದೀರ್ಘಕಾಲದ ಅನಂತರದಲ್ಲಿ ಸುತನೊಬ್ಬನು ಜನಿಸಿದನು. ಆ ಶಿಶುವಿನ ಜಾತಕವನ್ನು ವರಾಹಮಹಿರರು ಬರೆದು ಮಗುವು ಶತಾಯುಷಿಯಾಗಿರುವನೆಂದು ಭವಿಷ್ಯ ಹೇಳಿದರು. ರಾಜನು ಅಪಾರ ಸಂತೋಷ ಹೊಂದಿದನು. ರಾಜನ ವೃದ್ಧಾಪ್ಯ ವಯಸ್ಸಿನಲ್ಲಿ ಮಗುವು ಜನಿಸಿದ್ದುದರಿದ ಮತ್ತು ಆ ಮಗುವು ಶತಾಯುಷಿಯಾಗಿರುವನೆಂಬುದರ ಕಾರಣದಿಂದ ಅನೇಕ ಜನರು

ಕಾಣಿಕೆಗಳೊಡನೆ ರಾಜನಲ್ಲಿಗೆ ಹೋಗಿ ತಮ್ಮ ಹರ್ಷವ್ಯಕ್ತಪಡಿಸಿದರು. ಈಸಂದರ್ಭವನ್ನು ಉಪಯೋಗಿಸಿಕೊಂಡು ವರಾಹನಿಹಿರರು ಜೈನ ಸಂಘದ ಮೇಲೆ ತನ್ನ ಹಗೆ ತೀರಿಸಿಕೊಳ್ಳುವುದಕ್ಕಾಗಿ ರಾಜನಿಗೆ 'ನಗರದ ಜನರೆಲ್ಲರೂ ನಿನ್ನ ಸುತನ ಜನನದಿಂದ ಹರ್ಷಿತರಾಗಿ ಕಾಣಿಕೆಗಳೊಡನೆಬಂದು ನಿನ್ನ ಸಂದರ್ಶನ ಪಡೆದನು, ಆದರೆ ಜೈನಸಾಧು ಭದ್ರಬಾಹು ಮಾತ್ರ ಬರಲೇ ಇಲ್ಲ, ಇದು ತಮಗೆ ತಿಳಿಯದಿರಬಹುದು' ಎಂದು ಹೇಳಿದರು. ಕೂಡಲೆ ರಾಜನು ತನ್ನ ಪ್ರಧಾನ ಮಂತ್ರಿ ಶಕಡಾಲನಿಗೆ ಈ ಬಗ್ಗೆ ವಿಚಾರಮಾಡುವಂತೆ ತಿಳಿಸಿದನು. ಶಕಡಾಲನು ಈ ವಿಷಾಯವನ್ನು ಭದ್ರಬಾಹುಸ್ವಾಮಿಯವರಲ್ಲಿ ಪ್ರಸ್ತಾಪ ಮಾಡಿದಾಗ ಅವರು ವಿಷಯವೇನೆಂಬುದನ್ನು ವಿಚಾರಮಾಡಿ ಚಿಂತಿಸಿ ತಮ್ಮ ವಿಷಯವಾಗಿ ರಾಜನ ಮನಸ್ಸನ್ನು ದೂಷಿತಗೊಳಿಸಲು ಯತ್ನಿಸಿರುವುದನ್ನು ಊಹಿಸಿದರು. ಅನಂತರ ಶಾಂತ ಚಿತ್ತದಿಂದ ಮಂತ್ರಿಗೆ, 'ನಾನು ಒಂದೇ ಪ್ರಸಂಗಕ್ಕಾಗಿ ಎರಡು ಬಾರಿ ಬರಬೇಕೆಕೆ? ಆ ಶಿಶುವು ಬೆಕ್ಕಿನ ಮುಖಾಂತರ ಏಳನೇ ದಿನದಲ್ಲಿ ಮರಣ ಹೊಂದುವುದು ; ಸಾಂತ್ವನದ ಹಿತನುಡಿ ಹೇಳುವುದಕ್ಕಾಗಿ ನಾನು ಆಗ ಬರಬೇಕಾಗಿದೆ' ಎಂದು ಹೇಳಿದರು. ಶಕಡಾಲ ಮಂತ್ರಿಯೂ ಆ ವಿಷಯವನ್ನು ರಾಜನಿಗೆ ತಿಳಿಸಿದನು. ವರಾಹ ಮಿಹಿರರ ಮತ್ತು ಭದ್ರಬಾಹುಸ್ವಾಮಿಯವರ ಭವಿಷ್ಯವಾಣಿಗಳಲ್ಲಿ ಕಂಡು ಬಂದ ಪರಸ್ಪರ ವಿರೋಧಾಂಶಗಳನ್ನು ಕಂಡು ರಾಜನಿಗೆ ಅಚ್ಚರಿಯೂ ಕುತೂಹಲವೂ ಉಂಟಾಯಿತು. ಭದ್ರಬಾಹುಸ್ವಾಮಿಯವರ ಭವಿಷ್ಯವಾಣಿಯನ್ನು ಸುಳ್ಳಾಗಿಸಲೋಸುಗ ರಾಜನು ಮಗುವಿನ ರಕ್ಷಣೆಗೆ ಎಲ್ಲ ರೀತಿಯದಾದ ವ್ಯವಸ್ಥೆ ಮಾಡಿದನು. ನಿರ್ದಿಷ್ಟವಾದ ಏಳನೆಯ ದಿನದಂದು ದಾದಿಯು ಮಗುವಿಗೆ ಸ್ತನ್ಯಪಾನ ಮಾಡಿಸುತ್ತಿರಲು ಅಗಳಿಯೊಂದು ಅಕಸ್ಮಾತ್ತಾಗಿ ತಲೆಯ ಮೇಲೆ ಬಿದ್ದಕಾರಣ ಮಗುವು ಸಾವನ್ನಪ್ಪಿತು. ಭದ್ರಬಾಹುಸ್ವಾಮಿಯವರು ಸಂತ್ವನ ಹೇಳಲೋಸುಗ ರಾಜನ ಬಳಿ ಹೋದರು. ರಾಜನು ಭದ್ರಬಾಹುಸ್ವಾಮಿಯವರ ಸಾಂತ್ವನದ ಹಿತನುಡಿಗಳನ್ನು ಕೇಳಿ ಬಳಿಕ 'ತಾವು ನುಡಿದಂತೆ ಮಗುವು ಏಳನೇ ದಿನದಲ್ಲಿ ಮರಣ ಹೊಂದಿರುವುದು ನಿಜ. ಆದರೆ ಅದು ಬೆಕ್ಕಿನ ಮುಖಾಂತರವಲ್ಲ, ಆದ್ದರಿಂದ ನಿಮ್ಮ ಹೇಳಿಕೆ ಸುಳ್ಳಾಯಿತಲ್ಲಾ' ಎಂದನು. ಸೂಕ್ಷ್ಮವಾದ ಪರಿಶೀಲನೆಯ ಅನಂತರ ಅಗುಳಿಯ ಮೇಲೆ ಬೆಕ್ಕಿನಿಂದಾದ ಉಗುರಿನ ಗುರುತುಗಳು ಕಂಡು ಬಂದುವಾಗಿ ಭದ್ರಬಾಹುಸ್ವಾಮಿಯವರ ಭವಿಷ್ಯ ವಾಣೀಯು ಪೂರ್ಣ ರೀತಿಯಿಂದ ನಿಜವಾದುದಾಗಿಯೆಂದು

ಮನಗಾಣಲಾಯಿತು. ಈ ಘಟನೆಯಿಂದ ವರಾಹಮಿಹಿರರು ಅಪಾರ ಲಜ್ಜಿತರಾದರು, ಅವರ ಹೆಮ್ಮೆ ಅಳಿಯಿತು, ಜ್ಯೋತಿಷ್ಯ ಶಾಸ್ತ್ರಗ್ರಂಥಗಳ ಬಗ್ಗೆ ಅವರು ತಿರಸ್ಕಾರ ಭಾವ ತಳೆದು ಅವೆಲ್ಲವನ್ನೂ ಆಳವಾದ ನೀರಿನಲ್ಲೆಸೆಯಲು ತೀರ್ಮಾನಿಸಿದರು. ಇದನ್ನು ತಿಳಿದ ಭದ್ರಬಾಹುಸ್ವಾಮಿಯವರು ಹಾಗೆ ಮಾಡದಂತೆ ತಡೆದರು. ಇಷ್ಟಾದರೂ ಜೈನ ಧರ್ಮದ ಬಗ್ಗೆ ಮತ್ತು ಭದ್ರಬಾಹು ಸ್ವಾಮಿಯವರ ಬಗ್ಗೆ ವರಾಹಮಿಹಿರರ ವಿದ್ವೇಷಭಾವ ಶಮನಗೊಳ್ಳದೆ ಮತ್ತೂ ಬೆಳೆಯಿತು. ಸ್ವಲ್ಪ ಕಾಲಾನಂತರ ವರಾಹಮೀಹಿರರು ಮರಣ ಹೊಂದಿ ವ್ಯಂತರ ದೇವನಾಗಿ ಜನಿಸಿದರು. ಪೂರ್ವಭವದ ವಿದ್ವೇಷ ಭಾವವು ಈ ವ್ಯಂತರ ದೇವನಲ್ಲಿ ಪುನಃ ಜಾಗೃತಗೊಂಡಿತಾಗಿ ಅವನು ಜೈನ ಸಂಘಕ್ಕೆ ಪಿಡುಗನ್ನುಂಟು ಮಾಡಿದನು. ಶ್ರೀ ಸಂಘದ ಪ್ರಾರ್ಥನೆಯಮೇರೆಗೆ ಶ್ರುತಕೇವಲಿ ಭದ್ರಬಾಹುಸ್ವಾಮಿಯವರು 'ಉವಸಗ್ಗಹರಂ' ಸ್ತೋತ್ರ ರಚಿಸಿದರು. ಈ ಸ್ತೋತ್ರದ ಶ್ರವಣ, ಪಠಣ, ಧ್ಯಾನಾದಿಗಳಿಂದ ಪಿಡುಗು ಪರಿಹಾರವಾಯಿತು.

ನವಮನಂದರಾಜನನ್ನು ಕೊಂದು ರಾಜ್ಯದಲ್ಲಿ ಅಧಿಷ್ಠಿತನಾದ ಚಂದ್ರಗುಪ್ತನು ಭದ್ರಬಾಹುಸ್ವಾಮಿಯವರ ಧೀಶಕ್ತಿ ಮತ್ತು ಪಾಂಡಿತ್ಯಗಳನ್ನು ಕಂಡು ಪ್ರಭಾವಿತನಾದನು. ಒಂದು ರಾತ್ರಿ ಚಂದ್ರುಗುಪ್ತನು ಹದಿನಾರು ಸ್ವಪ್ನಗಳನ್ನು ಕಂಡು ಭವಿಷ್ಯದಲ್ಲಿ ದಾರುಣದುಃಖ ಸ್ಥಿತಿಯು ಒದಗಿಬರಲಿದೆಯೆಂಬುದನ್ನು ಭದ್ರಬಾಹುಸ್ವಾಮಿಯವರಿಂದ ತಿಳಿದು ವ್ಯಥೆಗೊಂಡನು. ಇವನು ತನ್ನ ಮಗನಿಗೆ ರಾಜ್ಯಭಾರ ವಹಿಸಿ ಮುನಿದೀಕ್ಷೆ ಪಡೆದನೆಂದು ಕೆಲವರು ಹೇಳಿದ್ದಾರೆ.

ಹನ್ನೆರಡು ವರ್ಷಕಾಲ ದುರ್ಭಿಕ್ಷವು ಸಂಘಟಿಸಲಿರುವುದನ್ನು ತಿಳಿದ ಭದ್ರಬಾಹು ಸ್ವಾಮಿಯವರು ಮಹಾಪ್ರಾಣಧ್ಯಾನದ ಆಚರಣೆಗಾಗಿ ನೇಪಾಲಕ್ಕೆ ಹೋದರು. ಬರಗಾಲವುಂಟಾದ ಪರಿಣಾಮವಾಗಿ ಆಹಾರ ಪಾನೀಯಗಳು ದುರ್ಲಭವಾದುವು. ಸಾಧುಗಳಲ್ಲಿ ಕೆಲವರು ದಕ್ಷಿಣದೇಶಕ್ಕೆ ಹೋದರು. (ಸಮುದ್ರತೀರಕ್ಕೆ ಹೋದರು. ಎಂದು ಹೇಮಚಂದ್ರಾಚಾರ್ಯರು ಹೇಳಿದ್ದಾರೆ. ಪರಿಶಿಷ್ಟಪರ್ವ–೫೫) ದುರ್ಭಿಕ್ಷದ ದುಷ್ಕರ ಪರಿಣಾಮವೆಂದರೆ ಸಾಧುಗಳು ಆಗಮಗ್ರಂಥ ಪಾಠಗಳನ್ನು ಮರೆತರು[೧೬]. ಈ ವಿಷಯವನ್ನು ಕಾಪಡಿಯಾ ಅವರು ಮುಂದಿನಂತೆ ಹೇಳಿದ್ದಾರೆ.[೧೭] "ಭದ್ರಬಾಹುಸ್ವಾಮಿಯವರ ಸಮಯದಲ್ಲಿ ಮಗಧರಾಜ್ಯದಲ್ಲಿ ದ್ವಾದಶ ವರ್ಷಗಳ ದುಭಿಕ್ಷದ

ವಿಪತ್ತಿಯುಂಟಾಯಿತು. ಸಾಧುಗಳು ಬಾಗಿಲಿಂದ ಬಾಗಿಲಿಗೆ ಹೋಗಿ ಭಿಕ್ಷೆ ತಂದರೂ ಸಾಕಾಗುವಷ್ಟು ಆಹಾರ ದೊರೆಯುತ್ತಿರಲಿಲ್ಲ. ಇದರ ಪರಿಣಾಮವಾಗಿ ಅವರಲ್ಲಿ ದಿಟ್ಠಿವಾಯ (ಹನ್ನೆರಡನೆ ಅಂಗ) ಮರವೆಯಾಯಿತು. ದುರ್ಭಿಕ್ಷವು ಕಳೆದು ಅನಂತರ ಸುಬಿಕ್ಷವುಂಟಾದ ಅನಂತರ ಸಾಧು ಸಮ್ಮೇಳನ ನಡೆಯಿತು. ಈ ಸಮ್ಮೇಳನದಲ್ಲಿ ಪ್ರತಿಯೊಬ್ಬ ಸಾಧುವಿನಿ ನೆನಪಿನಲ್ಲಿ ಉಳಿದಿದ್ದ ಪವಿತ್ರ ಆಗಮಜ್ಞಾನವನ್ನು ಸಂಕಲಮಾಡಿ ಹನ್ನೊಂದು ಅಂಗ ಶಾಸ್ತ್ರಗಳ ಪೂರ್ಣಪಾಠ ರೂಪಿಸಲಾಯಿತು.” (ಇದೇ ರೀತಿಯಾಗಿ ಶ್ರಮಣಭಗವಾನ್ ಮಹಾವೀರದಲ್ಲಿಯೂ (ಪು. ಪಂ. ೨೩೨) ಹೇಳಿದೆ) ಹನ್ನೆರಡನೆಯದಾದ ದೃಷ್ಟಿವಾದಾಂಗವು ಮರೆವಾಗಿರುವುದು ಈ ಸಮ್ಮೇಳನದಲ್ಲಿ ಗಮನಕ್ಕೆ ಬಂದಿತು. ಆಗ ನೇಪಾಲದಲ್ಲಿ ಮಹಾಪ್ರಾಣಧ್ಯಾನನಿರತರಾಗಿದ್ದ ಭದ್ರಬಾಹುಸ್ವಾಮಿಯವರೊಬ್ಬರು ಮಾತ್ರ ದಿಟ್ಠಿವಾಯವನ್ನು ತಿಳಿದವರಾಗಿದ್ದು ಉಪದೇಶ ಕೊಡಬಲ್ಲವರಾಗಿದ್ದುದರಿಂದ ಅವರ ಬಳಿಗೆ ಶ್ರೀಸಂಘವು ಸಂಘಾಟಕ ಮುನಿಗಳೀರ್ವರನ್ನು ಕಳುಹಿತು. ದುರ್ಭಿಕ್ಷ ಕಾಲದಲ್ಲಿ ಮಹಾಪ್ರಾಣಧ್ಯಾನವನ್ನಾಚರಿಸಲಾಗದೆ ಇದೀಗ ಈ ಧ್ಯಾನಾಚರಣೆಯನ್ನು ಕೈಗೊಳ್ಳಲಾಗಿದೆಯೆಂಬ ಕಾರಣವನ್ನು ಮುಂದಿಟ್ಟು ದಿಟ್ಠಿವಾಯವನ್ನು ಬೋಧಿಸಲೊಪ್ಪಲಿಲ್ಲ. ಈ ವಿಷಯವನ್ನು ಅಲ್ಲಿಂದ ಹಿಂದಿರುಗಿ ಬಂದ ಸಂಘಾಟಕ ಮುನಿದ್ವಯದಿಂದ ತಿಳಿದ ಶ್ರೀ ಸಂಘವು ಬೇರೆ ಸಂಘಾಟಕ ಮುನಿಯುಗಲವನ್ನು ಭದ್ರಬಾಹು ಸ್ವಾಮಿಯವರ ಬಳಿ ಹೋಗಲು ನಿಯೋಜಿಸಿ 'ಸಂಘದ ಅಪ್ಪಣೆಯನ್ನು ಮೀರಿದವರಿಗೆ ಯಾವ ಶಿಕ್ಷೆ ವಿಧಿಸಬೇಕು ಎಂದು ಪ್ರಶ್ನಿಸಿ ಅವರಿಂದ ಉತ್ತರ ಬಂದ ಅನಂತರ ಅದೇ ಶಿಕ್ಷೆಯನ್ನು ಅವರಿಗೆ ಸಂಘವು ವಿಧಿಸಿದೆ' ಎಂದು ಹೇಳಬೇಕೆಂಬ ಆದೇಶವಿತ್ತು ಕಳುಹಿಸಿತು. ಭದ್ರಬಾಹುಸ್ವಾಮಿಯವರು, ತಮ್ಮಿಂದಾಃಡ ದೋಷಕ್ಕಾಗಿ ಶ್ರೀಸಂಘವು ತಮಗೆ ಬಹಿಷ್ಕಾರ ಶಿಕ್ಷೆ ವಿಧಿಸಿದೆಯೆಂಬುದನ್ನರಿತು, ಬೋಧನ ಸಮಯದಲ್ಲಾಗಲಿ ಅಥವಾ ಬೇರೆ ಯಾವ ಸಮಯದಲ್ಲಾಗಲಿ ತಾವು ಶಿಷ್ಯನೊಡನೆ ಮಾತನಾಡದಿರುವುದಾಗಯೂ ಹಾಗೂ ಶಿಷ್ಯನೂ ಮಾತನಾಡಬಾರದಾಗಿಯೂ ಮತ್ತು ದಿನವೊಂದರಲ್ಲಿ ಏಳು ಬಾರಿ ಪಾಠಬೋಧೆ ಮಾಡುವುದಾಗಿಯೂ, ನಿಬಂಧನೆಯಿಟ್ಟು ದಿಟ್ಠಿವಾಯವನ್ನು ಬೋಧ್ಸಲೊಪ್ಪಿದರು. ಅನಂತರ ಪ್ರತ್ಯೇಕವಾಗಿ ಇಬ್ಬಿಬ್ಬರು ಅನುಚರರಿಂದ ಕೂಡಿದ ಐದು ನೂರು ಸಾಧುಗಳು ನೇಪಾಲವನ್ನು ಸೇರಿ

ಅಧ್ಯಯವನ್ನಾರಂಭಿಸಿದರು. ಆದರೆ ಸನ್ನಿವೇಶವನ್ನು ಭರಿಸಲಾಗಿದೆ ಸ್ಥೂಲಭದ್ರಸ್ವಾಮಿಯವರೊಬ್ಬರ ಹೊರತಾಗಿ ಮಿಕ್ಕೆಲ್ಲರೂ ಅಲ್ಲಿಂದ ಹಿಂದಿರುಗಿದರು. ಸ್ಥೂಲಭದ್ರಸ್ವಾಮಿವರಿಗೂ ೧೪ ಪೂರ್ವಗಳ ಪೂರ್ಣ ಅಧ್ಯಯನ ಮಾಡಲಾಗಲಿಲ್ಲ. ಭದ್ರಬಾಹುಸ್ವಾಮಿಯವರು ಕಾರಣಾಂತರದಿಂದ ಕೊನೆಯ ನಾಲ್ಕು ಪೂರ್ವಗಳ ಅರ್ಥಬೋಧೆಯನ್ನು ಮಾಡಲಿಲ್ಲ. ಇದರ ಕಾರಣವನ್ನು 'ಶ್ರಮಣ ಭಾಗವಾನ್ ಮಹಾವೀರ' ದಲ್ಲಿ ಮುಂದಿನಂತೆ (ಪು. ಸಂ. ೨೩೩) ಹೇಳಿದೆ.

"ಶ್ರುತಕೇವಲಿ ಆಚಾರ್ಯ ಸಂಭೂತಿವಿಜಯ ಸ್ವಾಮಿಯವರು ವೀರನಿರ್ವಾಣ ಸಂ–೧೫೬ರಲ್ಲಿ ದಿವಂಗತರಾದರು. ಈ ತರುವಾಯ ಭದ್ರಬಾಹುಸ್ವಾಮಿಯವರು ನೇಪಾಲದಿಂದ ಪಾಟಲೀಪುತ್ರಕ್ಕೆ ಹಿಂದಿರುಗಿ ಬಂದು ಸಂಘಾಧಿಪತಿಗಳಾಗಿ ೧೪ ವರ್ಷ ಕಾಲವಿದ್ದರು.

ಸ್ಥೂಲಭದ್ರಸ್ವಾಮಿಯವರ ಏಳು ಜನ ಸಹೋದರಿಯರು ಭಗವತೀ ದೀಕ್ಷೆ ಕೈಗೊಂಡಿದ್ದರು. ಇವರು ಭದ್ರಬಾಹುಸ್ವಾಮಿಯವರ ಬಳಿಹೋಗಿ ಸ್ಥೂಲಭದ್ರರ ದರ್ಶನಾವಕಾಶಕ್ಕಾಗಿ ಅನುಮತಿ ಕೋರಿದರು. ಪಕ್ಕದ ಗುಹೆಯಲ್ಲಿ ಅವರನ್ನು ಕಾಣುವಂತೆ ಆದೇಶವಿತ್ತರಾಗಿ ಅವರು ಅಲ್ಲಿಗೆ ಹೋದರು. ಆದರೆ ಸ್ಥಾಲಭದ್ರರು ವಿದ್ಯಾ ಪ್ರಭಾವದಿಂದ ಲಬ್ಧವಾದ ಅತಿಮಾನುಷ ಶಕ್ತಿಯನ್ನು ತೋರುವುದಕ್ಕಾಗಿ ಸಿಂಹದ ಆಕೃತಿಯನ್ನು ತಳೆದು ಕುಳಿತಿದ್ದರು. ಈ ಸಿಂಹವನ್ನು ಕಂಡು ಹೆದರಿದ ಅವರ ಸಹೋದರಿಯರು ಭದ್ರಬಾಹುಸ್ವಾಮಿಯುವರ ಬಳಿ ಹೋಗಿ ಆ ವಿಷಯವನ್ನು ತಿಳಿಸಿದರು. ಭದ್ರಬಾಹುಸ್ವಾಮಿಯವರು ವಾಸ್ತವ ಸಂಗತಿಯನ್ನು ಊಹಿಸಿ ಮತ್ತೆ ಹೋಗಿ ನೋಡುವಂತೆ ಹೇಳಿದರು. ಅಂತೆಯೇ ಮರಳಿ ಬಂದ ಸಹೋದರಿಯರ ಯೋಗಕ್ಷೇಮವನ್ನು ಸ್ಥೂಲಭದ್ರರು ವಿಚಾರಿಸಿದರು. ಈ ರೀತಿಯಿಂದ ಸ್ಥೂಲಭದ್ರರು ಸಹೋದರಿಯರ ವಿನೋದಾರ್ಥವಗಿ ಸಿಂಹರೂಪ ತಳೆದ ಪ್ರಸಂಗವು ಅವರ ಅಧ್ಯಯನದ ಪೂರ್ಣತೆಗೆ ಭಂಗ ತಂದಿತು. ಕಲಿತಿದ್ದ ವಿದ್ಯಾಬಲದಿಂದ ಲಬ್ಧವಾದ ಅತಿಮಾನುಷಶಕ್ತಿಯನ್ನು ಸ್ಥೂಲಭದ್ರರು ದುರುಪಯೋಗಪಡಿಸಿಕೊಂಡರೆಂಬ ಕಾರಣದಿಂದ ಅವರಿಗೆ ದ್ವಾದಶಾಂಗದ ಮಿಕ್ಕ ಭಾಗವನ್ನು ಉಪದೇಶಿಸಲು ಭದ್ರಬಾಹುಸ್ವಾಮಿಯವರು ನಿರಾಕರಿಸಿದರು. ಅಂತಿಮವಾಗಿ ಶ್ರೀ ಸಂಘದ ಒತ್ತಾಯದ ಆದೇಶವನ್ನು ಒಪ್ಪಿ ಭದ್ರಬಾಹುಸ್ವಾಮಿಯವರು ಕೊನೆಯನಾಲ್ಕು ಪೂರ್ವಗಳ ಸೂತ್ರಪಾಠವನ್ನು ಮಾತ್ರ

ಉಪದೇಶಿಸಿದರು, ಅದರ ಅರ್ಥವನ್ನು ಉಪದೇಶಿಸಲಿಲ್ಲ. ಈ ರೀತಿಯಾಗಿ ಕೊನೆಯ ನಾಲ್ಕು ಪೂರ್ವಗಳ ಅರ್ಥವು ವೀರ ನಿರ್ವಾಣ ಸಂವತ್ ೧೭೦ರಲ್ಲಿ ದಿಂವಂಗತರಾದ ಭದ್ರಬಾಹುಸ್ವಾಮಿಯಾರೊಡನೆ ಮರೆಗೊಂಡಿತು. ಇದಲ್ಲದೆ ಭದ್ರಬಾಹುಸ್ವಾಮಿಯವರು ಪದಾನುಪದಮಾತ್ರರೂಪದ ಅಂತಿಮ ಪೂರ್ವ ಚತುಷ್ಟಯವನ್ನು ಮತ್ತಾರಿಗೂ ಬೋಧಿಸಬಾರದೆಂಬ ನಿಬಂಧನದ ಪೂರ್ವಕ ಸ್ಥೂಲಭದ್ರರಿಗೆ ಉಪದೇಶಿಸಿದ್ದರಾಗಿ ಮುಂದೆ ಸ್ಥೂಲಭದ್ರರು ದಿವಂಗತರಾದ ಬಳಿಕ ಕೊನೆಯ ನಾಲ್ಕು ಪೂರ್ವಗಳ ಪದಾನುಪದಮಾತ್ರವೂ ಉಳಿಯಲಿಲ್ಲ".

ಆಗಮದ ಈ ಪ್ರಥಮ ಪುನರುದ್ಧರಣವನ್ನು ಕುರಿತ ಮೇಲ್ಕಂಡ ಕಥನದ ಐತಿ ಹಾಸಿಕ ತಥ್ಯವನ್ನು ವಿಮರ್ಶಿಸಬೇಕಾದ ಅಗತ್ಯವಿದೆ.

ಜಂಬೂಸ್ವಾಮಿಯವರ ಬಳಿಕ ಆದ. ಶ್ವೇತಾಂಬರ ಆಮ್ನಾಯಾನುಸಾರದ ದ್ವಾದಶಾಂಗ ಶ್ರುತಕೇವಲಿ ಆಚಾರ್ಯರ ಅನುಕ್ರಮ, ಅವರ ಆಚಾರ್ಯಪಟ್ಟಕಾಲ ಮತ್ತು ಅವರು ದಿವಂಗತರಾದ ಕಾಲಗಳ ವಿವರವನ್ನು ಹಿಂದೆ ಹೇಳಿದೆ. ಈ ಶ್ರುತ ಕೇವಲಿಗಳಲ್ಲಿ ಮೂರನೆಯವರು ಯಶೋಭದ್ರರು ಇವರು ತಮ್ಮ ಶಿಷ್ಯರಲ್ಲಿ ಪ್ರಧಾನರಾಗಿದ್ದ ಶ್ರು. ಕೇ. ಸಂಭೂತಿ ವಿಜಯರು ಮತ್ತು ಶ್ರು.ಕೇ. ಭದ್ರಬಾಹುಸ್ವಾಮಿಯವರೀರ್ವರನ್ನು ಜೋಡಿಯಾಗಿ ಆಚಾರ್ಯ ಪದವಿಯಲ್ಲಿ ನಿಯೋಜಿಸಿ ವೀ. ನಿ. ಸಂ. ೧೪೮ರಲ್ಲಿ ದಿವಂಗತರಾದರು. ಸಂಭೂತಿ ವಿಜಯರು ವೀ. ನಿ. ಸಂ. ೧೫೬ರಲ್ಲಿ ದಿವಂಗತರಾದರು. ಆ ಬಳಿಕ ಶ್ರು.ಕೇ. ಭದ್ರಬಾಹುಸ್ವಾಮಿಯವರು ೧೪ ವರ್ಷಕಾಲ ಆಚಾರ್ಯಪಟ್ಟ ಧರರಾಗಿದ್ದು ಸ್ಥೂಲಭದ್ರಸ್ವಾಮಿಯವರನ್ನು ಆಚಾರ್ಯಪದವಿಯಲ್ಲಿ ನಿಯೋಜಿಸಿ ವೀ. ನಿ. ಸಂ. ೧೭೦ರಲ್ಲಿ ದಿವಂಗತರಾಗಿದ್ದಾರೆ. ಭದ್ರಬಾಹು ಸ್ವಾಮಿಯವರು ದಿವಂಗತರಾಗುವುದಕ್ಕಿಂತ ಮುನ್ನ ನಡೆದ ಆಗಮಸಂಕಲಕ್ಕೆ ಸಂಬಂಧಿಸಿದ ಈ ಮುಂದಿನ ಅಂಶಗಳನ್ನು ಗಮನಕ್ಕೆ ತಂದುಕೊಳ್ಳಬೇಕಾಗಿದೆ.

೧. ವೀ. ನಿ. ಸಂ. ೧೫೫ ವರ್ಷ ಕಳೆದಿರುವಲ್ಲಿ ಎಂದರೆ ವೀ. ನಿ. ಸಂ. ೧೫೬ರಲ್ಲಿ ಚಂದ್ರಗುಪ್ತನ ರಾಜ್ಯಭಾರ ಆರಂಭವಾಯಿತು. (ಹೇಮಚಂದ್ರಾಚಾರ್ಯರ ಪರಿಶಿಷ್ಟ ಪರ್ವದ ಹೇಳಿಕೆ ೧೯)

೨. ಚಂದ್ರಗುಪ್ತನು ಕಂಡ ಹದಿನಾರು ಸ್ವಪ್ನಗಳ ನಿಮಿತ್ತದಿಂದ ೧೨ ವರ್ಷಕಾಲ ದುರ್ಭಿಕ್ಷ ಘಟಿಸಲಿರುವುದನ್ನು ಶ್ರು. ಕೇ. ಭದ್ರಬಾಹುಸ್ವಾಮಿಯವರು ಹೇಳಿದರು.

೩. ದುರ್ಭಿಕ್ಷ ಸಂಭವಿಸಿದ್ದರಿಂದ ಆಹಾರಭಾವಾದ ಕಾರಣದಿಂದ ಅನೇಕ ಸಾಧುಗಳು ಮರಣ ಹೊಂದಿದರು.

೪. ದುರ್ಭಿಕ್ಷೆ ಕೊನೆಗೊಂಡ ಬಳಿಕ ಬದುಕಿ ಉಳಿದಿದ್ದ ಸಾಧುಗಳ ಸಮ್ಮೇಳನ ಪಾಟಲೀ ಪುತ್ರ ನಗರದಲ್ಲಿ ನಡೆಯಿತು. ಸಮ್ಮೇಳನದಲ್ಲಿ ಸೇರಿದ್ದ ಸಾಧುಗಳಲ್ಲಿ ಯಾರೂಬ್ಬರಿಗೂ ಪರಿಪೂರ್ಣ ರೀತಿಯಿಂದ ಆಗಮದ ನೆನಪಿರಲಿಲ್ಲ.

೫. ದೃಷ್ಟಿವಾದವನ್ನು ಶ್ರು.ಕೇ. ಭದ್ರಬಾಹು ಸ್ವಾಮಿಯವರೊಬ್ಬರು ಮಾತ್ರ ತಿಳಿದಿರುವರೆಂಬುದು ಗಮನಕ್ಕೆ ಬಂದಿತು. ನೇಪಾಳ ಮಾರ್ಗದಲ್ಲಿದ್ದ ಅವರನ್ನು ಕರೆತರಲು ಇಬ್ಬರು ಮುನಿಗಳನ್ನು ಶ್ರೀ ಸಂಘವು ಕಳುಹಿಸಿತು. ಭದ್ರಬಾಹುಸ್ವಾ;ಮಿಯವರು 'ಮಹಾಪ್ರಾಣಧ್ಯಾನವನ್ನು ಆರಂಭಮಾಡಿದ್ದೇನೆ, ಹನ್ನೆರಡು ವರ್ಷಗಳಲ್ಲಿ ಅದು ಸಾಧಿತವಾಗುವುದು, ಆದ್ದರಿಂದ ಬರಲಾಗುವುದಿಲ್ಲ' ಎಂದು ಹೇಳಿದರು. ಆದರೆ ಬಳಿಕ ಶ್ರೀ ಸಂಘವು ವಿಧಿಸಬಹುದಾದ ದಂಡನೆಗೆ ಅಂಜಿ ಕೆಲವೊಂದು ನಿಬಂಧನೆಗಳನ್ನಿರಿಸಿ ದೃಷ್ಟಿವಾದದ ಪಾಠ ಹೇಳಲು ಒಪ್ಪಿದರು ಇದಕ್ಕಾಗಿ ನೇಪಾಳಕ್ಕೆ ಹೋದ ಸಾಧುಗಳಲ್ಲಿ ಸ್ಥೂಲಭದ್ರಸ್ವಾಮಿಯವರ ಹೊರತಾಗಿ ಮಿಕ್ಕೆಲ್ಲರೂ ಭದ್ರಬಾಹು ಬಾಹುಸ್ವಾಮಿಯವರು ವಿಧಿಸಿದ್ದ ನಿಬಂಧನೆಗಳನ್ನು ಪೂರೈಸಲಾರದೆ ಅಧ್ಯಯನವನ್ನು ಪೂರೈಸದೆ ಹಿದಿರುಗಿದರು (ಪ. ಪರ್ವ-೯ ಶ್ಲೋ ೫೬-೭೧)

೬. ಮಹಾಮತಿ ಸ್ಥೂಲಭದ್ರಸ್ವಾಮಿಯವರು ಎಂಟು ವರ್ಷಕಾಲದಲ್ಲಿ ಎಂಟು ಪೂರ್ವಗಳ ಅಧ್ಯಯನ ಮಾಡಿದರು. ಆಧ್ಯಯನ ಮಾಡಲು ಇನ್ನೂ ಎಷ್ಟು ಉಳಿದಿದೆಯೆಂದು ಸ್ಥೂಲಭದ್ರರು ಕೇಳಲು ಭದ್ರಬಾಹುಸ್ವಾಮಿಯವರು ಒಂದು ಸಮುದ್ರದ ಉಪಮಾನ ಪೂರ್ವಕ ಸಂಖ್ಯೆಯನ್ನು ತಿಳಿಸಿದರು. (ಪ. ಪ.೯-ಶ್ಲೋ.೭೫)

೭. ಮಹಾಪ್ರಾಣ ಧ್ಯಾನವು ಪೂರ್ಣವಾಗುವ ಸಮಯಕ್ಕೆ ಸ್ಥೂಲಭದ್ರರು ಮಸ್ತು ಎಂಬ ಎರಡು ಅಧಿಕಾರಗಳಿಂದ ನ್ಯೂನವಾದ ಹತ್ತು ಪೂರ್ವಗಳ ಅಧ್ಯಯನ ಪೂರ್ಣ ಮಾಡಿದರು. ಬಳಿಕ

ವಿಹಾರ ಕ್ರಮದಿಂದ ಪಾಟಲೀಪುತ್ರನಗರಕ್ಕೆ ಬಂದರು. ಅಲ್ಲಿ ಸ್ಥೂಲಭದ್ರರು, ತಮ್ಮ ಸಹೋದರಿಯರು ದರ್ಶನಾರ್ಥ ಬಂದ ಸಮಯದಲ್ಲಿ ಸಿಂಹ ರೂಪ ತಳೆದು ಕಾಣಿಸಿಕೊಂಡರೆಂಬುದಕ್ಕಾಗಿ ಭದ್ರಬಾಹುಸ್ವಾಮಿಯವರು ಅವರಿಗೆ ದೃಷ್ಟಿವಾದಾಂಗದ ಮಿಕ್ಕಪಾಠವನ್ನು ಉಪದೇಶಿಸಲು ನಿರಾಕರಿಸಿದರು. ಆದರೆ ಶ್ರೀ ಸಂಘದ ಒತ್ತಾಯದ ಕಾರಣದಿಂದ ಆ ಮಿಕ್ಕ ಪಾಠದ ವಚನ ರೂಪವನ್ನು ಮಾತ್ರ ಹೇಳಿದರು. ಆದರೆ ಅದರ ಅರ್ಥವನ್ನು ಭೋಧಿಸಲಿಲ್ಲ. (ಪ. ಪ. ೯–ಶ್ಲೋ. ೭೬–೧೧೦)

೮. ಸ್ಥೂಲಭದ್ರಸ್ವಾಮಿಯವರನ್ನು ಆಚಾರ್ಯ ಪದದಲ್ಲಿ ನಿಯೋಜಿಸಿ ಭದ್ರಬಾಹು ಸ್ವಾಮಿಯವರು. ಮಹಾವೀರ ಸ್ವಾಮಿಯವರ ಮೋಕ್ಷಗಮನ ಸಮಯದಿಂದ ೧೭೦ ವರ್ಷ ಕಳೆದಿರುವಲ್ಲಿ. ಸಮಾಧಿ ಪೂರ್ವಕ ಸ್ವರ್ಗಸ್ಥರಾದರು. (ಪ.ಪ.೯ ಶ್ಲೋ೧೧೧, ೧೧೨)

ವೀ. ನಿ. ಸಂ. ೧೫೬ ರಲ್ಲಿ ಸಂಭೂತಿ ವಿಜಯರು ಸ್ವರ್ಗಸ್ಥರಾದ ಬಳಿಕ ೧೪ ವರ್ಷ ಆಚಾರ್ಯ ಪದಸ್ಥರಾಗಿದ್ದು ಭದ್ರಬಾಹುಸ್ವಾಮಿಯವರು ವೀ.ನಿ.ಸಂ. ೧೭೦ ರಲ್ಲಿ ದಿವಂಗತರಾಗಿದ್ದಾರೆ. ಹಾಗೂ ವೀ. ನಿ. ಸಂ. ೧೫೬ರಲ್ಲಿ ಹೇಮಚಂದ್ರಾ ಚಾರ್ಯರ ಹೇಳಿಕೆಯಂತೆ[೮]. ಚಂದ್ರಗುಪ್ತನು ರಾಜ್ಯಭಾರಕ್ಕೆ ಬಂದಿದ್ದು ಇವನ ರಾಜ್ಯಭಾರ ಕಾಲದಲ್ಲಿ ದುರ್ಭಿಕ್ಷ ಸಂಘಟಿಸಿದೆಯೆಂದೂ ಹೇಳಿದೆ. ಇದರಂತೆ ವೀ. ನಿ. ಸಂ. ೧೫೬ ಮತ್ತು ೧೭೦ರ ಮಧ್ಯಕಾಲದಲ್ಲಿ ದುರ್ಭಿಕ್ಷ ಉಂಟಾಗಿರಬೇಕೆಂಬ ಗಣನೆಯಾಗುವುದು. ವೀ.ನಿ.ಸಂ. ೧೫೬ರಲ್ಲಿಯೇ ೧೨ ವರ್ಷಗಳ ಕಾಲದ ದುರ್ಭಿಕ್ಷ ಆರಂಭವಾಗಿದೆಯೆಂದು ಗಣನೆ ಮಾಡಿದಲ್ಲಿ. ಅದು ವೀ. ನಿ. ಸಂ. (೧೫೬+೧೨) ೧೬೮ರಲ್ಲಿ ಕೊನೆಗೊಂಡಿದೆಯೆಂದೂ ವೀ. ನಿ. ಸಂ. ೧೬೯ರಲ್ಲಿ ಸಾಧುಸಮ್ಮೇಳನ ಸೇರಿದ್ದು ೧೧ ಅಂಗಗಳ ಆಗಮಸಂಕಲನ ನಡೆದಿದೆಯೆಂದೂ ಗಣನೆ ಮಾಡಬೇಕಾಗುವುದು. ಈ ಆಗಮ ಸಂಕಲನದ ಅನಂತರದಲ್ಲಿಯೂ ಭದ್ರಬಾಹುಸ್ವಾಮಿಯವರು ೧೨ ವರ್ಷಗಳ ಕಾಲ ಮಹಾಪ್ರಾಣಧ್ಯಾನಾಚರಣೆ ಮಾಡಿರುವರೆಂದು ಮತ್ತು ಈ ಮಧ್ಯಕಾಲದ ಎಂಟು ವರ್ಷಗಳಲ್ಲಿ ಸ್ಥೂಲ ಭದ್ರರಿಗೆ ದೃಷ್ಟಿವಾದದ ಎಂಟುಪೂರ್ವಗಳ ಪಾಠಬೋಧೆ ಮಾಡಿದರೆಂದೂ ಆ ಬಳಿಕ ಪಾಟಲೀಪುತ್ರಕ್ಕೆ ಬಂದು ಕೆಲಕಾಲ ಇದ್ದು ಸ್ವರ್ಗಸ್ಥರಾದರೆಂದಿರುವುದರಿಂದ ಭದ್ರಬಾಹು ಸ್ವಾಮಿಯವರು ವೀ.ನಿ.ಸಂ. ೧೭೦ರಲ್ಲಿ

ದಿವಂಗತರಾಗಿರದೆ ವೀ. ನಿ. ಸಂ. (೧೫೮ +೧೨=) ೧೭೦ರ ಬಳಿಕ ದಿವಂಗತರಾಗಿರುವರೆಂಬ ಗಣನೆಯಾಗುವುದು. ಇದಲ್ಲದೆ ನೇಪಾಳದಿಂದ ಪಾಟಲೀಪುತ್ರಕ್ಕೆ ಬಂದ ಅನಂತರ ೧೪ ವರ್ಷಕಾಲ ಆಚಾರ್ಯ ಪದಸ್ಥರಾಗಿದ್ದರೆಂದು ಮತ್ತೊಂದು ಮೂಲದ ಐತಿಹ್ಯವಿದ್ದು, ಹೇಮಚಂದ್ರಾಚಾರ್ಯರ ಹೇಳಿಕೆಯಂತೆಯೂ ಪಾಟಲೀಪುತ್ರಕ್ಕೆ ಬಂದ ಅನಂತರ ಸ್ಥೂಲಭದ್ರರಿಗೆ ದೃಷ್ಟಿವಾದದ ಮಿಕ್ಕಭಾಗದ ಪಾಠಹೇಳಿದರೆಂದಿದೆಯಾಗಿ, ಭದ್ರಬಾಹುಸ್ವಾಮಿಯವರು ವೀ.ನಿ.ಸಂ. ೧೭೨ರಲ್ಲಿ ದಿವಂಗತರಾದರೆಂಬ ಗಣನೆಯಾಗುವುದು. ಇದರಿಂದಾಗಿ ದುರ್ಭಿಕ್ಷ ಸಂಭವಿಸಿದ್ದು ಯಾವಾಗ, ಕೊನೆಯಾದದ್ದು ಯಾವಾಗ ೧೧ ಅಂಗಗಳ ಆಗಮ ಸಂಕಲನವಾದದ್ದು ಯಾವಾಗ, ಎಂಬ ಪ್ರಶ್ನೆಗಳಿಗೆಡೆಯಾಗಿ ಈ ಆಗಮ ಸಂಕಲನದ ಸಂಗತಿಯು ಸಂದಿಗ್ಧತೆಗೊಳಪಡುವುದು. ಇದಲ್ಲದೆ ಇಲ್ಲಿ ಮತ್ತೂ ಒಂದು ಪ್ರಶ್ನೆಗೆಡೆಯಿದೆ. ದುರ್ಭಿಕ್ಷದ ಅಂತ್ಯ ಮತ್ತು ಅನಂತರದಲ್ಲಿಯೂ ಕೆಲವು ವರ್ಷ ಭದ್ರಬಾಹು ಸ್ವಾಮಿಯವರು ಬದುಕಿದ್ದರು ಅವರಿಗೆ ಸಮಸ್ತ ದ್ವಾದಶಾಂಗದ ಆಗಮವು ತಿಳಿದಿದ್ದಿತಾದ್ದರಿಂದ ಪಾಟಲೀಪುತ್ರದಲ್ಲಿ ಸೇರಿದ ಸಾಧುಸಮ್ಮೇಳನವು ಭದ್ರಬಾಹುಸ್ವಾಮಿಯವರ ಉಪದೇಶದ ಮೂಲಕವೇ ಸಮಸ್ತ ಆಗಮವನ್ನೂ ಪಡೆಯಬಹುದಿದ್ದಿತು. ಇದೂ ಅಲ್ಲದೆ ಸಾಧುಸಮ್ಮೇಳನದಲ್ಲಿ ಯಾರೊಬ್ಬ ಸಾಧುವಿಗೂ ಪೂರ್ಣರೀತಿಯಿಂದ ೧೧ ಆಗಮಗಳ ತಿಳಿದಿರಲಿಲ್ಲವಾದ್ದರಿಂದ ಆ ಸಮ್ಮೇಳನದಲ್ಲಿ ಸಂಕಲನವಾಯಿತೆಂದು ಹೇಳಲಾಗಿರುವ ಆಗಮವು ಮೌಲಿಕ ಸ್ವರೂಪದ್ದಾಗಿದ್ದಿತೆಂದು ಸಾಕ್ಷೀಕರಿಸುವ ಪ್ರಾಮಾಣ್ಯವಿಲ್ಲವಾಗಿದೆ. ಆದ್ದರಿಂದ ಹನ್ನೊಂದು ಅಂಗಗಳ ಪ್ರಾಮಾಣಿಕ ಸ್ವರೂಪದ ಬಗ್ಗೆ ಸಹಜವಾಗಿಯೇ ಸಂದಿಗ್ಧತೆಯುಂಟಾಗುವುದು. ಹೀಗೆಯೆ ಆಗಮ ಸಂಕಲನದ ಈ ಐತಿಹ್ಯದ ಯಥಾರ್ತತೆಯನ್ನು ಪ್ರಶ್ನಿಸುವ ಮತ್ತೂ ಒಂದು ಸಂಗತಿಯನ್ನು ಈಗ ಪರಿಶೀಲನೆ ಮಾಡಬಹುದಾಗಿದೆ.

ಶ್ರುತಕೇವಲಿ ಭದ್ರಬಾಹುಸ್ವಾಮಿಯವರು ಮತ್ತು ವರಾಹಮಿಹಿರರು ಸಹೋದರರಾಗಿದ್ದರು ಮತ್ತು ವರಾಹಮಿಹಿರರು ಅವರ ಅಣ್ಣ ಭದ್ರಬಾಹುರವರ ಬಗ್ಗೆ ತೀವ್ರ ದ್ವೇಷ ಭಾವ ಹೊಂದಿ ಸತ್ತ ಅನಂತರ ವ್ಯಂತರನಾಗಿ ಜನಿಸಿ 'ಜೈನ' ಸಾಧು ಸಂಘಕ್ಕೆ ಪೀಡೆಯನ್ನುಂಟು ಮಾಡಿದ ಶ್ವೇತಾಂಬರ ಪಂಥದ ಹೇಳಿಕೆಯನ್ನು ಹಿಂದೆ ಉಲ್ಲೇಖಿಸಿದೆ. ಪರಂಪರೆಯ ಅನುಶ್ರುತಿಯಂತೆ ವರಾಹ ಮಿಹಿರರು ಉಜ್ಜಯಿನಿಯಲ್ಲಿ ರಾಜ್ಯಭಾರ ಮಾಡಿದ ವಿಕ್ರಮಾರ್ಕನ ಆಸ್ಥಾನದ ನವಮಣಿಗಳಲ್ಲೊಬ್ಬರಾಗಿದ್ದರು.

ಇವರ ಜ್ಯೋತಿಷಗ್ರಂಥಗಳು ಇಂದಿಗೂ ದೊರೆಯುತ್ತವೆ. ಮಿಕ್ರಮಾರ್ಕ ಶಕೆ ವೀ.ನಿ.ಸಂ. ೪೭೦ರಲ್ಲಿ (ಕ್ರಿ.ಪೂ. ೫೭-೫೮)ರಲ್ಲಿ ಪ್ರಾರಂಭವಾಗಿದೆ. ಆದ್ದರಿಂದ ಈ ಕಾಲದಲ್ಲಿ ಜೀವಿಸಿದ್ದ ವರಾಹಮಿಹಿರರನ್ನು ವೀ.ನಿ.ಸಂ. ೧೭೦ ರಲ್ಲಿ ದಿವಂಗಾತರಾದರೆಂದು ಹೇಳಲಾಗಿರುವ ಶ್ರು.ಕೇ. ಭದ್ರಬಾಹುಸ್ವಾಮಿಯವರ ಸಹೋದರು ಎಂಬುದಾಗಿ ಹೇಳಿರುವುದರ ಐತಿಹಾಸಿಕತೆ ಪ್ರಶ್ನಾರ್ಹವಾಗಿದೆ. ದಿಗಂಬರ ಪಂಥದ ಶ್ರುತಧರ ಆಚಾರ್ಯ ನುಕ್ರಮವನ್ನು ಹೇಳುವಲ್ಲಿ, ಏಕಾದಶಾಂಗ ಶ್ರುತಧರರ ಅನಂತರದಲ್ಲಿ ಅನುಕ್ರಮದಿಂದ ಹತ್ತು, ಒಂಭತ್ತು ಮತ್ತು ಎಂಟು ಅಂಗಶ್ರುತಧರರಿದ್ದರೆಂಬ ನಿರ್ದೇಶನವಿದೆ. ಇವರಲ್ಲಿ ಅಷ್ಟ (ಎಂಟು) ಅಂಗಗಳ ಶ್ರುತಧರರಾಗಿದ್ದವರು ೨ನೇ ಭದ್ರಬಾಹುಸ್ವಾಮಿಯವರು ಇವರು ವೀ. ನಿ. ಸಂ. ೫೧೩ರಿಂದ ೫೬೫ರವರೆಗೆ ಆಚಾರ್ಯಪದಸ್ಥರಾಗಿದ್ದರೆಂಬ ಗಣನೆಯಿದೆ, ವಿಕ್ರಮ ಶಕೆಯು ವಿಕ್ರಮನ ಜನ್ಮಸಮಯದಾಧಾರದಿಂದ ಆರಂಭವಾಗಿರುವುದರಿಂದ ಅವನು (೫೧೩-೪೭೦) ೪೩ನೇ ವಯಸ್ಸಿನವನಾಗಿದ್ದು ರಾಜ್ಯಭಾರ ನಡೆಸುತ್ತಿದ್ದ ಸಮಯದಲ್ಲಿ ಅಷ್ಟ ಅಂಗ ಶ್ರುತಧರ ಭದ್ರಬಾಹುಸ್ವಾಮಿಯವರು ಆಚಾರ್ಯ ಪದಸ್ಥರಾಗಿದ್ದರೆಂದು ತಿಳಿಯಬಹುದಾಗಿದೆ. ಹೀಗೆಯೇ ವರಾಹ ಮಿಹಿರರು ವಿಕ್ರಮನ ಆಸ್ಥಾನದ ನವಮಣಿಗಳಲ್ಲೊಬ್ಬರಾಗಿದ್ದರೆಂಬುದರ ಸಂಭವ ನೀಯತೆಯನ್ನು ನಿರಾಕರಿಸುವಂತಿಲ್ಲ. ಆದರೆ ಪಾಶ್ಚಿಮಂತ್ಯರಾದ ಇತಿಹಾಸವೇತ್ತರಲ್ಲಿ ಕೆಲವರು ವಿಕ್ರಮನೆಂಬ ರಾಜ ಐತಿಹಾಸಿಕ ವ್ಯಕ್ತಿಯೇ ಅಲ್ಲ ಎಂಬ ಅಭಿಪ್ರಾಯ ತಳೆದಿದ್ದಾರೆಂಬುದೂ ನಿಜ. ವಾಸ್ತವವೆಂದರೆ ವಿಕ್ರಮನ ಬಗ್ಗೆ ಇರುವ ಐತಿಹಾಸಿಕ ಸಂಗತಿಗಳು ಅವರಿಗೆ ದೊರಕಿರಲಿಲ್ಲವೆಂದು ಹೇಳಬೇಕಾಗುವುದು. ಈ ಬಗ್ಗೆ ಮತ್ತೊಂದು ಬಾಧಕ ಸಂಗತಿಯಿದೆ ಜ್ಯೋತಿಶ್ಯಾಸ್ತ್ರದ ಆಧಾರದಿಂದ ವರಾಹ ಮಿಹಿರರು ಶಕ ಸಂ. ೫೦೯ ರಲ್ಲಿ ದಿವಂಗತರಾಗಿರುವರೆಂದು ಹೇಳಿದೆ[೨೨]. ಆದರೆ 'ಶಕ' ಪದವು ಶಾಲಿವಾಹನ ಶಕೆಯಾಗಿರಬಹುದು ಇಲ್ಲವೆ ಇತರ ಯಾವುದಾದರೊಂದು ಶಕೆ ಯಾಗಿರಬಹುದು. ನಂದರಾಜನ ಹೆಸರಿನಲ್ಲಿ ವಿಜಯಾಭಿನಂದನ ಶಕೆ ಪ್ರಚಲಿತ ವಿದ್ದೆತೆಂದು ಹೇಳಲು ಆಧಾರವಿದೆ[೨೩]. ಈ ಶಕೆಯ ಗಣನೆಯಾಧಾರದಂತೆ ವರಾಹ ಮಿಹಿರರು ಕ್ರಿ.ಶ.೩೪ರಲ್ಲಿ (ವಿ.ಸಂ.೯೨ರಲ್ಲಿ) ದಿವಂಗತರಾಗಿರುವರೆಂದು ಹೇಳಲವ ಕಾಶವಿದೆ. ಇದರಿಂದ ವರಾಹಮಿಹಿರರು ವಿಕ್ರಮನ ಆಸ್ಥಾನದ

ನವಮಣಿಗಳಲ್ಲೊಬ್ಬರಾಗಿದ್ದರೆಂಬ ಪರಂಪರಾನುಶ್ರುತಿಯ ಯಥಾರ್ಥತೆ ಸಿದ್ಧವಾಗುವುದು. ಇದಲ್ಲದೆ ಅಷ್ಟ ಅಂಗ 'ಶ್ರುತಧರ' ಭದ್ರಬಾಹುಸ್ವಾಮಿಯವರು ವಿ.ಸಂ. ೬೭ರಲ್ಲಿ ದಿವಂಗತರಾಗಿರುವರೆಂದು ಗಣನೆಯಿದೆಯಾದ್ದರಿಂದ ಇವರಿಗಿಂತ ನಾಲ್ಕು ವರ್ಷಗಳ ಮುಂಚಿತವಾಗಿಯೇ ವರಹಾಮಿಹಿರರು ದಿವಂಗತರಾಗಿರುವರೆಂಬ ಭದ್ರಬಾಹು ಕಥಾಯತ್ತ ಹೇಳಿಕೆಯಿಂದಲೂ ಪ್ರಮಾಣೀಕೃತವಾಗುವುದು. ಇದರಂತೆ ವರಾಮಿಹಿರರ ಸಹೋದರರಾದ ಅಷ್ಟಅಂಗಶ್ರುತಧರ ಭದ್ರಬಾಹುಸ್ವಾಮಿಯವರ ಜೀವನ ಸಂಗತಿಯು ಶ್ವೇತಾಂಬರ ಪಂಥದಲ್ಲಿ ಶ್ರು.ಕೇ. ಭದ್ರಬಾಹು ಸ್ವಾಮಿಯವರ ಕಥೆಯಾಗಿ ಪರಿವರ್ತಿತ ವಾಗಿದೆಯೆಂದು ಸ್ಪಷ್ಟವಾಗುವುದು.

ಈ ರೀತಿಯಾಗಿ ಶ್ವೇತಾಂಬರ ಪಂಥದಲ್ಲಿ ಶ್ರು.ಕೇ. ಭದ್ರಬಾಹುಸ್ವಾಮಿಯವರ ನಿಜವಾದ ಇತಿವೃತ್ತ ಉಳಿದು ಬಂದಿಲ್ಲವೆಂದು ಸ್ಪಷ್ಟವಾಗುವುದಲ್ಲದೆ, ಅವರ ಜೀವಿತ ಕಾಲದಲ್ಲಿ ನಡೆಯಿತೆನ್ನಲಾಗಿರುವ ಆಗಮ ಸಂಕಲನವೇ ಮುಂತಾದ ಸಂಗತಿಗಳೆಲ್ಲವೂ ಕಾಲ್ಪನಿಕ ಕೆಥೆಯ ಅಂಶಗಳಾಗಿವೆಯೆಂದು ವ್ಯಕ್ತವಾಗುವುದು.

ಈ ವಿಷಯವನ್ನು ದಿಗಂಬರ ಪಂಥದಲ್ಲಿ ಉಳಿದು ಬಂದಿರುವ ಭದ್ರಬಾಹು ಇತಿವೃತ್ತದಾಧಾರದಿಂದಲೂ ಪರಿಷ್ಕರಿಸಬಹುದಾಗಿದೆ. ಈ ಇತಿವೃತ್ತದಂತೆ ಶ್ರು. ಕೇ. ಭದ್ರಬಾಹುಸ್ವಾಮಿಯವರು ಚಂದ್ರಗುಪ್ತನ ಸ್ವಪ್ನಗಳ ನಿಮಿತ್ತದಿಂದ ಉತ್ತರ ಭಾರತದಲ್ಲಿ ದುಷ್ಕಾಲ ಸಂಭವಿಸಲಿರುವುದನ್ನು ತಿಳಿದು ಉಜ್ಜಯಿನಿಯಿಂದ ದಕ್ಷಿಣಾಪಥಕ್ಕೆ ಪಯಣಮಾಡಿ ಕಳ್ಬಪ್ಪು–ಶ್ರವಣಬೆಳಗುಳದ ಚಿಕ್ಕಬೆಟ್ಟದ ಮೇಲೆ ವೀ. ನಿ. ಸಂ. ೧೬೨ರಲ್ಲಿ ಸಮಾಧಿ ಮರಣ ಹೊಂದಿದರೆಂಬ ಸಂಗತಿಯನ್ನು ಹಿಂದೆ ಹೇಳಿದೆ. ಅಲ್ಲದೆ ಈ ಇತಿವೃತ್ತವನ್ನು ಇತಿಹಾಸತಜ್ಞರಲ್ಲಿ ಬಹುಸಂಖ್ಯಾತರು ಯಥಾರ್ಥವೆಂದು ಒಪ್ಪಿರುವರು. ಇದರಿಂದ ಭದ್ರಬಾಹು ಸ್ವಾಮಿಯವರು ಮಹಾಪ್ರಾಣ ಧ್ಯಾನಕ್ಕಾಗಿ ನೇಪಾಳಕ್ಕೆ ಹೋದರೆಂಬ ಸಂಗತಿ, ಪಾಟಲೀಪುತ್ರದಲ್ಲಿ ಸಾದುಸಮ್ಮೇಳನ ನಡೆದ ಸಂಗತಿ, ಆ ಬಳಿಕ ಸ್ಥೂಲಭದ್ರಸ್ವಾಮಿಯವರು ನೇಪಾಳಕ್ಕೆ ಹೋಗಿ ಭದ್ರಬಾಹುಸ್ವಾಮಿಯವರಲ್ಲಿ ದೃಷ್ಟಿವಾದಾಂಗದ ಅಧ್ಯಯನ ಮಾಡಿದ ಸಂಗತಿ, ಇವೇ ಮುಂತಾದುವೆಲ್ಲವೂ ಕಾಲ್ಪನಿಕ ಸಂಗತಿಗಳಾಗಿರುವುವೆಂದು ದೃಢಪಡುವುದು.

ಶ್ರೀ ಕಪಾಡಿಯಾ ಅವರು ಸ್ಥೂಲಭದ್ರಸ್ವಾಮಿಯವರ ಕಾಲದಲ್ಲಿ ಸಾಧುಗಳು ಸಮ್ಮೇಳನ ಸೇರಿ ಆಗಮ ಸಂಕಲನ ಮಾಡಿದರೆಂಬುದರ ಬಗ್ಗೆ ಸಂಶಯ ಭಾವ ವ್ಯಕ್ತಪಡಿಸಿದ್ದಾರೆ. ಈ ಬಗ್ಗೆ "ಸ್ಥೂಲಭದ್ರರ ಕಾಲದಲ್ಲಿ ಪಾಟಲೀಪುತ್ರದಲ್ಲಿ ಸಾಧು ಸಮೇಳನ ನಡೆಯಿತೆಂಬುದನ್ನು ನಾವು ಒಪ್ಪಿಕೊಂಡಲ್ಲಿ ದೇವರ್ಧಿಗಣಿಯವರ ಕಾಲದ ವಲಭೀವಾಚನವು ನಲ್ಕನೆಯದೆನಿಸುವುದು" ಎಂದು ಹೇಳಿರುವುದನ್ನು ಗಮನಿಸ ಬಹುದು. (ಪೂ. ಸೂ. ಕೃತಿ ಪು. ೬೨ ಅಟಿ. ೪)

'ಆಗಮ ಪುನರುದ್ದರಣ'ವು ಮತ್ತೆಯೂ ಮೂರು ಬಾರಿ ನಡೆದಿದೆಯೆಂದು ಶ್ವೇತಾಂಬರ ಆಮ್ನಾಯದ ಇತಿವೃತ್ತವಿದೆ. ಈ ಇತಿವೃತ್ತದ ಪರಿಷ್ಕರಣಕ್ಕಾಗಿ, ಅದರ ಪೂರ್ವಭಾವಿಯಾಗಿ ನಡೆದಿರುವ ಕೆಲವು ಸಂಗತಿಗಳ ಇತಿವೃತ್ತವನ್ನು ಇಲ್ಲಿ ಗಮನಿಸ ಬೇಕಾಗಿದೆ. ಪ್ರಸ್ತುತ ಪ್ರಸಂಗವನ್ನು ಕುರಿತಂತೆ ದಿಗಂಬರ ಮತ್ತು ಶ್ವೇತಾಂಬರ ಪಂಥಗಳ ಇತಿವೃತ್ತಗಳಲ್ಲಿ, ಅಲ್ಪ ಸ್ವಲ್ಪ ವ್ಯತ್ಯಾಸಗಳುಳ್ಳವಾಗಿದ್ದೂರೂ, ಪರಸ್ಪರ ಸಂವಾದಿಯಾಗಿರುವ ಅಂಶಗಳಿವೆ. ಇದಕ್ಕಾಗಿ ಈಗ ದಿಗಂಬರ ಪಂಥದ ಇತಿವೃತ್ತವನ್ನು ಇಲ್ಲಿ ಗಮನಿಸಬಹುದು.

ಕಳ್ಬಪ್ಪುವಿನಲ್ಲಿ ಸಮಾಧಿ ಮರಣ ಸಿದ್ಧಿಗಾಗಿ ಸೆಲ್ಲೇಖನ ತೆಗೆದುಕೊಳ್ಳಲು ಶ್ರು.ಕೇ. ಭದ್ರಬಾಹುಸ್ವಾಮಿಯವರು ನಿಶ್ಚಯಿಸಿದ ಬಳಿಕ ತಮ್ಮೊಡನಿದ್ದ ಮುನಿಸಂಘಕ್ಕೆ ವಿಶಾಖಾಚಾರ್ಯರನ್ನು ಪ್ರಧಾನ ಆಚಾರ್ಯರನ್ನಾಗಿ ನಿಯಮಿಸಿ ದಮಿಳನಾಡಿನತ್ತ ಪಯಣ ಮಾಡಲು ಆದೇಶವಿತ್ತರು. ಉತ್ತರ ದೇಶದಲ್ಲಿ ದುಷ್ಕಾಲ ಕಳೆಯುವವರೆಗೆ ದಮಿಳದೇಶದಲ್ಲಿ ವಿಹಾರ ನ್ಡೆಸುತ್ತಿದ್ದ ಮುನಿಸಂಘವು ದುಷ್ಕಾಲ ಕಳೆದ ಬಳಿಕ ಮರಳಿ ಉತ್ತರ ದೇಶಕ್ಕೆ ಪಯಣ ಮಾಡಿತು. ಶ್ರು.ಕೇ. ಭದ್ರಬಾಹುಸ್ವಾಮಿಯವರೊದನೆ ದಕ್ಷಿಣಾಪಥಕ್ಕೆ ಬಾರದೆ ಸಿಂಧು ದೇಶದತ್ತ ಪಯಣ ಹೋಗಿದ್ದ ಮುನಿ ಸಂಘವು ಆ ಪ್ರದೇಶದ ಒತ್ತಾಯಕ್ಕೊಳಗಾಗಿ ನಗ್ನತೆಯನ್ನು ಮುಚ್ಚಿಕೊಳ್ಳಲೋಸುಗ ಎಡಗೈಯ ಮಣಿಕಟ್ಟಿನ ಮೇಲೆ ವಸ್ತ್ರವಿರಿಸಿಕೊಳ್ಳುವ ಹಾಗೂ ಭಿಕ್ಷಾ ಪಾತ್ರೆಯಲ್ಲಿ ಆಹಾರ ತಂದು ತಮ್ಮ ಉಪಾಶ್ರಯದಲ್ಲಿ ತಿನ್ನುವ ಆಚಾರವನ್ನು ರೂಢಿಸಿಕೊಂಡಿದ್ದಿತು. ದುಷ್ಕಾಲ ಕಳೆದ ಅನಂತರ ಈ ಮುನಿಸಂಘವೂ ಮಧ್ಯಪ್ರದೇಶಕ್ಕೆ ಬಂದಿತು. ಆಗ ವಿಶಾಖಾಚಾರ್ಯರು ಆ ಮುನಿಸಂಘದಲ್ಲಿ ಆರೂಢವಾಗಿದ್ದ ಅರ್ಹಗಪ್ಪಡದ ಶಿಥಿಲಾಚಾರವನ್ನು ತ್ಯಜಿಸಿ ಮತ್ತೆ ನಿರ್ಗ್ರಂಥ ಮುನಿ ಆಚಾರವನ್ನು

ಹೊಂದುವಂತೆ ಆ ಮುನಿಗಳಿಗೆ ಹೇಳೀದರು. ಇದಕ್ಕೆ ರಾಮಿಲಾಚಾರ್ಯ ಮತ್ತು ಸ್ಥೂಲಾಚಾರ್ಯರು ಒಪ್ಪಿ ತಮ್ಮ ತಮ್ಮ ಮುನಿಸಮುದಾಯದೊಡಗೊಡಿ ಯಥೋಕ್ತ ಚಾರಿತ್ರ ಸಂಪನ್ನರಾದರು. ಆದರೆ ಸ್ಥೂಲಭದ್ರಾಚಾರ್ಯರೇ ಮೊದಲಾದವರು ಇದಕ್ಕೆ ಒಪ್ಪದೆ ಜಿನಕಲ್ಪ ಮತ್ತು ಸ್ಥವಿರಕಲ್ಪ ಎಂಬೆರಡು ಭೇದ ಮಾಡಿ ಅರ್ಧಗಳಪ್ಪಡ ತೀರ್ಥವನ್ನು ರೂಢಿಗೆ ತಂದರು. ಮುಂದೆ ಸುರಥ (ಸೌರಾಷ್ಟ್ರ) ನಾಡಿನ ರಾಜಧಾನಿ ವಲಭಿಯಲ್ಲಿ ರಾಜ್ಯವಾಳುತ್ತಿದ್ದ ವಪ್ರಪಾಲನು ಈ ಅರ್ಧಗಪ್ಪಡ ಮುನಿಗಳನ್ನು ಕುರಿತು 'ನಿವು ಈ ಅರ್ಧಗಪ್ಪಡವನ್ನು ತ್ಯಜಿಸಿ ನಿರ್ಗ್ರಂಥ ಋಷಿರೂಪವನ್ನು ಧರಿಸಿ ತಪಸ್ಸು ಮಾಡಿರಿ' ಎಂದನು. ಅದಕ್ಕೆ ಅವರು ಒಪ್ಪದಿರಲು 'ವಸ್ತ್ರವನ್ನು ಸರಿಯಾಗಿ ಉಟ್ಟುಕೊಳ್ಳಿರಿ' ಎಂದು ಹೇಳಿದನು ಈ ಮಾತನ್ನು ಒಪ್ಪಿ ಆ ದಿವಸ ವೊದಲ್ಗೊಂಡು, ಬಡಗನಾಡಿನವರು ವಪ್ರಪಾಳನ ರಾಜ್ಯದಲ್ಲಿ ಅರ್ಧಗಪ್ಪಡವನ್ನು ತ್ಯಜಿಸಿ, ವಸ್ತ್ರವನ್ನು ಕಚ್ಚೆ ಹಾಕದೆ ಸುತ್ತಿ ಉಡುವರು. ಮತ್ತು ಕುರಿಕಂಬಳಿಯನ್ನು ಹೊದೆದುಕೊಳ್ಳುವರಾಗಿ ಅಲ್ಲಿಂದಿತ್ತ ಅದು ಕಂಬಳ ತೀರ್ಥವೆಂದಾಯ್ತು. ಅವರೇ ಶ್ವೇತಪಟ (ಶ್ವೇತಾಂಬರ) ರೆನಿಸಿದರು. ದಕ್ಷಿಣಾಪಥದಲ್ಲಿ ಸಾಮವಳೀಪುತ್ರನೆಂಬರಸನ ಸಂತತಿಯ (ಬೃಹತ್ಕಥಾ ಕೋಶದಲ್ಲಿ ದಕ್ಷಿಣಾಪಥದ ಸಾವಲಿ ಪತ್ತನ ಎಂದು ಹೇಳಿದೆ- ಭಧ್ರಬಾಹು ಕಥಾನಕ) ಶ್ವೇತಭಿಕ್ಷುವು ಜಾಪುಲಿ ಸಂಘಕ್ಕೆ ಮೊದಲಿಗನಾದನು. (ವಡ್ಡಾರಾಧನೆ ಭದ್ರಬಾಹು ಭಾಟ್ಟಾರರ ಕಥೆ). ಇನ್ನು ಈ ಸಂಗತಿಗೆ ಸಂಬಂಧಿಸಿದ ಶ್ವೇತಾಂಬರ ಆಮ್ನಾಯದ ಐತಿಹ್ಯವನ್ನು ತಿಳಿಯಬೇಕು.

ಶ್ವೇತಾಂಬರ ಆಮ್ನಾಯದನುಸಾರ, ೨೪ ತೀರ್ಥಂಕರರಲ್ಲಿ ಪ್ರಥಮ ತೀರ್ಥಂಕರ ವೃಷಭನಾಥ ಮತ್ತು ಅಂತಿಮ ತೀರ್ಥಂಕ ಮಹಾವೀರರು ಜಿನಕಲ್ಪ (ಅಚೇಲಕ) ಮುನಿಧರ್ಮವನ್ನು ಮುನಿಗಳ ಆಚಾರಧರ್ಮವಾಗಿ ಬೋಧಿಸಿದರೆಂದು ಮತ್ತು ಮಧ್ಯ ಕಾಲದವರಾದ ಅಜಿತಾದಿ ಪಾರ್ಶ್ವನಾಥ ಪರ್ಯಂತದ ೨೨ ತೀರ್ಥಂಕರರು ಮುನಿಗಳಿಗೆ ಸ್ಥವಿರಕಲ್ಪ (ಸಚೇಲಕ) ಆಚಾರ ಧರ್ಮವನ್ನು ಬೋಧಿಸಿದರೆಂದಿದೆ. ಇದಲ್ಲದೆ ಭ. ಮಹಾವೀರನ ಕಾಲದಲ್ಲಿ ಭ. ಪಾರ್ಶ್ವನಾಥ ತೀರ್ಥಂಕರನ ಧರ್ಮತೀರ್ಥದ ಸ್ಥವಿರ ಕಲ್ಪದ ಮುನಿಗಳು ಹಾಗೂ ಭ. ಮಹಾವೀರನ ಧರ್ಮತೀರ್ಥದ ಜಿನಕಲ್ಪದ ಮುನಿಗಳೂ ಇದ್ದರೆಂದು ಹೇಳೀದೆ. ಇಷ್ಟಲ್ಲದೆ ಭ. ಮಹಾವೀರನ ಬೋಧೆಯ ಜಿನಕಲ್ಪ ಆಚಾರ, ಧರ್ಮವು ವೀ. ನಿ. ಸಂ. ೧೬೪ ರಲ್ಲಿ ಜಂಬೂಸ್ವಾಮಿಯವರ ನಿರ್ವಾಣ ದೊಡನೆ

ಅಂತ್ಯಗೊಂಡಿತೆಂದೂ ಹೇಳಿದೆ. ಇದರಂತೆ ಜಂಬೂಸ್ವಾಮಿಯವರ ಬಳಿಕ ಸ್ಥವಿರ ಕಲ್ಪ ಮಾತ್ರ ಮುಂದುವರಿತೆಂಬ ಅಭಿಪ್ರಾಯಕ್ಕೆಡೆಯಾಗುವುದು. ಈ ರೀತಿಯಾಗಿ ಜಿನಕಲ್ಪ ಜಂಬೂಸ್ವಾಮಿಯವರ ನಿರ್ವಾಣದೊಡನೆ ಕೊನೆಗೊಂಡಿತೆಂದು ಹೇಳಿದ್ದರೂ ಸ್ಥೂಲಭದ್ರಸ್ವಾಮಿಯವರ ಪ್ರಧಾನ ಶಿಷ್ಯರಾದ ಆರ್ಯಮಹಾಗಿರಿ ಮತ್ತು ಆರ್ಯ ಸುಹಸ್ತಿಯವರೀರ್ವರಲ್ಲಿ ಮೊದಲನೆಯವರಾದ ಆರ್ಯ ಮಾಹಾಗಿರಿಯವರು ಜಿನಕಲ್ಪ ಆಚಾರವನ್ನು ಮತ್ತೆ ಆಚರಣೆಯಲ್ಲಿತಂದರೆಂದು ಹೇಳಿದೆ. ಹೀಗೆಯೇ ಆರ್ಯಸುಜಸ್ತಿಯವರಿಂದ  ಮುನಿಸಂಘದಲ್ಲಿ ಶಿಥಿಲಾಚಾರಕ್ಕೆಡೆಯಾದ ಕಾರಣ ಅವರ ಬಗ್ಗೆ ಆರ್ಯಮಹಾಗಿರಿಯವರು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು ಎಂದೂ ಪರಿಶಿಷ್ಟಪರ್ವದಲ್ಲಿ ಹೇಳಿದೆ. ಪ್ರಸ್ತುತ ಪ್ರಸಂಗದಲ್ಲಿ ಆರ್ಯಮಹಾಗಿರಿಯವರು ಆರ್ಯಸು ಹಸ್ತಿಯವರನ್ನು ಕುರಿತು ಹೇಳಿರುವ ಮಾತು ವಿಶೇಷತಃ ಗಮನಾರ್ಹವಾಗಿದೆ. (ಪ.ಪರ್ವ. ಸರ್ಗ ೧೧ ಶ್ಲೋ.ಸಂ. ೧೧ಳರಿಂದ ೧೨೨) "ಸುಹಸ್ತಿಯವರಿಂದ ನಮಸ್ಕೃತರಾದ ಆರ್ಯಮಹಾಗಿರಿಯವರು ಹೇಳಿದರು: 'ರಾಜಾನ್ನವು ಏಷಣಾರ್ಹವಲ್ಲ, ಇದನ್ನು ತಿಳಿದೂ ಏಕೆ ಸ್ವೀಕರಿಸುವೆ?' ಸುಹಸ್ತಿ ಹೇಳಿದರು: 'ಭಗವಂತನೆ: ರಾಜನು ಹೇಗೋ ಹಾಗೆ ಪ್ರಜೆಗಳು, ರಾಜನನ್ನು ಅನುಸರಣೆ ಮಾಡುವಲ್ಲಿ ನಿಷ್ಠರಾದ ಪೌರರು ಇದನ್ನು ಕೊಡುತ್ತಿದ್ದಾರೆ: ಇದಕ್ಕೆ ಆರ್ಯಮ ಹಾಗಿರಿಯವರು ಕುಪಿತರಾಗಿ 'ಇದು ಮಾಯೆ (ಕಪಟದ ಮಾತು) ಶಾಂತಂ ಪಾಂಪಂ, ಇಲ್ಲಿಂದ ಮುಂದೆ ನಮ್ಮೀರ್ವರ ನಡುವೆ ಸಂಬಂಧವಿರುವುದಿಲ್ಲ. ಸಮಾನ ಸಾಮಾಚಾರ ಸಾಧುಗಳೊಡನೆ ಸಾಹಚಾರ್ಯ ಸಾಧುವಾದುದು, ಸಾಮಾಚಾರೀ ವಿಭಿನ್ನನಾದ ನಿನ್ನ ಮಾರ್ಗ ಇನ್ನು ಮುಂದೆ ಭಿನ್ನವಾದುದಾಗಿರುವುದು' ಎಂದು ಹೇಳಿದರು. ಭಕ್ತರಾದ ಆರ್ಯಸುಹಸ್ತಿಯಾದರೋ ಬಾಲಕನಂತೆ ನಡುಗುತ್ತಾ ಆರ್ಯಮಹಾಗಿರಿಯವರ ಪಾದಗಳಿಗೆ ಕೈ ಜೋಡಿಸಿ ವಂದನೆ ಮಾಡಿ 'ಅಪರಾಧ ಮಾಡಿದ್ದೇನೆ, ಭಗವಂತನೆ, ನನ್ನ ದುಷ್ಕೃತವು ಮಿಥ್ಯೆಯಾಗಲಿ, ನನ್ನ ಅಪರಾಧವು ಕ್ಷಮಿಸಲ್ಪಡಲಿ, ಇಂತಹುದನ್ನು ಮತ್ತೆ ಮಾಡಿವುದಿಲ್ಲ, ಪ್ರಕೀರ್ಣಕವು ವಿಕ್ರಮ ಶಕ ನಾಲ್ಕನೇ  ಶತಮಾನದ ಅಂತ್ಯ ೫ನೇ ಶತಮಾನದ ಆದಿಯಲ್ಲಿ ರಚಿತವಾಗಿದೆ.

೨. ಸಿದ್ಧ ಪಾಹುಡ : ೧೧೯ಗಾಹೆಗಳಿವೆ. ಅಗ್ರಾಯಣೀ ಪೂರ್ವದ ಆಧಾರದಿಂದ ರಚನೆಯಾಗಿದೆ ಆತ್ಮಾನಂದ ಜೈನ ಸಭಾ–ಭಾವನಗರದಿಂದ ೧೯೨೧ರಲ್ಲಿ ಪ್ರಕಾಶಿತವಾಗಿದೆ.

೩. ಜೋಇಸ ಕರಂಡಗ : ಪೂರ್ವಾಚಾರ್ಯ ರಚಿತವಾದ ಈ ಆಗಮವು ವಲಭಿವಾಚನಾನುಸಾರ ಸಂಕಲಿತವಾಗಿದೆ (ಋಷಭದೇವ ಕೇಸರಿಮಲ್ ಸಂಸ್ಥಾ,ರತಲಾಮನಿಂದ ೧೯೨೮ರಲ್ಲಿ ಪ್ರಕಾಶಿತವಾಗಿದೆ.) ಪಾದಲಿಪ್ತ ಸೂರಿಯವರಿಂದಾಗಿದ್ದ
ಪ್ರಾಕೃತ ಟೀಕೆಯ ಸಂಸ್ಕೃತ ಅವತರಣವನ್ನು ಮಲಯಗಿರಿಯವರುತಮ್ಮ ಸಂಸ್ಕೃತ ಟೀಕೆಯಲ್ಲಿ ಸಂಕಲನ ಮಾಡಿದ್ದಾರೆ. ಇದರಲ್ಲಿ ಖಗೋಲ ಸಂಬಂಧಿಯಾದ ವಿಷಯ ವಿದೆ.

೪. ಅಂಗವಿಜ್ಜಾ : ಇದರ ಉಲ್ಲೇಖವು ಅನೇಕ ಪ್ರಾಚೀನ ಗ್ರಂಥಗಳಲ್ಲಿ ದೊರೆಯು ತ್ತದೆ. ಅಂಗ, ಸ್ವರ, ಲಕ್ಷಣ, ವ್ಯಂಜನ, ಸ್ವಪ್ನ, ಭೌಮ, ಅಂತರಿಕ್ಷ ಈ ನಿಮಿತ್ತ ಕಥೆಗಳ ಆಧಾರದಿಂದ ಮತ್ತು ಈ ಮಹಾನಿಮಿತ್ತಗಳ ಮೂಲಕ ಭೂತ ಭವಿಷ್ಯಜ್ಞಾನವು ಪ್ರಾಪ್ತವಾಗುವುದು. ಇದರ ಅಂತಿಮ ಅಧ್ಯಾಯದಲ್ಲಿ ಪೂರ್ವ ಭವವನ್ನು ತಿಳಿಯುವ ಯುಕ್ತಿಯನ್ನು ಹೇಳಿದೆ. (ಪ್ರಾ. ಸಾ. ಪು. ೬೨೧–೨)

೫.ಪಜ್ಜಂತಾರಾಹಣಾ : ಇದನ್ನು ಆರಾಧನಾ ಪ್ರಕರಣ ಹಾಗೂ ಆರಾಧನಾ ಸೂತ್ರ ಎಂದು ಕರೆಯಲಾಗುವುದು. ೬೯ ಗಾಥೆಗಳಿವೆ. ಕರ್ತೃ ಸೋಮ ಸೂರಿ. ಅಂತಿಮ ಆರಾಧನೆಯ ಸ್ವರೂಪದ ಕಥನವಿದೆ.

೬. ಜೋಣಿಪಾಹುಡ (ಪ್ರಾ. ಸಾ. ಇ. ಪು. ೬೭೩) ಯೋನಿ ಪ್ರಾಭೃತ : ಇದು ನಿಮಿತ್ತಸಹಾಸ್ರದ ಮಹತ್ವಪೂರ್ಣಗ್ರಂಥವಾಗಿದಿತ್ತು. ಇದರ ರಚನಕಾರರು ಧರಸೇನಾ ಚಾರ್ಯರು. (ಕ್ರಿ. ಶ. ೧ ಅಥವಾ ಎರಡನೇ ಶತಮಾನ ಇವರ ಕಾಲ.) ಇವರನ್ನು ಪ್ರಜ್ಞಾಶ್ರವಣರೆಂದು ಹೇಳಲಾಗುತ್ತಿದ್ದಿತು. ವಿ. ಸಂ. ೧೫೫೬ರಲ್ಲಿ ಬ ರೆಯಲಾಗಿರುವ ಬೃಹಟ್ಟಿಪ್ಪಣಿಕಾ ಎಂಬ

ಗ್ರಂಥಸೂಚಿಯನುಸಾರ ವೀರನಿರ್ವಾಣದಿಂದ ೬೦೦ ವರ್ಷ ಗಳ ತರುವಾಯದಲ್ಲಿ ಈ ಗ್ರಂಥದ ರಚನೆ ಮಾಡಿದ್ದಾರೆ[೨೭]. ಈ ಗ್ರಂಥವನ್ನು ಕೂಷ್ಮಾಂಡಿನೀ ದೇವಿಯಿಂದ ಪಡೆದು ಧರಸೇನರು ಪುಷ್ಪದಂತ ಮತ್ತು ಭೂತಬಲಿಎಂಬ ಶಿಷ್ಯರಿಗಾಗಿ ಬರೆದಿದ್ದರು. ಶ್ವೇತಾಂಬರ ಸಂಪ್ರದಾಯದಲ್ಲಿ ಯೂ ಈ ಗ್ರಂಥದ ಬಗ್ಗೆ ದಿಗಂಬರ ಪಂಥದಲ್ಲಿರುವಷ್ಟೇ ಆದರವಿದ್ದಿತು. ಧವಲಾ ಟೀಕೆಯನುಸಾರ ಇದರಲ್ಲಿ ಮಂತ್ರ ತಂತ್ರಗಳ ಶಕ್ತಿಯ ವರ್ಣನೆಯಿದೆ. ಮತ್ತು ಇದರ ಮೂಲಕಪುದ್ಗ 'ಲಾನುಭಾಗ' ವನ್ನು ತಿಳಿಯಬಹುದು. [೨೮] ನಿಶೀಥ ವಿಶೇಷಚೂರ್ಣೀ(೪, ಪು. ೩೭೫ ಸೈಕ್ಲೊಸ್ಟೈಲ್ ಪ್ರತಿ) ಕಥನಾನುಸಾರ ಆಚಾರ್ಯ ಸಿದ್ಧಸೇನರು ಜೋಣಿಪಾಹುಡದ ಆಧಾರದಿಂದ (ಅಶ್ವ) ಕುದುರೆಗಳನ್ನು ಮಾಡಿದ್ದರು[೨೯]. ಇದರ ಬಲದಿಂದ (ಮಹಿಷ) ಎಮ್ಮೆಗಳನ್ನು ಅಚೇತನಗೊಳಿಸಬಹುದಾಗಿದ್ದಿತು. ಮತ್ತು ಇದರಿಂದ ಧನದ ಉತ್ಪತ್ತಿ ಮಾಡಬಹುದಿದ್ದಿತು. ಈ ಗ್ರಂಥದ ಬಲದಿಂದ ಮೀನು ಮತ್ತು ಸಿಂಹಗಳ ಸೃಷ್ಟಿ ಮಾಡಬಹುದಾಗಿದ್ದಿತೆಂದು ಪ್ರಭಾವಕ ಚರಿತ(೫–೧೧೫–೧೨೭)ದಲ್ಲಿ ಹೇಳಿದೆ. ವಿಶೇಷಾ ವಶ್ಯಕ ಭಾಷ್ಯದ (ಗಾಹೆ ೧೭೭೫), ಹೇಮಚಂದ್ರ ಸೂರಿಕೃತ ಟೀಕೆಯ ಹೇಳಿಕೆಯಂತೆ ಅನೇಕ ವಿಜಾತೀಯ ದ್ರವ್ಯಗಳ ಸಂಯೋಗದಿಂದ ಸರ್ಪ, ಸಿಂಹ ಮುಂತಾದ ಪ್ರಾಣಿಗಳು ಮಣಿ, ಸುವರ್ಣಾದಿ ಅಚೇತನ ಪದಾರ್ಥಗಳನ್ನು ಸೃಜಿಸುವ ಉಲ್ಲೇಖವಿದೆ. ಜೋಣಿಪಾಹುಡದಲ್ಲಿ ಹೇಳಲಾಗಿರುವುದು ಎಂದೂ ಸುಳ್ಳಾಗದು ಎಂದು ಕುಲವಯ ಮಾಲಾಕರ್ತೃ ಉದ್ಯೋತನ ಸೂರಿ ಹೇಳಿದ್ದಾರೆ. ಮಂತ್ರವಾದಿಗಳು 'ಣಮೋಸಿದ್ಧಾಣಂ ಣಮೋ ಜೋಣೀ ಪಾಹುಡ–ಸಿದ್ಧಾಣಂ ಇಮಾಣಂ' ವಿದ್ಯೆಯನ್ನು ಪಠಿಸುತ್ತಿದ್ದರು, ಎಂದು ಕುಲಯಮಾಲಾದಲ್ಲಿ ಹೇಳಿದೆ. ಮತ್ತು ಜೋಣಪಾಹುಡದ ಸಂಬಂಧವಾಗಿ:

ಅವಿಚಲ ಮೇರುಚೂಲಾ ಸುರಸರಿಯಾ ಅವಿ ವಹೆಜ್ಜ ವಿವರೀಯಾ ।
ಣಯ ಹೊಜ್ಜ ಕಿಂಚ ಅಲಿಯಂ ಜಂ ಜೋಣಿಪಾಹುಡೇ ರೆಇಯಂ ॥

ಎಂದು ಹೇಳಿದೆ (ಪ್ರಾ. ಸಾ. ಇ. ಪು. ೪೨೦ ). ಜಿನೇಶ್ವರ ಸೂರಿಯವರು ತಮ್ಮ ಕಥಾಕೋಶ ಪ್ರಕರಣದಲ್ಲಿಯೂ ಈ ಶಾಸ್ತ್ರದ ಉಲ್ಲೇಖ ಮಾಡಿದ್ದಾರೆ. ಈ ಗ್ರಂಥದಲ್ಲಿ ೮೦೦ ಗಾಹೆಗಳಿವೆ.ಕುಲಮಂಡಲನ ಸೂರಿಯವರಿಂದ ವಿ. ಸಂ. ೧೪೭೩ರಲ್ಲಿ ರಚಿತ ವಾಗಿರುವ

‘ವಿಚಾರಾಮೃತ ಸಂಗ್ರಹ (ಪು ೯. ಆ) ದಲ್ಲಿ ಯೋನಿಪ್ರಾಭೃತವು ಪೂರ್ವ (ಗತ) ಶ್ರುತ ಮೂಲದಿಂದ ಬಂದುದಾಗಿದೆಯೆಂದು ಹೇಳಿದೆ.[೩೦]

ಅಗ್ಗೇಣಿ ಪುವ್ವನಿಗ್ಗಯ ಪಾಹುಡಸತ್ಥಸ್ಸ ಮಜ್ಝಯಾರಂಮಿ।
ಕಿಂಚಿ ಉದ್ದೆಸ ದೇಸಂ ಧರಸೇಣೋ ವಜ್ಜಿಯಂ ಭಣಇ॥
ಗಿರಿ ಉಜ್ಜಂತಠಿಏಣ ಪಚ್ಛಿಮದೇಸೇ ಸುರಟ್ಠಗಿರಿನಯರೇ ।
ಬುಡ್ಡಂತ ಉದ್ಧರಿಯಂ ದೂಸಮಕಾಲಪ್ಪಯಾವಂಮಿ॥

ಪ್ರಥಮ ಖಂಡೇ

ಅಟ್ಠಾವೀಸ ಸಹಸ್ಸಾ ಗಾಹಾಣಂ ಜತ್ಥ ವನ್ನಿಯಾ ಸತ್ಥೆ ।
ಅಗ್ಗೇಣಿಪುವ್ವಮಜ್ಝೇ ಸಂಖೇವಂ ಮಿತ್ಥರೇ ಮುತ್ತುಂ ॥
ಚತುರ್ಥಖಂಡ ಪ್ರಾಂತೇ ಯೋನಿಪ್ರಾಭೃತೇ।

ಈ ಕಥನದಂತೆ ಧರಸೇನರು ಅಗ್ರಾಯಣೀ ಪೂರ್ವದ ಕೆಲವಂಶವನ್ನು ತೆಗೆದು ಕೊಂಡು ಈ ಗ್ರಂಥದ ಉದ್ಧರಣ ಮಾಡಿದ್ದಾರೆ ಮತ್ತು ಮೊದಲಿಗೆ ಇದರಲ್ಲಿ ಇಪ್ಪತ್ತೆಂಟು ಸಹಸ್ರ ಗಾಥೆಗಳಿದ್ದವು. ಅವುಗಳನ್ನೇ ಸಂಕ್ಷೇಪದಿಂದ ಯೋನಿ ಪ್ರಾಭೃತದಲ್ಲಿ ಹೇಳಿದೆಯೆಂದು ವ್ಯಕ್ತವಾಗುವುದು.

## ಛೇದಸೂತ್ರ

ಛೇದಸೂತ್ರಗಳು ಆರು. ನಿಸೀಹ, (ನಿಶೀಥ), ಮಹಾನಿಸೀಹ, ವವಹಾರ (ವ್ಯವ ಹಾರ)[೩೧], ದಸಾಸುಯಕ್ಖಂದ (ದಶಾಶ್ರುತ ಸ್ಕಂಧ), ಕಪ್ಪ, ಪಂಚಕಪ್ಪ (ಅಥವಾ ಜೀಯ ಕಪ್ಪ–ಜೀತಕಲ್ಪ). ಛೇಧಸೂತ್ರಗಳು ಆಗಮದ ಪ್ರಾಚೀನತಮ ಭಾಗ ಮಾತ್ರವಲ್ಲ ಅತ್ಯಂತ ಮಹತ್ವಪೂರ್ಣವೂ ಆದುವು. ಸವಣ ಸವಣಿಯರ ಪ್ರಾಯಶ್ಚಿತ್ತ ವಿಧಿಯ ನಿರೂಪಣೆಯಿದೆ. ಚಾರಿತ್ರದ ಶುದ್ಧತೆಯನ್ನು ರಕ್ಷಣೆ ಮಾಡಿಕೊಳ್ಳಲು ಮಾರ್ಗ ನಿದರ್ಶನ ನೀಡುವುದರಿಂದ ಈ ಸೂತ್ರಗಳು ಉತ್ತಮ ಶ್ರುತವೆಂಬ ಸನ್ನುತಿ ಪಡೆದಿವೆ. ಬೌದ್ಧರ ವಿನಯ ಪಿಟಕದೊಡನೆ ಈ ಶ್ರುತವು ಹೋಲಿಕೆಯುಳ್ಳದ್ದಾಗಿದೆ. ಈ ಶ್ರುತದ

ಅಧ್ಯಯನದ ವಿನಾ ಮುನಿಸಂಘದಲ್ಲಿ ಭಿಕ್ಷುವು ಆಚಾರ್ಯ, ಉಪಾಧ್ಯಾಯ ಮುಂತಾದ ಉನ್ನತ ಪದವಿ ಪಡೆಯಲಾಗುವುದಿಲ್ಲ. ನಿಶೀಥದ ಭಾಷ್ಯಕಾರರು ಛೇದಸೂತ್ರಗಳನ್ನು ಪ್ರವಚನದ ರಹಸ್ಯವೆಂದು ಸ್ತುತಿ ಮಾಡಿದ್ದಾರೆ. ಈ ಛೇದಸೂತ್ರಗಳು ಸಂಕ್ಷಿಪ್ತ
ಶೈಲಿಯಲ್ಲಿ ಸುಂದರವಾಗಿ ರಚಿತವಾಗಿವೆ.

ನಿಸೀಹ : (ನಿಶೀಥ) ಛೇದಸೂತ್ರದಲ್ಲಿ ನಿಶೀಥವು ಬೃಹತ್ತಾದುದು ಮಾತ್ರವಲ್ಲ ; ಅತಿಶಯ ಮಹತ್ವಪೂರ್ಣವೂ ಆದುದಾಗಿದೆ. ಇದನ್ನು ಆಚಾರಂಗದ ಎರಡನೇ ಶ್ರುತಸ್ಕಂಧದ ಐದನೆಯ ಚೂಲಾ ಎಂದು ಮಾನ್ಯ ಮಾಡಿ ಆಚಾರಾಂಗದ ಭಾಗವೆಂದೇ ಗ್ರಹಿಸಲಾಗಿದೆ. ನಿಶೀಥ ಎಂದರೆ ಅಪ್ರಕಾಶ (ಕತ್ತಲು, ರಾತ್ರಿ[೩೨])

ರಹಸ್ಯಸೂತ್ರ–ವಿದ್ಯಾ, ಮಂತ್ರ, ತಂತ್ರಗಳು ಯಾವ ರೀತಿಯಿಂದ ಪರಿಪಕ್ವತೆ ಯಿಲ್ಲದವರೆದುರಿನಲ್ಲಿ ಪ್ರಕಟಪಡಿಸುವುದಿಲ್ಲವೋ ಹಾಗೆ ನಿಶೀಥಸೂತ್ರವನ್ನು ರಾತ್ರಿಗೆ ಸಮಾನವಾಗಿ ಅಪ್ರಕಾಶತ್ವ, ರಹಸ್ಯ ರೂಪದಿಂದ ಗೋಪ್ಯವಾದುದೆಂದು ಹೇಳಿದೆ. ಯಾರಾದರೊಬ್ಬ ನಿರ್ಗ್ರಂಥ ಮುನಿಯು ನಿಶೀಥವನ್ನು ಮರೆತಲ್ಲಿ ಅವನು ಜೀವನ ಪರ್ಯಂತ ಆಚಾರ್ಯ ಪದವಿಯನ್ನು ಪಡೆಯಲಾರನು. ಇದರಲ್ಲಿ ಸವಣ ಮತ್ತು ಸವಣಿಯರ ಆಚಾರ ವಿಚಾರ ಸಂಬಂಧಿಯಾದ ಉತ್ಸರ್ಗ ಮತ್ತು ಅಪವಾದಾತ್ಮಕ ವಿಧಿಗಳ ಪ್ರರೂಪಣೆಯಿದೆ. ಇದರ ಕರ್ತೃವಿನ ವಿಷಯದಲ್ಲಿ ಮತ ಭೇದವಿದೆ. ಚದುರ್ದಶಪುರ್ವಿಗಳಿಂದ ರಚಿತವಾದುದೆಂಬ ಅಭಿಮತವಿದೆ. ಮತ್ತು ನಿಶೀಥ–ಭಾಷ್ಯ ಕಾರನ ಮತಾನುಸಾರವಾಗಿ ಇದು ಒಂಭತ್ತನೆಯ ಪ್ರತ್ಯಾಖ್ಯಾನ ಎಂಬ ಹೆಸರಿನ ಪೂರ್ವದ ಆಧಾರದಿಂದ ರಚಿತವಾಗಿದೆ. ಪಂಚಕಲ್ಪಚೂರ್ಣಿಯಲ್ಲಿ ಹೇಳಿರುವಂತೆ ಇದರ ಕರ್ತೃ ಭದ್ರಬಾಹು.

(ಮುನಿಪುಣ್ಯವಿಜಯ ಬೃಹತ್ಕಲ್ಪದ ಪ್ರಸ್ತಾವನೆ. ಪು. ೩. ಚೂರ್ಣಿಕಾರ ಜಿನ ದಾಸಗಣಿ ಮಹತ್ತರನ ಮತದಂತೆ ಪರಮಪೂಜ್ಯ ಸುಪ್ರಸಿದ್ಧ ವಿಸಾಹಗಣಿ ಮಹ ತ್ತರನು (=ವಿಶಾಖಗಣಿ ? ದಿಗಂಬರ ಪಂಥಾನುಸಾರ ಪ್ರಥಮ ದಶಪೂರ್ವು ?) ತನ್ನ ಶಿಷ್ಯ ಪ್ರಶಿಷ್ಯರ ಹಿತಾರ್ಥವಾಗಿ ನಿಶೀಥ ಸೂತ್ರದ ರಚನೆ ಮಾಡಿದ್ದಾನೆ. )

ಮಹಾನಿಸೀಹ : ಛೇದಸೂತ್ರಗಳಲ್ಲಿ ಇದನ್ನು ಕೆಲವೆಡೆ ಎರಡನೆಯದನ್ನಾಗಿ ಮತೆ ಕೆಲವೆಡೆ ಆರನೆಯದನ್ನಾಗಿ ಗಣನೆ ಮಾಡಿರುವುದು ಕಂಡು ಬರುತ್ತದೆ. ಇದನ್ನು ಸಮಸ್ತ ಪ್ರವಚನದ ಪರಮಸಾರವೆಂದು ಹೇಳಲಾಗಿದೆ. ನಿಶೀಥವನ್ನು ಲಘುನಿಶೀಥವೆಂದು ಮತ್ತು ಈ ಸೂತ್ರವನ್ನು ಮಹಾನಿಶೀಥವೆಂದೂ ಹೇಳಾಗುವುದು

ಆದರೆ ವಸ್ತುಸ್ಥಿತಿ ಬೇರೆಯದಾಗಿದೆ. ಜಮೂಲನಿಶೀಥವು ವಿಚ್ಛಿನ್ನವಾಗಿದೆ. ಇದರ ಗ್ರಂಥವನ್ನು ಗೆದ್ದಲುಗಳು ತಿಂದುದರಿಂದ ಅದರ ಪತ್ರಗಳು ನಷ್ಟವಾಗಿ ಹೋಗಿದ್ದುವು. ಮುಂದೆ ಹರಿಭದ್ರ ಸೂರಿಯು ಅದರ ಸಂಶೋಧನೆ ಮಾಡಿದರು. ಭಾಷೆ ಮತ್ತು ವಿಷಯ ದೃಷ್ಟಿಯಿಂದ ಈ ಸೂತ್ರವು ಪ್ರಾಚೀನ ಆಗಮಗಳಲ್ಲಿ ಗಣನೆ ಹೊದುವುದಿಲ್ಲ. ಇದರಲ್ಲಿ ತಂತ್ರಸಂಬಂಧಿಯಾದ ಹಾಗೂ ಜೈನಾಗಮದಿಂದ ಅತಿರಿಕ್ತವಾದ ಇತರ ಗ್ರಂಥಗಳ ಉಲ್ಲೇಖವಿದೆ.

(ವಜ್ರಸ್ವಾಮಿಯು ನವಕಾರ ಮಂತ್ರವನ್ನು ಉದ್ಧರಿಸಿ ಅದಕ್ಕೆ ಮೂಲಸೂತ್ರಗಳಲ್ಲಿ ಸ್ಥಾವನಿತ್ತ ಉಲ್ಲೇಖವು ಇಲ್ಲಿದೆ )

ವವಹಾರ ;(ವ್ಯವಹಾರ) ಇದನ್ನು ದ್ವಾದಶಾಂಗದ ನವನೀತವೆನ್ನುವರು. ಛೇದ ಸೂತ್ರಗಳಲ್ಲಿ ಮುಖ್ಯಾವಾದುವೆಂದು ಗಣನೆ ಹೊಂದಿರುವ ಮೂರು ಸೂತ್ರಗಳಲ್ಲಿ ಇದೊಂದು. ನಿಶೀಥ ಮತ್ತು ಬೃಹತ್ಕಲ್ಪಗಳು ಮಿಕ್ಕೆರಡು. ಇದರ ಕರ್ತೃ ಭದ್ರಬಾಹು. ಇದರ ನಿರ್ಯುಕ್ತಿಯೂ ಈ ಆಚಾರ್ಯರಿಂದಲೇ ರಚಿತವಾಗಿದೆ. ಭಾಷ್ಯ, ಬೃಹದ್ ಭಾಷ್ಯ, ಅವಚೂರಿಗಳೆಂಬ ಇತರ ವ್ಯಾಖ್ಯಾನಗಳೂ ಇವೆ. (ಬೃಹದ್ಭಾಷ್ಯ ಈಗ ದೊರೆಯುತ್ತಿಲ್ಲ). ಇದು ನಿಶೀಥಕ್ಕಿಂತ ಚಿಕ್ಕದಾಗಿದ್ದು ಬೃಹತ್ಕಲ್ಪಕ್ಕಿಂತ ದೊಡ್ಡದಿದೆ. ಪ್ರಮಾದವಶವಾಗಿ ಚಾರಿತ್ರ ದೋಷವುಂಟಾದಲ್ಲಿ ಅದಕ್ಕಾಗಿ ಆಲೋಚನಾ, ಪ್ರಾಯ ಶ್ಚಿತ್ತ ವಿಧಿವಿಧಾನವು ಇದರಲ್ಲಿದೆ. ( ೧೦ನೇ ಉದ್ದೇಶದಲ್ಲಿ ಆಗಮ , ಶ್ರುತ, ಆಜ್ಞಾಧಾರಣಾ, ಮತ್ತು ಜೀತ ಎಂಬ ಐದು ಪ್ರಕಾರದ ವ್ಯವಹಾರಗಳ ಉಲ್ಲೇಖವಿದೆ. ಆಗಮಗಳ ಅಧ್ಯಯನಕ್ಕೆ ಅವಶ್ಯಕವಾದ ಅರ್ಹತೆ ವಯೋಮಾನ ಮುಂತಾದವುಗಳ ಪ್ರರೂಪಣೆಯಿದೆ.)

ದಸಾಸುಯಕ್ಖಂದ : (ದಶಾಶ್ರುತಸ್ಕಂಧ) ಇದನ್ನು ಆಯಾರದಸಾ, ದಸಾಸುಯ ಎಂದೂ ಹೆಸರಿಸಲಾಗಿದೆ. ಇದರ ರಚನೆ ಭದ್ರಾಬಾಹುವಿನಿಂದಾಗಿದೆಯೆಂದು ಪರಂ ಪರಾಗತ ಹೇಳಿಕೆಯಿದೆ.

ಇದರ ನಿರ್ಯುಕ್ತಿಯ ಕರ್ತೃವಿನ ಹೆಸರೂ ಭದ್ರಬಾಹು ಎಂದಿರುವುದಾದರೂ ಇವರು ಭಿನ್ನ ವ್ಯಕ್ತಿಗಳಾಗಿರುವರೆಂದು ಹೇಳಲವಕಾಶವಿದೆ. ಮುನಿಗಳ ಆಚಾರ ವಿಚಾರ ಪ್ರರೂಪಣೆ ಇದರ ಮುಖ್ಯ ವಸ್ತು. ಎಂಟನೇ ಅಧ್ಯಯನ ದಲ್ಲಿ ಮಹಾವಿರನ ಸ್ವರ್ಗಾವತರಣಾದಿ ಮುಕ್ತಿಪರ್ಯಂತ ಪ್ರಸಂಗಗಳ ವಿಸ್ತೃತವರ್ಣನೆಯಿದೆ. (ಮಹಾವೀರನು ಮೊದಲಿಗೆ ಮಾಹಣಕುಂಡದ ಋಷಭದತ್ತನ ಪತ್ನಿ ದೇವನಂದೆ ಬ್ರಾಹ್ಮಣಿಯ ಗರ್ಭದಲ್ಲಿ ಅವತರಿಸಿದ್ದನು.ಆದರೆ ಅರಹಂತ, ಚಕ್ರವರ್ತಿ ಬಲದೇವ ಹಾಗೂ ವಾಸುದೇವರು ಭಿಕ್ಷುಕ, ಬ್ರಾಹ್ಮಣಾದಿ ಕುಲಗಳಲ್ಲಿ ಜನ್ಮಧಾರಣೆ ಮಾಡುವುದಿಲ್ಲವಾದ್ದರಿಂದ ಇಂದ್ರನು ಖತ್ತಿಯ ಕುಂಡ ಗಾಮದ ಗಣರಾಜ ಕಾಶ್ಯಪ ಗೋತ್ರೀಯ ಸಿದ್ದಾರ್ಥನ ಪತ್ನಿ ತ್ರಿಶಲೆಯ ಗರ್ಭಕ್ಕೆ ಪರಿವರ್ತನೆ ಮಾಡಿದನು.

ಕೌಂಡಿನ್ಯಗೋತ್ರದ ಯಶೋದೆಯೊಡನೆ ಮಹಾವೀರನ ವಿವಾಹವಾಯಿತು . . . .

ಕೇವಲಜ್ಞಾನ ಪ್ರಾಪ್ತಿಯ ಅನಂತರ, ಅಟ್ಠಿಯಗ್ಗಾಮ, ಚಂಪಾ, ಪೃಷ್ಟಚಂಪಾ, ವೈಶಾಲೀ, ವಾಣಿಯಗಾಮ, ನಾಲಂದಾ, ಮಿಥಿಲಾ, ಭದ್ಧಿಯಾ, ಆಲಂಭಿಯಾ, ಶ್ರಾವಸ್ತಿ ಪಣಿಯ ಭೂಮಿ ಮತ್ತು ಮಜ್ಝಿಮ ಪಾವಾಗಳಲ್ಲಿ ಚಾತುರ್ಮಾಸ್ಯಗಳನ್ನು ಕಳೆಯುತ್ತಾ ೩೦ ವರ್ಷಕಾಲ ವಿಹಾರ ಮಾಡಿದನು. ಹೀಗೆ ಕೊನೆಗೆ ತನ್ನ ೭೭ನೇ ವರ್ಷದಲ್ಲಿ ನಿರ್ವಾಣ ಲಾಭ ಪಡೆದನು. ಈ ಶುಭ ಅವಸರದಲ್ಲಿ, ಕಾಶೀ–ಕೋಶಲದ ಒಂಭತ್ತು ಮಲ್ಲಕಿ, ೯ ಲಿಚ್ಛವೀ ಎಂಬ ಹೆಸರಿನ ೧೮ ಗಣರಾಜರು ಎಲ್ಲೆಡೆಯು ಪ್ರಕಾಶ ಉಂಟುಮಾಡಿ ಉತ್ಸವವನ್ನಾಚರಿಸಿದರು. ಮಹಾವೀರ ಚರಿತ್ರದ ಅನಂತರ, ಪಾರ್ಶ್ವ, ನೇಮಿ, ಋಷಭ, ಹಾಗೂ ಇತರ ತಿರ್ಥಂಕರರ ಚರಿತ್ರೆ ಇದೆ. ಕಲ್ಪಸೂತ್ರದ ಎರಡನೇ ಭಾಗದಲ್ಲಿ ಸ್ಥವಿರಾವಲಿಯ ಗಣ, ಶಾಖೆ, ಮತ್ತು ಕುಲಗಳ ಉಲ್ಲೇಖವಿದೆ. ಇವುಗಳಲ್ಲಿ ಕೆಲವು ಕ್ರಿ. ಶ. ಪ್ರಥಮ ಶತಾಬ್ದಿಯ ಮಥುರ ಶಿಲಾಲೇಖಗಳಲ್ಲಿ ಉತ್ಕೀರ್ಣವಿವೆ. ಒಂಭತ್ತನೇ ಅಧ್ಯಯನದಲ್ಲಿ ಮಹಾವೀರನು ಚಂಪಾನಗರದ ಪೂರ್ಣಭದ್ರ ಚೈತ್ಯದಲ್ಲಿ ವಿಹರಿಸಿರಲು ರಾಜಾಕೂಣಿಕನು ತನ್ನ ಪತ್ನಿ ಧಾರಿಣೀಯೊಡನೆ ಅಲ್ಲಿಗೆ ಬಂದು ಧರ್ಮೋಪದೇಶ ಕೇಳಿದ ಪ್ರಸಂಗದ ಕಥನವಿದೆ. ಹತ್ತನೇ ಅಧ್ಯಯನ ದಲ್ಲಿ ೯ ನಿದಾನಗಳ ವರ್ಣನೆಯಿದೆ. ಮಹಾವೀರನು ರಾಜಗೃಹದ ಗುಣ ಶಿಲ ಚೈತ್ಯದಲ್ಲಿ ಸಮವಸೃತನಿದ್ದಾಗ ಶ್ರೇಣಿಕನು ಮಹಾರಾಣಿ ಚೇಲನೆಯೊಡನೆ ಬಂದು ದರ್ಶನ ಪಡೆಯುವನು.

ಕಪ್ಪ (ಕಲ್ಪ ಅಥವಾ ಬೃಹತ್ಕಲ್ಪ): ಇದನ್ನು ಕಲ್ಪಾಧ್ಯಯನವೆಂದೂ ಹೆಸರಿಸಲಾಗಿದೆ. ಜೈನ ಶ್ರಮಣರ ಪ್ರಾಚೀನತಮವಾದ ಆಚಾರ ಶಾಸ್ತ್ರವಾಗಿದೆಯೆಂಬ ಮನ್ನಣೆಯಿದೆ. ನಿಶೀಥ ಮತ್ತು ವ್ಯವಹಾರಗಳಂತೆ ಇದರ ಭಾಷೆಯು ಬಹು ಪ್ರಾಚೀನವಾದುದಾಗಿದೆ. ಇಷ್ಟಾದರೂ ಟೀಕಾಕಾರದಿಂದ ಇತರ ಆಗಮಗಳಂತೆ ಇದರಲ್ಲಿಯೂ ಬಹುವಾಗಿ ಅಸ್ತವ್ಯಸ್ತತೆಯುಂಟಾಗಿದೆ. ಸಾಧು ಮತ್ತು ಸಾಧ್ವಿಯರ ಸಂಯಮದ ಸಾಧಕ (ಕಲ್ಪ- ಯೋಗ್ಯ) ಅಥವಾ ಬಾಧಕ (ಅಕಲ್ಪ-ಅಯೋಗ್ಯ) ಸ್ಥಾನ, ವಸ್ತ್ರ, ಪಾತ್ರ ಮುಂತಾದವುಗಳ ವಿಸ್ತೃತ ವಿವೇಚನೆಯಿದೆ. ಆದ್ದರಿಂದ ಇದಕ್ಕೆ ಕಲ್ಪ ಎಂಬ ಹೆಸರು ಬಂದಿದೆ. ಇದರಲ್ಲಿ ಆರು ಉದ್ದೇಶಕಗಳಿವೆ. ಮಲಯಗಿರಿಯವರನುಸಾರ ಪ್ರತ್ಯಾಖ್ಯಾನವೆಂಬ ಒಂಬತನೇ ಪೂರ್ವದ ಆಚಾರವೆಂಬ ಮೂರನೇ ವಸ್ತುವಿನ ೨೦ನೇ ಪ್ರಾಭೃತದಲ್ಲಿ ಪ್ರಾಯಶ್ಚಿತ್ತದ ವಿಧಾನವಿದ್ದಿತು. ಕಾಲಕ್ರಮದಲ್ಲಿ ಪೂರ್ವಗಳ ಪತನ ಪಾತನವು  ವ್ಯುಚ್ಛಿತ್ತಿದ ಕಾರಣ ಭದ್ರಬಾಹುಸ್ವಾಮಿಯವರು ಕಲ್ಪ ಮತ್ತು ವ್ಯವಹಾರಗಳ ರಚನೆ ಮಾಡಿದರು, ಮತ್ತು ಇವೆರಡು ಛೇದಸೂತ್ರಗಳಿಗೆ ಸೂತ್ರಸ್ಪರ್ಶಕವಾದ ನಿರ್ಯುಕ್ತಿಯನ್ನು ರಚಿಸಿದರು. ಚತುರ್ದಶ ಪೂರ್ವಗಳ ವ್ಯುಚ್ಛಿತ್ತಿಯಾದ ತರುವಾಯದ ಕಾಲದಲ್ಲಿದ್ದ ಭದ್ರ ಬಾಹುಸ್ವಾಮಿಯವರಿಂದ ಇವುಗಳ ರಚನೆಯಾಗಿರಬೇಕೆಂದು ಸೂಚಿತವಾಗುವುದು. ಆದ್ದರಿಂದ ಈ ಭದ್ರಬಾಹು ಆಚಾರ್ಯರು ಶ್ರು. ಕೇ. ಭದ್ರಬಾಹುವಿನಿಂದ ಅನ್ಯರಿರ ಬೇಕು ಎಂದು ತಿಳಿಯಬೇಕಾಗಿದೆ.

ಪಂಚಕಪ್ಪ (ಪಂಚಕಲ್ಪ) : ಪಂಚಕಲ್ಪ ಸೂತ್ರ ಮತ್ತು ಪಂಚಕಲ್ಪ ಮಹಾಭಾಷ್ಯಗಳೆರಡೂ ಒಂದೇ ಆಗಿವೆ.

ಇದರ ಕರ್ತೃ ಸಂಘದಾಸಗಣಿ.

ಜೀಯಕಪ್ಪಸುತ್ತ (ಜೀತಕಲ್ಪಸೂತ್ರ) : ಕೆಲವೆಡೆ ಇದನ್ನು ಛೇದಸೂತ್ರಗಳಲ್ಲೊಂ ದೆಂದು ಗಣನೆ ಮಾಡಿರುವುದು ಕಂಡುಬರುತ್ತದೆ. ಜೈನ ಶ್ರಮರಣ ಆಚಾರ(ಜೀತ)[ಜಿ]ದ ವಿವೇಚನ ಪ್ರಸಂಗದಲ್ಲಿ ಹತ್ತು ಪ್ರಕಾರದ ಪ್ರಾಯಶ್ಚಿತ್ತ ವಿಧಾನವನ್ನು ೧೦೩ ಗಾಹೆಗಳಲ್ಲಿ ವರ್ಣಿಸಿದೆ. ಇದರ ಕರ್ತೃ ವಿಶೇಷಾವಶ್ಯಕ ಭಾಷ್ಯದ ರಚನಕಾರರಾದ ಜಿನ ಭದ್ರಗಣಿ ಕ್ಷಮಾಶ್ರಮಣ. ಇವರ ಜೀವಿತ ಕಾಲ. ವಿ.

ಸಂ. ೬೪೫ ಎಂದು ಮಾನ್ಯ ಮಾಡಿದೆ. ಇವರು ಮೇಲೆ ಭಾಷ್ಯವನ್ನು ರಚನೆ ಮಾಡಿದ್ದಾರೆ. ಇದರಲ್ಲಿಪ್ರಾಯಶ್ಚಿತ್ತದ ಮಹತ್ವವು ಪ್ರತಿಪಾದಿತವಾಗಿದೆ.

ಆಲೋಚನಾ, ಪ್ರತಿಕ್ರಮಣ, ಮಿಶ್ರ (ಆಲೋಚನಾ + ಪ್ರತಿಕ್ರಮಣ) ವಿವೇಕ, ವ್ಯುತ್ಸರ್ಗ, ತಪ, ಛೇದ ಮೂಲ, ಅನವಸ್ಥಾಪ್ಯ ಮತ್ತು ಪಾರಂಚಿಕ ಎಂಬುವು ಪ್ರಾಯಶ್ಚಿತ್ತದ ಹತ್ತು ಭೇದಗಳು. ಭದ್ರಬಾಹುಗಳ ತರುವಾಯ ಅಂತಿಮದ ಎರಡು ಪ್ರಾಯಶ್ಚಿತ್ತಗಳು ವ್ಯುಚ್ಛಿನ್ನವಾದುವೆಂದು ಹೇಳಲಾಗಿದೆ.

## ಮೂಲ ಸೂತ್ರ

ಹನ್ನೆರಡು ಉಪಾಂಗಗಳ ಸದೃಶವಾಗಿ ಪ್ರಾಚೀನ ಆಗಮ ಗ್ರಂಥಗಳಲ್ಲಿ ಮೂಲ ಸೂತ್ರಗಳ ಬಗ್ಗೆಯೂ ಉಲ್ಲೇಖಗಳಿವೆ. ಸಾಧುವಿನ ಜೀವನದ ಮೂಲಭೂತ ನಿಯಮಗಳ ಉಪದೇಶವಿರುದಾದ್ದರಿಂದ ಮೂಲಸೂತ್ರ ಎಂಬ ಹೆಸರು ರೂಢಿಗತವಾಗಿದೆ. ಉತ್ತರಾಧ್ಯಯನ, ಆವಶ್ಯಕ ಮತ್ತು ದಶವೈಕಾಲಿಕಗಳನ್ನೇ ಕೆಲವರು ಮೂಲ ಸೂತ್ರ ಗಳೆಂದು ಮಾನ್ಯಮಾಡಿ ಪಿಂಡನಿರ್ಯುಕ್ತಿ ಮತ್ತು ಓಘನಿರ್ಯುಕ್ತಿಗಳನ್ನು ಮೂಲ ಸೂತ್ರಗಳೆಂದು ಗಣನೆ ಮಾಡುವುದಿಲ್ಲ. ಕೆಲವರು ಪಿಂಡನಿರ್ಯುಕ್ತಿಗಳನ್ನು ಮೂಲ ಸೂತ್ರವೆಂದು ಪರಿಗಣನೆ ಮಾಡಿ ನಾಲ್ಕು ಮೂಲ ಸೂತ್ರಗಳೆಂದು ಗಣನೆ ಮಾಡುವರು. ಮತ್ತೆ ಕೆಲವರು ಇದರೊಟ್ಟಿಗೆ ಓಘನಿರ್ಯುಕ್ತಿಯನ್ನು ಸೇರಿಸಿಕೊಂಡೊದ್ದಾರೆ. ಆಗಮಗಳಲ್ಲಿ ಅನೇಕ ದೃಷ್ಟಿಗಳಿಂದ ಮೂಲ ಸೂತ್ರಗಳ ಸ್ಥಾನವು ಮಹತ್ತ್ವ ಪೂರ್ಣ ವಾಗುದಾಗಿದೆ. ಇವುಗಳಲ್ಲಿ ಉತ್ತರಾಧ್ಯಯನ, ದಶವೈಕಾಲಿಕಗಳು ಜೈನ ಆಗಮದ ಪ್ರಾಚೀನತಮ ಸೂತ್ರಗಳೆಂದು
ಪರಿಗಣಿತವಾಗಿವೆ. ಮತ್ತು ಬೌದ್ಧ ಆಗಮ ಗ್ರಂಥಗಳಾದ ಸುತ್ತ ನಿಪಾತ. ಧಮ್ಮಪದ ಮುಂತಾದವುಗಳೊಡನೆ ಇವುಗಳನ್ನು ತುಲನೆ ಮಾಡಿರುವುದು ಕಂಡುಬರುತ್ತದೆ.

೧. ಉತ್ತರಜ್ಝಯಣ : ಮಹಾವೀರನಿಂದ ಅಂತಿಮ ಚಾತುರ್ಮಾಸದ ಸಮಯ ದಲ್ಲಿ ಪ್ರಶ್ನಿಸಲ್ಪಡದೆಯೇ ಹೇಳಿರುವಂತಹ ೩೬ ವಿಷಯಗಳ ಉತ್ತರಗಳು ಸಂಗ್ರಹೀತ ವಾಗಿರುವುದರಿಂದ

ಇದಕ್ಕೆ ಉತ್ತರಾಧ್ಯಯನವೆಂಬ ಹೆಸರು ಬಂದಿದೆ. ಧಾರ್ಮಿಕ ಕಾವ್ಯ ದೃಷ್ಟಿಯಿಂದ ಈ ಆಗಮವು ಮಹತ್ವ ಪೂರ್ಣವಾದುದಾಗಿದೆ. ಉಪಮಾ, ದೃಷ್ಟಾಂತ ಮತ್ತು ವಿವಿಧ ಸಂವಾದಗಳ ಮೂಲಕ ಕಾವ್ಯಮಯ ಭಾಷೆಯಲ್ಲಿ ತ್ಯಾಗ, ವೈರಾಗ್ಯ ಮತ್ತು ಸಂಯಮಗಳನ್ನು ಇದರಲ್ಲಿ ನಿರೂಪಿಸಿದೆ. ಇದನ್ನು ಡಾ. ವಿಂಟರ್ ನಿಟ್ಸ್ ರವರು ಶ್ರಮಣಕಾವ್ಯ ಕೋಟಿಯಲ್ಲಿ ಈ ಪ್ರಕಾರದ ಸಾಹಿತ್ಯವನ್ನು ಗಣನೆ ಮಾಡಿ ಮಹಾಭಾರತ, ಧಮ್ಮಪದ, ಸುತ್ತನಿಪಾತವೇ ಮುಂತಾದವುಗಳೊಡನೆ ಈ ಸೂತ್ರವನ್ನು ತುಲನೆ ಮಾಡಿದ್ದಾರೆ. ನೇಮಿಚಂದ್ರಸೂರಿ(ಅಪರನಾಮ ದೇವೇಂದ್ರಗಣಿ)ಯ ಸುಖ ಬೋಧಾ ಎಂಬ ಇದರ ವ್ಯಾಖ್ಯಾನವು ಪ್ರಸಿದ್ದವಿದೆ. (ಚಾರ್ಲ್ ಶಾರ್ಪೆಂಟಿಯರ್ ಎಂಬುವರು ಆಂಗ್ಲ ಪ್ರಸ್ತಾವನೆಯೊಡನೆ ಮೂಲ ಪಾಠದ ಸಂಶೋಧನೆ ಮಾಡಿದ್ದಾರೆ. ಹೆರ್ಮನ್ ಜಾಕೋಬಿಯವರು 'ಸೇಕ್ರೆಡ್ ಬುಕ್ಸ್ ಆಫ್ ದಿ ಈಸ್ಟ್' ಮಾಲೆಯ ೪೫ನೇ ಭಾಗದಲ್ಲಿ ಆಂಗ್ಲಾನುವಾದ ಸಹಿತ ಇದನ್ನು ಪ್ರಕಾಶಡಿಸಿದ್ಧಾರೆ.

ಇದರಲ್ಲಿ ೩೬ಅಧ್ಯಯನಗಳಿವೆ.[೩೪] ಇವುಗಳಲ್ಲಿ ನೇಮಿಪ್ರವ್ರಜ್ಯಾ, ಹರಿಕೇಶ ಅಖ್ಯಾನ, ಚಿತ್ತಸಂಭೂತಿ ಕಥಾ, ಮೃಗಾಪುತ್ರಾಖ್ಯಾನ, ರಥನೇಮೀ–ರಾಜೀಮತೀ ಸಂವಾದ, ಕೇಶೀ–ಗೌತಮ ಸಂವಾದ ಇವೇ ಮುಂತಾದುವು ವಿಶೇಷ ಉಲ್ಲೇಖನೀಯ ವಾಗಿವೆ. ಭದ್ರಬಾಹುವಿನ ನಿರ್ಯುಕ್ತಿಯನುಸಾರ ಇದರ ಅಧ್ಯಯನಗಳಲ್ಲಿ ಕೆಲವು ಜಿನಭಾಷಿತಗಳು, ಕೆಲವು ಪ್ರತ್ಯೇಕ ಬುದ್ದರಿಂದ ಪ್ರರೂಪಿತವಾದುವು. ಮತ್ತೆ ಕೆಲವು ಸಂವಾದರೂಪದಲ್ಲಿ ನಿರೂಪಿತವಾದುವಾಗಿವೆ. ಇದರ ಮೊದಲನೇ ಅಧ್ಯಯನದಲ್ಲಿ ವಿನಯದ ವರ್ಣನೆಯಿದೆ. ವಾದಿವೇತಾಲ ಶಾಂತಿ ಸೂರಿಯವರ ಕಥನದಂತೆ ಇದರ ಎರಡನೇ ಅಧ್ಯಾಯವನ್ನು ದೃಷ್ಟಿವಾದದಿಂದ ತೆಗೆದುಕೊಳ್ಳಲಾಗಿದೆ. ಹತ್ತನೇ ಅಧ್ಯಾ ಯವು ಸ್ವಯಂ ಮಹಾವೀರನ ಕಥನವಾಗಿದೆ. ಎಂಟನೆಯ ಕಾಪಿಲೀಯ ಅಧ್ಯಯನವು ಪ್ರತ್ಯೇಕ ಬುದ್ದ ಕಪಿಲನಿಂದ ಪ್ರರೂಪಿತವಾಗಿದೆ ಇಪ್ಪತ್ತಮೂರನೆಯ ಕೇಶೀ–ಗೌತಮ ಸಂವಾದ ಅಧ್ಯಯನವು ಸಂವಾದ ರೂಪದಿಂದ ಪ್ರಸ್ತುತವಿದೆ ಎರಡನೇ ಅಧ್ಯಯನ ದಲ್ಲಿ ಸಾಧುವಿಗೆ ಪರೀಷಹ ಜಯವನ್ನು ಮುಖ್ಯವಾದುದೆಂದು ಹೇಳಿದೆ[೩೫] ಒಂಭತ್ತನೆಯ ನಮಿಪವ್ವಜ್ಜಾದ ಕಥನ ಶೈಲಿಯು ಮಹಾಜನಕ ಚಾತಕ (೫೩೯) ಮತ್ತು ಮಹಾಭಾರತದ ಶಾಂತಿಪರ್ವದ (೧೨–೧೭೮) ಜೊತೆ ಹೋಲಿಕೆಯುಳ್ಳದ್ದಾಗಿದೆ. ೨೨ನೇ ಅಧ್ಯಯನದಲ್ಲಿ ಅರಿಷ್ಟನೇಮಿ ಮತ್ತು ರಾಜೀಮತಿಯರ ಕಥೆಯಿದೆದೆ

ರಹನೇಮಿ–ರಹನೇಮಿ ಅಹಂ ಭದ್ಧೇ ಸುರೂವೇ ಚಾರುಭಾಸಣೀ ।

ಮಾ ಮಂ ಭಯಾಹಿ ಸುತಣು ನ ತೇ ಪೀಲಭವಿಸ್ಸೀ ॥

ಏಹಿ ತಾ ಭುಂಜಿಮೋ ಭೋಏ ಮಾಣುಸಂ ಖು ಸುದುಲ್ಲಹಂ ।

ಭುತ್ತಭೋಗೀ ಪುಣೋ ಪಚ್ಛಾ ಜಿಣಮಗ್ಗಂ ಚರಿಸ್ಸಮೋ ।

ರಾಜೀಮತಿ–ಜೀ ಸಿ ರೂವೇಣ ವೇಸಮಣೋ ಲಲಿಏಣ ನಲಕೂಬರೋ ।

ತಹಾವಿತೇ ನ ಇಚ್ಛಾಮಿ ಜಇಸಿ ಸಕ್ಖಂ ಪುರಂದರೋ ॥

ಧೀರತ್ಥು ತೇ ಜಸೋಕಾಮಿ ; ಜೋ ತಂ ಜೀವಿಯಕಾರಣಾ ।

ವಂತೇ ಇಚ್ಛಸಿ ಆವೇಉಂ ಸೇಯಂ ತೇ ಮರಣಂ ಭವೇ * ॥

ಜಇ ತಂ ಕಾಹಿಸಿ ಭಾವಂ ಜಾ ಜಾ ದಿಚ್ಛಸಿ ನಾರಿಓ ।

ವಾಯಾ ವಿದ್ಧುವ್ವ ಹಡೋ ಅಟ್ಠಿ ಅಪ್ಪಾ ಭವಿಸ್ಸಸಿ ॥

* ಹೋಲಿಸಿ : ಧಿರತ್ಥು ತಂ ವಿಸಂ ವಂತಂ ಯಮಹಂ ಜೀವಿತಕಾರಣಾ ।

ವಂತಂ ಪಚ್ಚಾವವಿಸ್ಸಾಮಿ ಮತಂ ಮೇ ಜೀವಿತಾ ವರಂ ॥

(ವಿಸವಂತ ಜಾತಕ–೬೯)

ಆವಸ್ಸಯ : (ಆವಶ್ಯಕ) ಇದನ್ನು ಆವಸ್ಸಗವೆಂದೂ ಹೆಸರಿಸುವ ರೂಢಿಯಿದೆ. (ಷಡಾವಶ್ಯಕ ಸೂತ್ರ) ಇದರಲ್ಲಿ ಆರು ಆವಶ್ಯಕ ಕ್ರಿಯೆಗಳ ಅನುಷ್ಠಾನದ ಉಲ್ಲೇಖವಿದೆ. ಸಾಮಾಯಿಕ, ಚತುರ್ವಿಂಶತಿಸ್ತವ, ವಂದನ, ಪ್ರತಿಕ್ರಮಣ, ಕಾಯೋತ್ಸರ್ಗ ಮತ್ತು ಪ್ರತ್ಯಾಖ್ಯಾನಗಳೆಂಬ ಆರು ಅಧ್ಯಾಯಗಳಿವೆ. ಇದರ ಮೇಲೆ ಭದ್ರಬಾಹುವಿನ ನಿರ್ಯುಕ್ತಿಯಿದೆ. ಜಿನಭದ್ರ ಗಣಿಯವರು ವಿಶೇಷಾವಶ್ಯಕ ಭಾಷ್ಯ ರಚನೆ ಮಾಡಿದ್ದಾರೆ.

ಹರಿಭದ್ರ ಸೂರಿಯವರು ಶಿಷ್ಯಹಿತ ಎಂಬ ಟೀಕೆ ರಚನೆ ಮಾಡಿದ್ದಾರೆ, ಮತ್ತೊಂದು ಟೀಕೆ ಮಲಯಗಿರಿಯವರಿಂದ ರಚಿತವಾಗಿದೆ. ಹರಿಭದ್ರಸೂರಿಯವರ ಟೀಕೆಯಲ್ಲಿ ೩೫ ಅಧ್ಯಯನಗಳಿದ್ದು ಇಲ್ಲಿ ಅನೇಕ ಪ್ರಾಚೀನ ಸಂಸ್ಕೃತ ಪ್ರಾಕೃತ ಕಥೆಗಳು ಸಮಾವಿಷ್ಟವಾಗಿವೆ.

ರಾಗದ್ವೇಷ ರಹಿತ ಸಮಭಾವವು ಸಾಮಾಯಿಕವು. ಇಪ್ಪತ್ತನಾಲ್ಕು ತೀರ್ಥಂಕರರ ಸ್ತವನವು – ಚತುರ್ವಿಂಶತಿಸ್ತವವು. ಮೂರನೆಯ ವಂದನ ಅವಶ್ಯಕದಲ್ಲಿ ಶಿಷ್ಯನು ಗುರುವಿನ ಬಳಿ ಕುಳಿತು ಕ್ಷಮಾಯಾಚನೆ ಸುಖ ಪ್ರಶ್ನೆ, ಮಾಡುವ ಕ್ರಮವಿದೆ. ಪ್ರತಿಕ್ರಮಣ : ಪ್ರಮಾದವಶವಾಗಿ ಶುಭ ಯೋಗದಿಂದ ಚ್ಯುತನಾಗಿ ಅಶುಭಯೋಗ ಹೊಂದಿದಲ್ಲಿ ಮತ್ತೆ ಶುಭಯೋಗ ಹೊಂದುವುದು ಪ್ರತಿಕ್ರಮಣವು : ಹತ್ತು ಪ್ರಕಾರದ ಶ್ರಮಣಧರ್ಮದ ಆಚರಣೆಯಲ್ಲಿ ಲೋಪದೋಷಗಳೇರ್ಪಟ್ಟಿದ್ದಲ್ಲಿ ಅದು ಮಿಥ್ಯೆಯಾಗಲಿ ಎಂದು ಪ್ರಾರ್ಥನೆ ಮಾಡುತ್ತಾ ಸರ್ವಸಾಧುಗಳಿಗೆ ತಲೆಬಾಗಿ ನಮಸ್ಕರಿಸುವನು. ಕಾಯೋತ್ಸರ್ಗದಲ್ಲಿ ಮುನಿಯು ಶರೀರವನ್ನು ಚಲನಮಾಡದೆ ಧ್ಯಾನದಲ್ಲಿ ನಿರತನಾಗಿರುವ ಕ್ರಮವಿದೆ. ಆರನೆಯ ಪ್ರತ್ಯಾಖ್ಯಾನ ಸರ್ವಸಾವದ್ಯ (ದೋಷಾಸ್ಪದ) ಕರ್ಮಗಳಿಂದ ನಿವೃತ್ತನಾಗುವ ಆವಶ್ಯಕತೆಯು ಹೇಳಲ್ಪಟ್ಟಿದೆ.

೩. ದಸವೇಯಾಲಿಯ: (ದಶವೈಕಾಲಿಕ) ವಿಧ್ಯುಕ್ತ ಕಾಲವನ್ನು ಬಿಟ್ಟು ವಿಕಾಲದಲ್ಲಿ ಇದರ ಅಧ್ಯಯನ ಮಾಡಲಾಗುವುದು. ಆದ್ದರಿಂದ ಇದಕ್ಕೆ ದಶವೈಕಾಲಿಕವೆಂದು ಹೆಸರು. ಇದರ ರಚನಕಾರರು ಶಯ್ಯಂಭವ, ಸೂರಿ ಇವರು ಪ್ರವ್ರಜಿತರಾಗುವ ಸಮಯಕ್ಕೆ ಇವರ ಪತ್ನಿ ಗರ್ಭಿಣಿಯಾಗಿದ್ದಳು. ಆಕೆಯಲ್ಲಿ ಜನಿಸಿದ ಮಗನ ಹೆಸರು ಮಣಗ. ಇವನು ಪ್ರಾಪ್ತ ವಯಸ್ಕನಾದ ಬಳಿಕ ತನ್ನ ತಂದೆಯನ್ನು ಕುರಿತು ವಿಚಾರ ಮಾಡಿದನು. ತಂದೆಯು ದೀಕ್ಷಿತನಾಗಿರುವ ಸಂಗತಿಯನ್ನು ತಿಳಿದು ಹುಡುಕುತ್ತಾ ಬಂದು ಚಂಪಾಪುರದಲ್ಲಿ ವಿಹರಿಸಿದ್ದ ಅವರನ್ನು ಸಂದರ್ಶಿಸಿದನು.ತನ್ನ ಮಗನಿಗೆ ಕೇವಲ ಆರು ತಿಂಗಳ ಆಯುಷ್ಯ ಉಳಿದಿರುವುದನ್ನು ತಿಳಿದ ಶಯ್ಯಂಭವರು ಮಗನಿಗಾಗಿ ಹತ್ತು ಅಧ್ಯಯನಗಳಲ್ಲಿ ದಶವೈಕಾಲಿಕದ ರಚನೆ ಮಾಡಿದರು. ಇದರ ಅಂತ್ಯದಲ್ಲಿರುವ ಎರಡು ಚೂಲಿಕೆಗಳು ಶಯ್ಯಂಭವರಿಂದ ರಚಿತವಾದವುಗಳಲ್ಲವೆಂದು ತಿಳಿಯಲಾಗಿದೆ. ಭದ್ರಬಾಹುವಿನ ಅನುಸಾರ (ನಿರ್ಯುಕ್ತಿ ೧೬ –೧೭) ದಶವೈಕಾಲಿಕದ ನಾಲ್ಕನೇ ಅಧ್ಯಯನವು ಆತ್ಮಪ್ರವಾದ ಪೂರ್ವದಿಂದಲೂ, ಐದನೆಯದು ಕರ್ಮ ಪ್ರವಾದ ಪೂರ್ವದಿಂದಲೂ ಏಳನೆಯದು ಸತ್ಯಪ್ರವಾದ ಪೂರ್ವದಿಂದಲೂ, ಮಿಕ್ಕ ಅಧ್ಯಯನಗಳು

ಪ್ರತ್ಯಾಖ್ಯಾನ ಪೂರ್ವದ ಮೂರನೇ ವಸ್ತುವಿನಿಂದಲೂ ಉದ್ಧೃತವಾಗಿವೆ. ಇದರ ಮೇಲೆ ಭದ್ರಬಾಹುವಿನ ನಿರ್ಯುಕ್ತಿಯಿದೆ.

ಭಾಷಾಶಾಸ್ತ್ರ ದೃಷ್ಟಿಯಿಂದ ಇದನ್ನು ಬಹುಮಹತ್ವಪೂರ್ಣವಾದುದನ್ನಾಗಿ ಪಿಶೆಲ್ ರವರು ಗ್ರಹಿಸಿದ್ದಾರೆ.

ಮೊದಲ ಅಧ್ಯಯನ ದ್ರುಮ ಪುಷ್ಪಿತ: ಸಾಧುವಿಗೆ ಭ್ರಮರ ಉಪಮಾನ.

ಜಹಾ ದುಮಸ್ಸ ಪುಪ್ಫೇಸು ಭಮರೋ ಆವಿಯೈ ರಸಂ ।
ನ ಯ ಪುಷ್ಪಂ ಕಿಲಾಮೇಇ ಸೋ ಯ ಪೀಣೇಇ ಅಪ್ಪಯಂ ॥

ಇದರೊಡನೆ ಧಮ್ಮಪದ ಪುಪ್ಫವಗ್ಗದ (೬) ಹೋಲಿಕೆ ನೋಡಿ

ಯಥಾಪಿ ಭವರೋ ಪುಷ್ಪಂ ವಣ್ಣಗಂಧಂ ಅಹೇರಯಂ ।
ಪಲೇತಿ ರಸಮಾದಾಯ ಏವಂ ಗಾಮೇ ಮುನೀ ಚರೇ ॥

ಇದರ ಅನೇಕ ಗಾಹೆಗಳು ಉತ್ತರಾಧ್ಯಯನದ ೨೨ನೇ ಅಧ್ಯಾಯದೊಡನೆ ಸಮಾನತೆಯುಳ್ಳವಾಗಿವೆ. ಹಾಗೂ ಆಚಾರಾಂಗ ಸೂತ್ರದೊಡನೆಯೂ ಸಮ್ಯತೆ ಹೊಂದಿವೆ.

ತ್ಯಾಗಿಯ ಸವರೂಪ

ವತ್ಥಗಂಧಮಲಂಕಾರಂ ಇತ್ಥೀಓ ಸಯಣಾಣಿಯ ।
ಅಚ್ಛಂದಾ ಜೇನ ಭುಂಜಂತಿ ನ ಸೇ ಚಾಇತ್ತಿ ವುಚ್ಚೇಇ ॥

ಸಮಭಾವನೆಯ ರಕ್ಷಣೆ

ಸಮಾಏ ಪೇಹಾಏ ಪರಿವ್ವಯಂತೋ ಸಿಯಾ ಮಣೋ ನಿಸ್ಸರಈ ಬಹಿದ್ಧಾ ।
ನ ಸಾ ಮಹಂ ನೋ ವಿ. ಅಹಂ ಪಿ ತೀಸೇ ಇಚ್ಚೇವ ತಾಓ ವಿಣವಿಜ್ಜ ರಾಗಂ ॥

ಕ್ಷುಲ್ಲಿಕಾಚಾರವೆಂಬ ಮೂರನೇ ಅಧ್ಯಯನದಲ್ಲಿ ಸಾಧುವಿನ ಮಾಂಷಾರ ಮತ್ತು ಮಧ್ಯಪಾನಗಳು ಅಪವಾದಾತ್ಮಕವಾಗಿ ಅಂಗೀಕೃತವಿದೆ (ಪ್ರಾ. ಸಾ. ಇತಿಹಾಸ. ಪು. ೧೭೭)

ಅಹಿಂಸೆಯ ಆವಶ್ಯಕತೆಯನ್ನು ಕುರಿತು

ಸವ್ವಜೀವಾ ವಿ ಇಚ್ಛಂತಿ ಜೀವಿಉಂ ನ ಮರಿಜ್ಜಿಉಂ ।
ತಮ್ಹಾ ಪಾಣವಹಂ ಘೋರಂ ನಿಗ್ಗಂಥಾ ವಜ್ಜಯಂತಿ ಣಂ ॥

ಪರಿಗ್ರಹ ಸಂಬಂಧವಾಗಿ

ಜಂ ಪಿ ವತ್ಥಂಚ ಪಾಯಂ ವಾ ಕಂಬಲಿಂ ಪಾಯಪುಂಛಣಂ ।ಸ್
ತಂ ಪಿ ಸಂಜಮಲಜ್ಜಟ್ಠಾ ಧಾರೇಂತಿ ಪರಿಹರೇಂತಿ ಯ ।

ನ ಸೋ ಪರಿಗ್ಗಹೋ ವುತ್ತೋ ನಾಯಪುತ್ತೇಣ ತಾಇಣಾ ।
ಮುಚ್ಛಾ ಪರಿಗ್ಗಹೋ ವುತ್ತೊ ಇಇ ವುತ್ತಂ ಮಹೇಸಿಣಾ ॥

ಧರ್ಮಾಚರಣೆಯ ಉಪದೇಶ

ಜರಾ ಜಾವ ನ ಪೀಲೇಇ ವಾಹೀ ಜಾವ ನ ವಡ್ಢ ಇ ।
ಜಾವಿಂದಿಯಾ ನ ಹಾಯಂತಿ ತಾವ ಧಮ್ಮಂ ಸಮಾಚರೇ ॥

ಸ್ತ್ರೀಯರಿಂದ ದೂರವಿರುವ ಉಪದೇಶ

ಜಹಾಕುಕ್ಕುಡಪೋಯಸ್ಸ ನಿಚ್ಚಂ ಕುಲಲಓ ಭಯಂ ।
ಏವಂ ಖು ಮ್ಭಚಾರಿಸ್ಸ ಇತ್ಥೀ ವಿಗ್ಗಹಓ ಭಯಂ ॥

ಚಿತ್ತಭಿತ್ತಿಂ ನ ನಿಜ್ಝಾಫ ನಾರಿಂ ವಾ ಸುಅಲಂಕಿಅಂ ।
[೩೭]ಭಕ್ಖರಂ ಪಿ ವ ದಟ್ಠೂಣಂ ದಿಟ್ಠಿಂ ಪಡಿಸಮಾಹರೇ ॥
ಹತ್ಥಪಯಪಡಿಚ್ಛಿನ್ನಂ ಕಣ್ಣವಾಸವಿಗಪ್ಪಿಯಂ ।
ಅವಿವಾಸಸ್ಯೆಂ, ನಾರಿಂ ಬಂಭಯಾರೀ ವಿವಜ್ಜಏ ॥

(೪) ಪಿಂಡನಿಜ್ಜುತ್ತಿ (ಪಿಂಡನಿರ್ಯುಕ್ತಿ) : ಪಿಂಡವೆಂದರೆ ಭೋಜನ. ಈ ಗ್ರಂಥ ದಲ್ಲಿ ಉದ್ಗಮ, ಉತ್ಪಾದನ, ಏಷಣಾ ಮತ್ತು ಗ್ರಾಸ ಏಷಣಾ ದೋಷಗಳ ಪ್ರರೂಪಣೆ  ಯಿದೆ. ೬೭೧ ಗಾಹೆಗಳಿವೆ. ನಿರ್ಯುಕ್ತಿ ಮತ್ತು ಭಾಷ್ಯದ ಗಾಹೆಗಳು ಕಲೆತುಹೋಗಿವೆ. ಇದರ ಕೃರ್ತ ಭದ್ರಬಾಹು. ದಶವೈಕಾಲಿಕದ ಐದನೇ ಅಧ್ಯಾಯದ ಹೇಸರು ಪಿಂಡೈಷಣಾ. ಇದರ ಮೇಲೆ ಬರೆದ ನಿರ್ಯುಕ್ತಿಯು ವಿಸ್ತೃತವಾದದ್ದರಿಂದ ಅದನ್ನು ಪಿಂಡನಿರ್ಯುಕ್ತಿ ಎಂಬ ಹೆಸರಿನಿಂದ ಪ್ರತ್ಯೇಕ ಆಗಮವಾಗಿ ಸ್ವೀಕರಿಸಲಾಗಿದೆ.

ಓಹನಿಜ್ಜುತ್ತಿ (ಓಘನಿರ್ಯುಕ್ತಿ) : ಓಘು ಎಂದರೆ ಸಾಮಾನ್ಯ ಅಥವಾ ಸಾಧಾರಣ. ಶ್ರಮಣಾಚಾರದ (ಸಾಮಾಚಾರೀ) ಸಾಧಾರಣ ನಿರೂಪಣೆಯಲ್ಲಿದೆ. ಕರ್ತೃ ಭದ್ರಬಾಹು. ಇದನ್ನು ಆವಶ್ಯಕ ನಿರ್ಯುಕ್ತಿಯ ಅಂಶವೆಂದು ಗ್ರಹಣೆ ಮಾಡಲಾಗಿದೆ. ಪಿಂಡನಿರ್ಯುಕ್ತಿಯಂತೆ ಇದರಲ್ಲಿ ಸಾಧುಗಳ ಆಚಾರ ವಿಚಾರದ ಪ್ರತಿಪಾದನೆಯಿದೆ. ಇದನ್ನೂ ಛೇದಸೂತ್ರಗಳಲ್ಲೊಂದಾಗಿ ಗಣನೆ ಮಾಡಿರುವುದು ಕಂಡುಬರುತ್ತದೆ. ಪ್ರತಿಲೇಖನದ್ವಾರ, ಪಿಂಡದ್ವಾರ, ಉಪಧಿ ನಿರುಪಣ, ಅನಾಯತನ ವರ್ಜನ, ಪ್ರತಿ
ಸೇವನಾದ್ವಾರ, ಆಲೋಚನಾದ್ವಾರ ಮತ್ತು ವಿಶುದ್ಧಿದ್ವಾರಗಳ ಪ್ರರೂಪಣೆವಿದೆ. ೮೧೧ ಗಾಹೆಗಳಿವೆ.

(ಪ್ರಾ. ಸಾ. ಕಾ. ಇತಿಹಾಸ. ಅಪು. ೧೮೩ ಅ. ಟಿ. ೧. ವಿಧಿಪೂರ್ವಕ ನಡೆಸಿದ ಹಿಂಸೆಯು ದುರ್ಗತಿಗೆ ಕಾರಣವಲ್ಲವೆಂದು ಹೇಳಿದೆ. ಮಾಹಾಭಾರತ ಶಾಂತಿ ಪರ್ವ (೧೨-೧೪೧ ಆದಿ)ಯಲ್ಲಿ ಆಪದ್ಧರ್ವವೆನಿಸಿ ವಿಶ್ವಾಮಿತ್ರ ಋಷಿಯು ಕಳ್ಳತನಕ್ಕೆ ಬಾಧ್ಯನಾದನು, ಇತ್ಯಾದಿ)

ಸಂಯಮವು ಆತ್ಮರಕ್ಷಣೆಗಾಗಿ

ಸವ್ವತ್ಥ ಸಂಜಮಂ ಸಂಜಮಾ ಉ ಅಪ್ಪಾಣಮೇವ ರಕ್ಖಿಜ್ಜಾ ।
ಮುಚ್ಚೈಇ ಅಇವಾಯಾಓ ಪುಣೋ ವಿಸೋಹೀ ನ ಯಾ ವಿರಈ ॥
ಸಂಜಮಹೇಉಂ ದೇಹೋ ಧಾರಿಜ್ಜ ಇ ಸೋ ಕಓ ಉ ತದಭಾವೇ ।
ಸಂಜಮಘಾಇ ನಿಮಿತ್ತಂ ದೇಹಪರಿಪಾಲಣಾ ಇಟ್ಠಾ ॥

ಉಪದಿಯ ನಿರೂಪಣೆಯಲ್ಲಿ ಜಿನಕಲ್ಪಿಗಳಿಗೆ, ಮುಂದಿನ ಹನ್ನೆರಡು ತರಹದ ಉಪಧಿಗಳನ್ನು ವಿಧಾಯಮಾಡಿದೆ. ಪಾತ್ರ೧, ಪಾತ್ರಬಂಧ೨, ಪಾತ್ರಸ್ಥಾಪನ೩, ಪಾತ್ರ ಕೇಸರಿಕಾ೪,(ಪಾತ್ರಮುಖವಸ್ತ್ರಿಕಾ) ಪಟಲ೫ (ಭೋಜನ ಪಾತ್ರೆಯಲ್ಲಿ ಪುಷ್ಪ ಮೊದಲಾದವುಗಳು ಬೀಳದಿರುವುದಕ್ಕಾಗಿ ಸಾಧಾರಣವಾಗಿ ಈ ವಸ್ತ್ರದ ಉಪಯೋಗವಾಗುತ್ತಿದ್ದಿತು. ಆದರೆ ಇದರ ಹೊರತಾಗಿ, ಆ ಕಾಲದಲ್ಲಿ ನಗ್ನರಾಗಿ ಸಂಚರಿಸುತ್ತಿದ್ದ ಮುನಿಗಳು ತಮ್ಮ ಲಿಂಗವನ್ನು ಮುಚ್ಚಿಕೊಳ್ಳುವುದಕ್ಕಾಗಿಯೂ ಇದರ ಉಪಯೋಗ ಪಡೆಯುತ್ತಿದ್ದರು), ರಜಸ್ತ್ರಾಣ೬, ಗೊಚ್ಛಕ೭, ಮೂರು ಪ್ರಚ್ಛಾದಕ೮,೯,೧೦, ರಜೋಹರಣ೧೧, ಮುಖವಸ್ತ್ರಿಕಾ೧೨, ಇವುಗಳೊಡನೆ ಮಾತ್ರಕ ಮತ್ತು ಚೋಲಪಟ್ಟಗಳನ್ನು ಸೇರಿಸಿದಲ್ಲಿ ಸ್ಥವಿರಕಲ್ಪದ ಹದಿನಾಲ್ಕು ಉಪಧಿಗಳಾಗುವವು. ಆರ್ಯಿಕೆಯರಿಗೆ,೨೪ ಉಪಕರಣಗಳು. ಇಲ್ಲಿ (ಪುಟ ೧೫೨ರಲ್ಲಿ ) 'ಚಾಣಕ್ಕಪಿವಿ ಭಣಿಯಂ' ಜಹ ಕಾಇಯಂನ ವೋಸಿದೇಇ ತತೋ ಆವೇಸೋ ಎಂದು ಹೇಳಿದೆ.

ಪಕ್ಖಿಯಸುತ್ತ (ಪಾಕ್ಷಿಕ ಸೂತ್ರ) : ಇದು ಆವಶ್ಯಕ ಸೂತ್ರದಲ್ಲಿ ಅಂತರ್ಗತ ವಾಗುವುದು. ಜೈನಧರ್ಮದಲ್ಲಿ ದೈವಸಿಕ, ರಾತ್ರಿಕ, ಪಾಕ್ಷಿಕ, ಚಾತುರ್ಮಾಸಿಕ ಮತ್ತು ಸಾಂವತ್ಸರಿಕ ಎಂಬ ಐದು ಪ್ರಕಾರದ ಪ್ರತಿಕ್ರಮಣಗಳಿವೆ. ಇವುಗಳಲ್ಲಿ ಪಾಕ್ಷಿಕ ಪ್ರತಿಕ್ರಮಣದ ವಿಧಾನವು ಇಲ್ಲಿ ನಿರೂಪಿತವಾಗಿದೆ.

ಖಾಮಣಾ ಸುತ್ತ (ಕ್ಷಾಮಣಾಸೂತ್ರ) : ಇದು ಪಾಕ್ಷಿಕ ಸೂತ್ರಾಂತರ್ಗತವಾದು ದೆಂದು ಕೆಲವರು ವಾದ ಮಾಡಿದ್ದಾರೆ.

ವಂದಿತ್ತು ಸುತ್ತ : ಇದನ್ನು ಶ್ರಾದ್ದ ಪ್ರತಿಕ್ರಮಣ ಸೂತ್ರವೆಂದೂ ಹೆಸರಿಸಿದೆ. ಇದರ ಮೊದಲ ಗಾಹೆ 'ವಂದಿತ್ತು ಸವ್ವಸಿದ್ದೇ' ಎಂದು ಇರುವುದಾದ್ದರಿಂದ ಇದಕ್ಕೆ ಈ ಹೆಸರು ಬಂದಿದೆ. ಇದು ಗಣಧರರಿಂದ ರಚಿತವಾದುದೆಂದು ಸನ್ಮಾನಿತವಾಗಿದೆ. ಇಸಿಭಾಸಿಯ (ಋಷಿಭಾಷಿತ): ಪ್ರತ್ಯೇಕ ಬುದ್ದ ಭಾಷಿತವಾದ್ದರಿಂದ ಇದಕ್ಕೆ ಋಷಿ ಭಾಷಿತವೆಂದು ಹೆಸರು. ಇದರಲ್ಲಿ ನಾರದ,ಅಂಗರಿಸಿ,ಕುಮ್ಮಾಪುತ್ತ (ಥೇರಗಾಥಾರಲ್ಲಿ ಕುಮ್ಮಾಪುತ್ತಸ್ಥವಿರನ ಉಲ್ಲೆಖವಿದೆ). ಮಹಾಕಾಸವ, ಮಂಬಲಿಪುತ್ತ ,ಬಾಹುಕ, ರಾಮಪುತ್ತ, ಅಮ್ಮಡ ಮಾಯಂಗ ,ವಾರತ್ತಯ, ಇಸಿಗಿರಿ, ಅದ್ದಾಲಯ, ದೀವಾ ಯಣ, ವೇಸಮಣ,ಮುಂತಾದ ಪ್ರತ್ಯೇಕ ಬುದ್ದರ ಚಾರಿತ್ರ ನಿರೂಪಣೆ ೪೫ ಅಧ್ಯನಗಳಲ್ಲಿದೆ. ಇವುಗಳಲ್ಲಿ ಅನೇಕ ಅಧ್ಯಯನಗಳು ಪದ್ಯಾತ್ಮಕವಾಗಿವೆ. ಸೂತ್ರ ಕೃತಾಂಗ ೩೪–೨, ೩, ೪, ಪು.೯೪, ಅ. ೯೫ರಲ್ಲಿ ರಾಮಗುಪ್ತ, ರಾಜರ್ಷಿ, ಬಾಹುಕ, ನಾರಾಯಣ ಮಹರ್ಷಿ,ಅಸಿತದೇವಲಿ, ದ್ವೀಪಾಯನ, ಪರಾಶರ ಮುಂತಾದ ಮಹಾಪುರುಷರು ಸಮ್ಯಕ್ಚಾರಿತ್ರ ಪಾಲನೆ ಮಾಡಿ ಮೋಕ್ಷ ಪಡೆದರೆಂದು ಹೇಳಿದೆ. ಚೆಉ ಸರಣದ ಟೀಕೆ(೬೪)ರಲ್ಲಿಯೂ ಅನ್ಯಲಿಂಗ ಸಿದ್ಧರಲ್ಲಿ ವಲ್ಕಲಚೀರೀ ಮುಂತಾದವರು, ಹಾಗೂ ಅಜಿನಸಿದ್ಧರಲ್ಲಿ ಪುಂಡರಿಕ, ಗೌತಮ ಮುಂತಾದವರ ಉಲ್ಲೇಖವಿದೆ.

ನಂದೀ ಮತ್ತು ಅನುಯೋಗದ್ವಾರ: ಇವೆರಡು ಆಗಮಗಳು ಇತರ ಆಗಮಗ್ರಂಥಗಳ ಅಪೇಕ್ಷೆಯಿಂದ ಅರ್ವಾಚೀನವಾದುವ್. ನಂದೀ ಆಗಮ ಕರ್ತೃ ದೂಷ್ಯಗಿಣಿ ಶಿಷ್ಯ ದೇವವಾಚಕ, ಕೆಲವರು ಇವರನ್ನು ದೇವರ್ಧಿಗಣಿಯಿಂದ ಅಭಿನ್ನರೆಂದು ತರ್ಕಿಸುತ್ತಾರೆ. ಆದರೆ ಗಚ್ಛ ಪರಂಪರೆಗಳು ಭಿನ್ನವಾಗಿರುವುದರಿಂದ ಈ ಏಕವ್ಯಕ್ತಿತ್ವವಾದುವು ಸಮಂಜಸವಾಗಿಲ್ಲವೆಂದು ಕಂಡುಬರುತ್ತದೆ.

ನಂದಿಸೂತ್ರದಲ್ಲಿ ೯೦ ಪದ್ಯಾತ್ಮಕ ಗಾಥೆಗಳು ಮತ್ತು ೫೬ ಸೂತ್ರಗಳಿವೆ . ಆರಂಭದಲ್ಲಿ ಮಹಾವೀರ, ಸಂಘ, ಶ್ರಮಣರ ಸ್ತುತಿಯಿದೆ. ಸ್ಥವಿರಾವಲಿಯಲ್ಲಿರುವ ಭದ್ರಬಾಹು, ಸ್ಥೂಲಭದ್ರ, ಮಹಾಗಿರಿ, ಆರ್ಯಶ್ಯಾಮ, ಆರ್ಯಸಮುದ್ರ, ಆರ್ಯಮಂಗು, ಆರ್ಯ ನಾಗಹಸ್ತಿ, ಸ್ಕಂದಿಲ ಆಚಾರ್ಯ, ನಾಗಾರ್ಜುನ, ಭೂತದಿನ್ನ ಮುಂತಾದವರ ಹೆಸರುಗಳು ಮುಖ್ಯವಾದುವು. ಜ್ಞಾನದ ಐದು ಭೇದ ಹಾಗೂ ಮುಂದಿನ ಪ್ರಭೇದಗಳು ಹಾಗೂ ಸಮ್ಯಕ್‌ಶ್ರುತದಲ್ಲಿ ದ್ವಾದಶಾಂಗ ಗಣಿಪಿಟಕದ ಆಚಾರಾಂಗಾದಿ ೧೨ ಭೇದಗಳನ್ನು ಹೇಳಿದೆ. ಮಿಥ್ಯಾಶ್ರುತದಲ್ಲಿ ಭಾರತ, ರಾಮಾಯಣ, ಭೀಮಾಸುರಕ್ಖ, ಕೌಟಿಲ್ಯ (ಸೂತ್ರಕೃತಾಂಗ ಚೂರ್ಣಿ(ಪು. ೨೦೮)ಯಲ್ಲಿ ಚಾಣಕ್ಕಕೋಡಿಲ್ಲ ಮತ್ತು ಬೌದ್ಧ ಚೂಲವಂಸ (೬೪-೩)ದಲ್ಲಿ ಕೋಟಲ್ಲದ ಉಲ್ಲೇಖವಿದೆ.) ಘೋಟಕ ಮುಖ (ಅರ್ಥ ಶಾಸ್ತ್ರ ಪು. ೨೮೨) ಮತ್ತು ಕಲ್ಪಸೂತ್ರ (ಪು.೧೮೮)ದಲ್ಲಿಘೋಟಕಮುಖನ ಉಲ್ಲೇಖ ವಿದೆ. ಮಜ್ಝಿಮನಿಕಾಯ (೩,ಪು. ೧೫೭)ಮುಂತಾದುವನ್ನೂ ನೋಡಬೇಕು. ಸಗಡ ಭದ್ದಿಆ, ಕಪ್ಪಸಿಅ, ನಾಗಸುಹುಮ, ಕನಕಸತ್ತರಿ (ಈಶ್ವರ ಕೃಷ್ಣನ ಸಾಂಖ್ಯಕಾರಿಕಾ) ವಇಸೇಸಿಯ (ವೈಶೇಷಿಕ), ಬುದ್ಧವಚನ, ತ್ರೈರಾಶಿಕ ಕಾಪಿಲಿಕ, ಲೋಕಾಯತ, ಪಷ್ಟಿ ತಂತ್ರ, ಮಾಠರ, ಪುರಾಣ, ವ್ಯಾಕರಣ, ಭಾಗವತ, ಪಾತಂಜಲಿ, ಪುಸ್ಸ ದೇವಯ, ಗಣಿತ, ಶಕುನಯಿತ, ನಾಟಕಾದಿ ೭೨ ಕಲೆಗಳು ಮತ್ತು ಸಾಂಗೋಪಾಂಗ ನಾಲ್ಕು ವೇದಗಳ ಗಣನೆಮಾಡಿದೆ.

ಅನುಯೋಗದ್ವಾರ : ಇದು ಆರ್ಯರಕ್ಷಿತರ ರಚನೆಯೆಂದು ಹೇಳಲಾಗಿದೆ. ವಿಷಯ ಮತ್ತು ಭಾಷಾದೃಷ್ಟಿಯಿಂದ ಇದು ಬಹಳ ಅರ್ವಾಚೀನವಾದುದೆಂದು ವ್ಯಕ್ತವಾಗುತ್ತದೆ. (ಹರಿಭದ್ರಸೂರಿಟೀಕೆಯೊಡನೆ ಪ್ರಕಾಶಿತವಾಗಿದೆ.) ಪ್ರಶ್ನೋತ್ತರ ಶೈಲಿಯಲ್ಲಿ ಪ್ರಮಾಣ-ಪಲ್ಯೋಪಮ, ಸಾಗರೋಪಮ, ಸಂಖ್ಯಾತ, ಅಸಂಖ್ಯಾತ, ಮತ್ತು ಅನಂತದ ಪ್ರಕಾರಗಳು ಹಾಗೂ ನಿಕ್ಷೇಪ, ಅನುಗಮ, ನಯಗಳ ಪ್ರರೂಪಣೆಯಿದೆ.

ನಾಮದ ಹತ್ತು ಪ್ರಕಾರಗಳು ನವಕಾವ್ಯರಸ ಮತ್ತು ದೃಷ್ಟಾಂತ, ಮಿಥ್ಯಾಶಾಸ್ತ್ರ, ಸ್ವರಗಳ ಹೆಸರುಗಳು ಮತ್ತು ತತ್ಸಂಬಂಧಿ ವಿಷಯ ವರ್ಣನೆಯಿದೆ. ಕುಪ್ರವಚನಿಕರಲ್ಲಿ ಚರಕ

ಮುಂತಾದವರನ್ನು ಗಣನೆಮಾಡಿದೆ. ಐದು ಪ್ರಕಾರದ ಸೂತ್ರಗಳಲ್ಲಿ ಅಂಡಯ ಬೋಂಡಯ, ಕೀಡಯ, ಬಾಲಜ, ಮತ್ತು ಕಿಟ್ಟಿಸ ಪ್ರಕಾರಗಳನ್ನು ಗಣನೆ ಮಾಡಿದೆ.

ಆಗಮಗಳ ವ್ಯಾಖ್ಯಾನಸಾಹಿತ್ಯ ಕಾಲ ಕ್ರಿ. ಶ. ೨ ನೇ ಶತಮಾನದಿಂದ ೧೬ ನೇ ಶತಮಾನ ಪರ್ಯಾತ.

ಆಗಮ ಸಾಹಿತ್ಯಕ್ಕೆ ನಿರ್ಯುಕ್ತಿ, ಭಾಷ್ಯ, ಚೂರ್ಣಿ ಟೀಕಾ, ವಿವರಣ, ವಿವೃತ್ತಿ, ವೃತ್ತಿ, ದೀಪಿಕಾ, ಅವಚುರಿ, ಅವಚೂರ್ಣಿ, ವಿವೇಚನವ್ಯಾಖ್ಯಾ, ಛಾಯಾ, ಅಕ್ಷರಾರ್ಥ, ಪಂಜಿಕಾ, ಟಬ್ಬಾ, ಭಾಷಾಟೀಕಾ, ವಚನಕಾ, ಮುಂತಾದ ವಿಪುಲ ಅರ್ಥವ್ಯಾಪಕ,
ಸಾಹಿತ್ಯದ ರಚನೆಯಾಗಿದೆ. ಆಗಮ ಸಾಹಿತ್ಯವನ್ನು ಇಂತಹ ವ್ಯಾಖ್ಯಾನ ಸಾಹಿತ್ಯದ ಸಹಾಯದ ಹೊರತಾಗಿ ಅರ್ಥಮಾಡಿಕೊಳ್ಳುವುದು ದುಸ್ತರವಿದೆ. ವಾಚನಾವೇದ, ಪಾಠ ವೈವಿಧ್ಯತೆ, ವೃದ್ಧ ಸಂಪ್ರದಾಯವಿಚ್ಛಿತ್ತಿಗಳ ಕಾರಣದಿಂದ ಆಗಮ ಸಾಹಿತ್ಯದ ಅರ್ಥವು ಕಾಲಾನುಕ್ರಮದಲ್ಲಿ ದುರೂಹ್ಯವಾಗುತ್ತಾ ಬಂದಿತು. ಟೀಕಾಕಾರರ ಹೇಳಿಕೆಯಿಂದಲೇ ಈ ವಿಷಯವು ಸ್ಪಷ್ಟವಾಗುವುದು. ಈ ಕಾರಣದಿಂದ ಆಗಮ ಗ್ರಂಥಗಳ ಪರಸ್ಪರ ತುಲನಾತ್ಮಕ ಅಧ್ಯಯನದ ಮೂಲಕ ಎಲ್ಲ ಆಗಮಗ್ರಂಥಗಳಿಗೂ ವ್ಯಾಖ್ಯಾನ ಸಾಹಿತ್ಯವು ವಿಪುಲವಾಗಿದೆ. ಪ್ರಾಕೃತ ಸಾಹಿತ್ಯ
ಇತಿಹಾಸದ ಅದ್ಯಯನ ದೃಷ್ಟಿಯಿಂದ ನಿರ್ಯುಕ್ತಿ ಭಾಷ್ಯ ಚೂರ್ಣಿ ಹಾಗೂ ಕೆಲವು ಪ್ರಾಕೃತ ಬದ್ಧ ಟೀಕೆಗಳು ಪ್ರಧಾನವಾಗಿವೆ.

ನಿಜ್ಜುತ್ತಿ (ನಿರ್ಯುಕ್ತಿ) : ವ್ಯಾಖ್ಯಾನಗಳಲ್ಲಿ ಇದಕ್ಕೆ ಸರ್ವಶ್ರೇಷ್ಠಸ್ಥಾನವಿದೆ. ಸೂತ್ರಗಳಲ್ಲಿ ನಿಶ್ಚಯ ಮಾಡಲಾಗಿರುವ ಅರ್ಥವನ್ನು ನಿಬದ್ಧಗೊಳಿಸಿರುವ ದೃಢೀಕರಿಸುವ ಸಾಹಿತ್ಯಕ್ಕೆ ನಿರ್ಯುಕ್ತಿ ಎಂದು ಹೆಸರು. ('ನಿರ್ಯುಕ್ತಾನಾಮೇವ ಸೂತ್ರಾರ್ಥಾನಾಂ ಯುಕ್ತಿಃ ಪರಿಪಾಟ್ಯಾ ಯೋಜನಂ'–ಹರಿಭದ್ರ, ದಶವೈಕಾಲಿಕ–ವೃತ್ತಿಪು.೪) ಇವುಗಳಲ್ಲಿ ವಿಷಯ ಪ್ರತಿಪದಾನೆ ಮತ್ತು ಸ್ಪಷ್ಟೀಕರಣಕ್ಕಾಗಿ ಅನೇಕ ಕಥೆಗಳು ಉಲ್ಲಿಖಿತವಾಗಿವೆ. ಈಸಾಹಿತ್ಯವು ಅತಿಶಯ ಸಾಂಕೇತಿಕ ಮತ್ತು ಸಂಗ್ರಹರೂಪದ್ದಾಗಿರುವುದ

ರಿಂದ, ಭಾಷ್ಯ ಟೀಕೆಗಳ ಸಹಾಯವಿಲ್ಲದೆ ಅರ್ಥವಾಗುವುದು ದುಸ್ಸರ. ಇವು ಪದ್ಯಾತ್ಮಕ ವಾಗಿದ್ದುದರಿಂದ ಕಂಠಸ್ಥ ಮಾಡಿಕೊಳ್ಳುವ ಪರಿಪಾಠವಿದ್ದಿತು. ವಲಭೀ ವಾಚನಾ ಪೂರ್ವದಲ್ಲಿಯೆ ಈ ಸಾಹಿತ್ಯವು ರಚಿತವಾಗಿದ್ದಿತು. ನಯಚಕ್ರ ಕರ್ತೃ ಮಲ್ಲವಾದಿ (ವಿ. ಸಂ. ೫ನೇ ಶತಮಾನ) ಯವರು ತಮ್ಮ ಗ್ರಂಥದಲ್ಲಿ ನಿರ್ಯುಕ್ತಿ ಗಾಹೆಗಳನ್ನು ಉದ್ಧರಿಸಿದ್ದಾರೆ. ಇದರಿಂದಲೂ ಈಸಾಹಿತ್ಯದ ಪ್ರಾಚೀನತೆಯು ಸಮರ್ಥಿತವಾಗುವುದು.

ಆಚಾರಾಂಗ೧, ಸೂತ್ರಕೃತಾಂಗ೨, ಸೂರ್ಯಪ್ರಜ್ಞಪ್ತಿ೩, ವ್ಯವಹಾರ೪, ಕಲ್ಪ೫, ದಶಾಶ್ರುತಸ್ಕಂಧ೬, ಉತ್ತರಾಧ್ಯಯನ೭,ಆವಶ್ಯಕ೮, ದಶರ್ವೈಕಾಲಿಕ೯, ಮತ್ತು ಋಷಿ ಭಾಷಿತಗಳಿಗೆ೧೦ ನಿರ್ಯುಕ್ತಿಗಳನ್ನು ರಚಿಸಲಾಗಿದೆ. ಇವುಗಳ ರಚನಕಾರ ಭದ್ರಬಾಹು ಎಂದು ತಿಳಿಯಲಾಗಿದೆ.

ಭಾಸ (ಭಾಷ್ಯ) : ನಿಶೀಥ, ಕಲ್ಪ ಮತ್ತು ವ್ಯವಹಾರ ಭಾಷ್ಯಗಳ ಪ್ರಣೇತೃ ಹರಿಭದ್ರ ಸೂರಿಯವರ ಸಮಕಾಲೀನ ಸಂಘದಾಸಗಣಿ, ಇವರು ವಸುದೇವ ಹಿಂಡಿಯ ಕರ್ತೃ. ಸಂಘದಾಸ ಗಣಿವಾಚಕರಿಂದನ್ಯರು. ನಿಶೀಥಭಾಷ್ಯದ ಪೀಠಿಕೆಯಲ್ಲಿ ಸಸ, ಏಲಾಸಾಢ, ಮೂಲದೇವ, ಮತ್ತು ಖಂಡಾ ಎಂಬ ಹೆಸರಿನ ನಾಲ್ಕು ಜನ ಧೂರ್ತರ ಮನೋ ರಂಜಕ ಕಥೆಯಿದೆ. ಇದನ್ನು ಹರಿಭದ್ರರು ತಮ್ಮ ಕಥಾಸಾಹಿತ್ಯದಲ್ಲಿ ಧೂರ್ತಾ ಖ್ಯಾನವೆಂಬ ಹೆಸರಿನಿಂದ ರಸಪೂರ್ಣವಾಗಿ ನಿರೂಪಿಸಿದ್ದಾರೆ.

ವ್ಯವಹಾರ ಭಾಷ್ಯದಲ್ಲಿ ಹೇಳಿರುವಂತೆ ಪ್ರ. ಸಾ. ಇ. ಪು. ೨೧೯ ಮಥುರೆಯು ಜೈನರಿಗೆ ಬಹು ಮಹತ್ವಪೂರ್ಣ ಸ್ಥಾನವಾಗಿದ್ದಿತು. ಜೈನ ಮಾನ್ಯತಾನುಸಾರ ಮಥುರೆ ಯಲ್ಲಿ ದೇವನಿರ್ಮಿತ ರತ್ನಮಯ ಸ್ತೂಪವಿದ್ದಿತು. (ಮಥುರಾ ಕಂಕಾಲೀ ಟೀಲೆಯ ಅಗೆವಿನಲ್ಲಿ ಈ ಸ್ತೂಪದ ಸಂಬಂಧವಾಗಿ ಅನೇಕ ವಿಷಯಗಳು ಬೆಳಕಿಗೆ ಬಂದಿವೆ) ಈ ಸ್ತೂಪದ ವಿಷಯವಾಗಿ ಜೈನ ಮತ್ತು ಬೌದ್ಧರ ನಡುವೆ ವಿವಾದವುಂಟಾಗಿದೆ. ಆರ್ಯರಕ್ಷಿತ, ಆರ್ಯಕಾಲಕ, ರಾಜಾಸಾಹತವಾಹನ, ಪ್ರದ್ಯೋತ, ಮುರುಂಡ, ಚಾಣುಕ್ಯ, ಚಿಲಾತಪುತ್ರ, ಅವಂತಿ ಸುಕಮಾಲ ಮತ್ತು ರೋಹಿಣೇಯ ಚೋರ ಮುಂತಾದವರ ಕಥೆಗಳಿವೆ.

ಬೃಹತ್ಕಲ್ಪಭಾಷ್ಯ :(ಪ್ರಾ. ಸಾ. ಇ. ಪು. ೨೨೩) ಮಥುರೆಯಲ್ಲಿ ನೂತನ ಮನೆಗಳ ನಿರ್ಮಿತಿಯಾದ ಬಳಿಕ ಅವುಗಳ ಉತ್ತರದ ಅಂಗಳಗಳಲ್ಲಿ ಅರ್ಹಂತ ಪ್ರತಿಮೆಗಳ ಸ್ಥಾಪನೆ ಮಾಡುತ್ತಿದ್ದರು.

ಇಲ್ಲಿ ಟೀಕಾಕಾರನು ದಕ್ಷಿಣಾಪಥದ ಕಾಕಿಣೀ, ಭಿಲ್ಲಮಾಲದ ದ್ರಮ್ಮ, ಪೂರ್ವ ದೇಶದ ದೀನಾರ ಅಥವಾ ಕೇತರ (ಕೇವಡಿಕೆ) ಎಂಬ ಸಿಕ್ಕೆಗಳನ್ನು ಉಲ್ಲೇಖಿಸಿದ್ದಾನೆ.

ಜಿನಶಾಸನದ ಸಾರ :

ಜಂ ಇಚ್ಛಸಿ ಅಪ್ಪಣತೋ ಜಂ ಚ ಣ ಇಚ್ಛಸಿ ಅಪ್ಪಣತೋ।

ತ್ತಂ ಇಚ್ಛ ಪರಸ್ಸ ವಿ ಯಾ ಎತ್ತಿಯಗಂ ಜಿಣಸಾಸಣಯಂ ।

ದಶವೈಕಾಲಿಕ ಭಾಷ್ಯದಲ್ಲಿ ಲೌಕಿಕ, ವೈದಿಕ ಮತ್ತು ಸಾಮಯಿಕ (ಬೌದ್ಧ)ರ ಮತಗಳನುಸಾರದ ಜೀವ ಸ್ವರೂಪದ ವಿವರಣೆಯಿದೆ.

ಸೂತ್ರಕೃತಾಂಗ ಚೂರ್ಣಿಯಲ್ಲಿ (ಪ್ರಾ. ಸಾ. ಇ. ಪು. ೨೩೮) ವೈಶಿಕ ತಂತ್ರದಿಂದ ಉಲ್ಲೇಖಿತವಿರುವ ಶ್ಲೋಕ :

ಏತಾ ಹಸಂತಿ ಚ ರುದಂತಿ ಚ ಅರ್ಥಹೇತೋಃ

ವಿಶ್ವಾಸಯಂತಿ ಚ ಪರಂ ನ ಚ ವಿಶ್ವಸಂತಿ ।

ಸ್ತ್ರಿಯಃ ಕೃತಾರ್ಥಾ ಪುರುಷಂ ನಿರರ್ಥಕಂ

ನಿಷ್ಪೀಡಿತಾಲಕ್ತಕ ವತ್ತ್ಯಜಂತಿ ॥

ನಿಶೀಥ ವಿಶೇಷ ಚೂರ್ಣಿಯಲ್ಲಿ (ಪ್ರಾ. ಸಾ. ಇ. ಪು. ೨೩೯) ಹೇಳಿರುವಂತೆ ವಾರಾಣಸೀ ನಗರದಲ್ಲಿ ವಾಸುದೇವನ ಜ್ಯೇಷ್ಠ ಭ್ರಾತಾ ಜರಕುಮಾರನ ಪುತ್ರ ಜಿಯಸತ್ತು ಎಂಬ ರಾಜನಿದ್ದನು. ಇವನಿಗೆ ಸಸಾಅ ಮತ್ತು ಭಸಾಅ ಎಂಬ ಇಬ್ಬರು ಗಂಡುಮಕ್ಕಳು ಹಾಗೂ ಸುಕಮಾಲಿಯಾ ಎಂಬ ಮಗಳಿದ್ದಳು.

ಆವಶಕ್ಯ ಚೂರ್ಣೀ–ಪ್ರಾ. ಸಾ. ಇ. (ಪು. ೨೪೯) ಇದರಲ್ಲಿ ಋಷಭದೇವ ಜನ್ಮಾದಿ ಪ್ರಸಂಗಗಳು ವಿಸ್ತೃತರೀತಿಯಿಂದ ವರ್ಣಿತವಾಗಿವೆ. ಹೀಗೆಯೇ ಮಹಾವೀರನ ಜನನಾದಿ ವಿಷಯಗಳು ವಿಸ್ತೃತವಾಗಿ ವರ್ಣಿತನಾಗಿವೆ ಇಲ್ಲಿರುವಷ್ಟು ವಿಷಯವು ಅನ್ಯತ್ರ ದೊರೆಯುದಿಲ್ಲ. ಮುಂದೆ ವಜ್ರಸ್ವಾಮಿ ಮುಂತಾದವರ ವೃತ್ತಾಂತವಿದೆ. ಚೇಲನಾಹರಣ, ಕೂಣಿಕನ ಉತ್ಪತ್ತಿ ಪ್ರಸಂಗಗಳೂ ಇವೆ.

(ಪು. ೨೫೪. ಪ್ರಾ. ಸಾ. ಇ. ) ಮಹಾವೀರನಿಗೆ ಕೇವಲಜ್ಞಾನವಾದ ಹದಿಮೂರು ವರ್ಷಗಳ ಅನಂತರ ಕಾಲದಲ್ಲಿ ಶ್ರಾವಸ್ತಿಯಲ್ಲಿ ಪ್ರವಾಹ (ಬರಗಾಲ) ಬಂದ ಉಲ್ಲೇಖ ವಿದೆ.[೩೮]

ಭಾಸಕವಿಯ ಪ್ರತಿಜ್ಞಾಯೌಗಂಧರಾಯಣದ ಒಂದು ಶ್ಲೋಕ(೩.೯)ದ ಉದ್ಧರ ಣವೂ ಇಲ್ಲಿದೆ.

ದಶವೈಕಾಲಿಕ ಚೂರ್ಣಿ : ಕರ್ತೃ ಜಿನದಾಸಗಣಿ ಮಹತ್ತರ. ಆದರೆ ಈಗ ವಜ್ರ ಸ್ವಾಮಿಯ ಶಾಖೆಯವರಾದ ಸ್ಥವಿರ ಅಗಸ್ತ್ಯಸಿಂಹವಿರಚಿತವಾದ ದಶವೈಕಾಲಿಕ ಚೂರ್ಣಿಯು ಜೈಸಲ್ಮೇರ್ ಭಂಡಾರದಲ್ಲಿ ದೊರಕಿದೆ. ಅಗಸ್ತ್ಯಸಿಂಹರ ಕಾಲ ವಿ. ಸಂ. ೩ನೇ ಶತಮಾನ. ಇಷ್ಟಲ್ಲದೆ ಅಗಸ್ತ್ಯಸಿಂಹರು ಮತ್ತೊಂದು ಪ್ರಾಚೀನ ವೃತ್ತಿ ಯಿದ್ದುದರ ಬಗ್ಗೆ ಸೂಚನೆಯಿತ್ತು, ದಷವೈಕಾಲಿಕದ ಅನೇಕ ಗಾಥೆಗಳು ಮೂಲ ಸೂತ್ರದ ಗಾಹೆಗಳಾಗಿರದೆ, ವೃತ್ತಿಯ ಗಾಹೆಗಳಾಗಿರುವುದರ ಬಗ್ಗೆ ಸೂಚನೆ ಕೊಟ್ಟಿದ್ದಾರೆ.

ಒಬ್ಬ ಬೌ (ತಚ್ಚಣಿಕ) ಭಿಕ್ಷುವಿನ ಚಿತ್ರಣ (ಪ್ರಾ. ಸಾ. ಇ. ೨೫೭)

ಕನ್ಥಾSರ್ಯಘನಾ ತೇ ? ನನು ಶಫರವಧೇ ಜಾಲಮಶ್ನಾಸಿ ಮತ್ಸ್ಯಾನ್ ?
ತೇ ಮೇ ಮದ್ಯೋಪದಂಶಾನ್ ಪಿಬಸಿ ? ನನು ಯುತೋ ವೇಶ್ಯಯಾ ಯಾಸಿ ವೈಶ್ಯಾಂ ?
ಕೃತ್ವಾರೀಣಾಂ ಗಲೇ ಙ್ಘ್ರಂ ಕ್ವನು ತವರಿಪವೋ ? ಯೋಷು ಸಂಧಿ ಛಿನದ್ಮಿ
ಚೌರಸ್ತ್ವಂ ? ದ್ಯೂತಹೇತೋಃ ಕಿತವ ಇತಿ ಕಥಂ ? ಯೇನ ದಾಸೀ ಸುತೋಸ್ಮಿ

(ದಷವೇದಕಾಲಿಕ ಹರಿಭದ್ರ ವೃತ್ತಿ ಪು. ೧೦೮)

ಹಾಗೆಯೇ :

ಭಿಕ್ಷೋ ಮಾಸನಿಷೇವಣಂ ಪ್ರಕುರುಷೇ ? ಕಿಂ ತೇನ ಮದ್ಯಂ ವಿನಾ

ಕಿಂ ತೇ ಮಧ್ಯಮಪಿ ಪ್ರಿಯಂ ? ಪ್ರಿಯಮಹೋ ವಾರಾಂಗನಾಭಿಃ ಸಹ ।
ವೇಶ್ಯಾದ್ರವ್ಯರುಚಿಃ ಕುತಸ್ತವ ಧನಂ ? ದ್ಯೂತೇನ ಚೌರ್ಯೇಣ ವಾ
ಚೌರ್ಯ ದ್ಯೂತಪರಿಗ್ರಹೋಽಪಿ ಭವತೋ ? ನಷ್ಟಸ್ಯ ಕಾನ್ಯಾಗತಿಃ ॥

(ಧನಂಜಯ, ದಶರೂಪಕ, ೪, ಪೃ. ೨೭೮)

ಟೀಕಾಸಾಹಿತ್ಯ ಆವಶ್ಯಕಟೀಕಾ : ಆವಶ್ಯಕ ಟೀಕೆ–ಹರಿಭದ್ರರಿಂದ : ಇಲ್ಲಿರುವ ಒಂದು ಸಂವಾದ ಗುಣಭದ್ರಸ್ವಾಮಿಯವರ ಉತ್ತರಪುರಾಣದ ಪರ್ವತನಾರದರ ಸಂವಾಂದದೊಡನೆ ಹೋಲುತ್ತದೆ.

ಸಿದ್ಧಪುರುಷನೊಬ್ಬನಿಗೆ ಇಬ್ಬರು ಶಿಷ್ಯರಿದ್ದರು. ಅವರು ನಿಮಿತ್ತಶಾಸ್ತ್ರದ ಅಭ್ಯಾಸ ಮಾಡಿದರು. ಅವರು ಒಮ್ಮೆ ಹುಲ್ಲು ಮತ್ತು ಕಟ್ಟಿಗೆ ತರಲೋಸುಗ ಕಾಡಿಗೆ ಹೋದರು. ಅಲ್ಲಿ ಅವರು ಆನೆಯ ಹೆಜ್ಜೆ ಕಂಡರು. ಒಬ್ಬ ಶಿಷ್ಯನು ಹೇಳಿದ–ಇದು ಹೆಣ್ಣಾನೆಯ ಹೆಜ್ಜೆ ಇತ್ಯಾದಿ. (ಪ್ರಾ. ಸಾ. ಇ. ೨೬೫)

ಪ್ರಾ. ಸಾ. ಇ. ಪು. ೨೬೩) ಅಭಯದೇವಸೂರಿಯವರು ಸ್ಥಾನಾಂಗ ಸೂತ್ರ ಟೀಕೆಯಲ್ಲಿ ದೇಶ ವಿದೇಶದ ಸ್ತ್ರೀಯರ ಸ್ವಭಾವದ ಸುಂದರ ಚಿತ್ರಣಕೊಟ್ಟಿದ್ದಾರೆ.

ಅಹೋ ಚಾಲುಕ್ಯಪುತ್ರೀಣಾಂ ಸಾಹಸಂ ಜಗತೋಧಿಕಂ ।
ಪತ್ಯೋರ್ಮೃತೌ ವಿಶ್ಯಂತ್ಯಗ್ನೌ ಯಾ ಪ್ರೇಮರಹಿತಾ ಅಪಿ ॥
ಚಂದ್ರವಕ್ತ್ರ ಸರೋಜಾಕ್ಷಿ ಸದ್ಗೀಃ ಪೀನಘನಸ್ತನೀ ।
ಕಿಂ ಲಾಟೀ ನೋ ಮತಾ ಸಾಸ್ಯ ದೇವಾನಮಪಿ ದುರ್ಲಭಾ ॥
ಘಿಙ್‌ರೀರೌದೀಚ್ಯಾ ಬಹು ವಸನಾಚ್ಛಾದಿತಾಂಗ ಲತಿಕತ್ವಾತ್ ।
ಯದ್ ಯೌವನಂ ನ ಯೂನಾಂ ಚುಕ್ಷುರ್ಮೋರ್ದಾಯ ಭವತಿ ಸದಾ ॥

ಸೂತ್ರಕೃತಾಂಗದ ಟೀಕೆಯಲ್ಲಿ ಶೀಲಾಂಕ :

ವರಿ ವಿಸ ಖಇಯಂ ನ ವಿಸಯಸುಹ ಇಕ್ಕಸಿ ವಿ ಸಿ ಙ ಮರಂತಿ ।

ವಿಸಯಾಮಿಸ ಪುಣ ಧಾರಿಯಾ ಣರ ಣರಏಹಿ ಪಡಂತಿ ॥

ಗಚ್ಛಾಚಾರದ ವೃತ್ತಿಯಲ್ಲಿ ಭದ್ರಬಾಹು ಮತ್ತು ವರಾಹಮಿಹಿರ ಎಂಬ ಇಬ್ಬರು ದಾಯದ್ಯ ? ಭ್ರಾತೃಗಳ ವೃತ್ತಾಂತವು ವಿಸ್ತಾರವಾಗಿ ಹೇಳಲ್ಪಟ್ಟಿದೆ. ವರಾಹಮಿಹಿರರು ಚಂದ್ರಪ್ರಜ್ಞಪ್ತಿ ಮತ್ತು ಸೂರ್ಯಪ್ರಜ್ಞಪ್ತಿಗಳ ಜ್ಞಾತೃ ಹಾಗೂ ಅಂಗೋಪಾಂಗ ಮತ್ತು ದ್ರವ್ಯಾನುಯೋಗದ ಪರಗಾಮಿಯಾಗಿದ್ದರು. ಚಂದ್ರಪ್ರಜ್ಞಪ್ತಿ ಯಾಧಾರದಿಂದ 'ವಾರಾಹೀ ಸಂಹಿತಾ' ಎಂಬ ಜ್ಯೋತಿಷ ಗ್ರಂಥವನ್ನು ರಚಿಸಿದರು.

ಆಗಮ ಸಾಹಿತ್ಯ ಮತು ಅದರ ವ್ಯಾಖ್ಯಾನ ಸಾಹಿತ್ಯದ ಅಧ್ಯಯನಿದಿಂದ ಬಹು ಮುಖವಾದ ಪ್ರಯೋಜನವಿದೆ. ನಮ್ಮ ಪೂರ್ವಜರ ಆಚಾರ, ವಿಚಾರ, ಗುಣದೋಷ, ಬ್ದುಕಿನ ದೃಷ್ಟಿ ಇವೇ ಮುಂತಾದ ಅನೇಕಾನೇಕ ಸಂಗತಿಗಳ ದಿಗ್ದರ್ಶನವನ್ನು ಇಲ್ಲಿ ಪಡೆಯಬಹುದು. ಪ್ರಾಚೀನ ಕಾಲದಲ್ಲಿ ಪ್ರಚಲಿತವಿದ್ದ ಲೌಕಿಕ ಕಥೆಗಳ ಭಂಡಾರ ದಂತೆ ಇಲ್ಲಿ ಪ್ರಾಕೃತಭಾಷಾ ನಿಬದ್ಧವಾಗಿ ಸಂರಕ್ಷಿತವಾಗಿವೆ. ಇವುಗಳಲ್ಲಿ ಅನೇಕ ಕಥೆಗಳು, ಜಾತಕಕಥಾ, ಕಥಾಸರಿತ್ಸಾಗರ, ಪಂಚತಂತ್ರ, ಹಿತೋಪದೇಶ, ಶುಕ ಸಪ್ತತಿಯೇ ಮುಂತಾದ ಕೃತಿಗಳ ಕಥೆಗಳೊಡನೆ ಸಾಮ್ಯವುಳ್ಳವಾಗಿವೆ. ಜೈನಮುನಿಗಳು ಉಪದೇಷದ ಕಾಲದಲ್ಲಿ ಲೌಕಿಕವಾದ ಅನೇಕ ಕಥೆಗಳನ್ನು ದೃಷ್ಟಾಂತ ರೂಪದಿಂದ ಬಳಸಿಕೊಂಡಿದ್ದಾರೆ. ವೈದಿಕ ಮತ ಸಂಪ್ರದಾಯದ ಅನೇಕಾನೇಕ ಪೌರಾಣಿಕ ಕಥೆಗಳು ಇಲ್ಲಿ ಶ್ರಮಣ ಧರ್ಮದ ಆಚಾರ ವಿಚಾರಗಳ ಪ್ರತಿಬಿಂಬಕಗಳಾಗಿ ಉಳಿದುಕೊಂಡಿವೆ. ಕರಕಂಡೂ ಮುಂತಾದ ಪ್ರತ್ಯೇಕಬುದ್ಧರ ಕಥೆಗಳು ಬೌದ್ಧ ಸಾಹಿತ್ಯದ ಪ್ರತ್ಯೇಕ ಬುದ್ಧರ ಕಥೆಗಳೊಡನೆ ಸಾಮ್ಯತೆಯುಳ್ಳವಾಗಿವೆ, ಉದಾಹರಣೆಯಾಗಿ ದ್ವೀಪಾಯನ ಋಷಿ ಕಥೆಯು ಕಣ್ಹದೀಪಾಯನ ಜಾತಕದೊಡನೆ, ವಲ್ಕಲಚೀರೀ ಕಥೆಯು ಬೌದ್ಧ ಉದಾನ ಅಟ್ಠಕಥೆಯೊಡನೆ, ಕುಣಾಲ ಕಥೆಯು ದಿವ್ಯಾವದಾನದ ಕಥೆಗಳೊಡನೆ ಸಾಮ್ಯ ವುಳ್ಳವಾಗಿವೆ. ಅನೇಕ ಕಥೆಗಳು, ಮೂಲ ಸರ್ವಾಸ್ತಿವಾದದ ವಿನಯವಸ್ತುವಿನಲ್ಲಿ ಕಂಡುಬರುವುವು. ರೋಹಕ ಮತ್ತು ಕನಕಮಂಜರೀ ಕಥೆಗಳು ಬೌದ್ಧ ಜಾತಕದ ಮಹೋಸಧ ಪಂಡಿತ, ಮತ್ತು ಅರೇಬಿಯನ್ ನೈಟ್ಸ್

ಶಹಜಾದಾ ಕಥೆಯೊಡನೆ  ಹೋಲಿಕೆಯುಳ್ಳವಾಗಿವೆ. ಇಷ್ಟಲ್ಲದೆ ಚರಿತ್ರೆಗೆ ಸಂಬಂಧಿಸಿದ ಪ್ರಚುರ ಸಾಮಗ್ರಿಯು ಇಲ್ಲಿ ಉಳಿದುಬಂದಿದೆ. ಡಾ. ವಿಂಟನಿಟ್ಜರವರು "ಜೈನ ಟೀಕಾ ಸಾಹಿತ್ಯದಲ್ಲಿ ಅನ್ಯತ್ರ ದೊರೆಯದಿರುವ ಭಾರತೀಯ ಪ್ರಾಚೀನ ಕಥಾಸಾಹಿತ್ಯದ ಅನೇಕ ಉಜ್ವಲ ರತ್ನಗಳು ಇಲ್ಲಿ ಉಳಿದು ಬಂದಿವೆ" ಎಂದು ಹೇಳಿದ್ದಾರೆ.

ಐತಿಹಾಸಿಕತೆಯ ಪರ್ಯಾಲೋಚನೆ

ಶ್ರೀ ಕಪಾಡಿಯಾ ಅವರೇ ಹೇಳಿರುವಂತೆ ದೇವರ್ಧಿಕ್ಷಮಾಶ್ರಮಣ ಗಣಿಯವರ ಸಮ್ಮುಖದಲ್ಲಿ ಸ್ಕಾಂದಿಲೀಯ ಮತ್ತು ನಾಗಾರ್ಜುನೀಯ–ಎರಡು ವಾಚನಾಗಳ ಆಗಮಗಳು ಇದ್ದುವು. ಇವು ಹೆಚ್ಚು ಕಡಿಮೆ ಒಂದೇ ಕಾಲದಲ್ಲಿ ಸಂಕಲನ ಮಾಡಲ್ಪಟ್ಟುವುಗಳಾಗಿದ್ದರೂ ಇವುಗಳ ಮಧ್ಯೆ ಗಮನಾರ್ಹವಾದ ವ್ಯತ್ಯಾಸಗಳಿದ್ದುವು. ಈ  ವ್ಯತ್ಯಾಸಗಳು ಹಿಂದಿನ ಕಾಲದಿಂದಲೂ ರೂಢವಾಗಿ ಬಂದಿದ್ದುವೆಂಬುದನ್ನು ನಿರಾಕರಿಸುವಂತಿಲ್ಲ. ಆದರಿಂದ ಈ ಎರಡು ವಾಚನಾಗಳು ಎರಡು ಭಿನ್ನ ಪರಂಪರೆಗೆ ಸಂಬಂಧಿಸಿದವುಗಳಾಗಿದ್ದುವೆಂದು ತಿಳಿಯಬಹುದಾಗಿದೆಯಲ್ಲದೆ ಈ ಭಿನ್ನ ಪರಂಪರೆಗಳಲ್ಲಿ ಒಂದು ಆರ್ಯಮಹಾಗಿರಿಯವರಿಂದ ರೂಢಿಗತವಾದ ಜಿನಕಲ್ಪಪಂಥದ ಪರಂಪರೆಯದೂ, ಮತ್ತೊಂದು ಆರ್ಯಸುಹಸ್ತಿಯವರ ಸ್ಥವಿರಕಲ್ಪ ಪರಂಪರೆ ಯದೂ ಆಗಿವೆಯೆಂದು ಸ್ಫುಟಗೊಳ್ಳುವುದು. ಈ ಜಿನಕಲ್ಪಿ ಮತ್ತು ಸ್ಥವಿರಕಲ್ಪಿ ಆಗಮಗಳ ಮಧ್ಯೆ ಇದ್ದ ಮುಖ್ಯ ವ್ಯತ್ಯಾಸಗಳೇನೆಂಬುದನ್ನು ಈಗ ತರ್ಕಬದ್ದವಗಿ ತಿಳಿಯಬಹುದು. ಜಿನಕಲ್ಪಿ ಪಂಥದ ಆಗಮಗಳಲ್ಲಿ ನಿಶ್ಚಿತವಾಗಿ ಆ ಪಂಥದ ಆಚಾರ ಧರ್ಮದ ಮಹತ್ವ, ಶ್ರೇಷ್ಠತೆ ಮತ್ತು ಮೌಲಿಕತೆಯನ್ನು ಪ್ರತಿಪಾದಿಸುವ ಅಂಶಗಳಿ ದ್ದುವು.ಹೀಗೆಯೇ ಸ್ಥವಿರಕಲ್ಪದ ಆಗಮಗಳಲ್ಲಿ ಆ ಪಂಥದ ಆಚಾರಧರ್ಮದ ಮಹತ್ವ ಶ್ರೇಷ್ಠತೆ ಮತ್ತು ಮೌಲಿಕತೆಯನ್ನು ಪ್ರತಿಪಾದಿಸುವ ಅಂಶಗಳಿದ್ದುವು. ಈ ರೀತಿಯಾದದ ಅಂಶಗಳು ಎರಡೂ ಪಂಥಗಳ ಮಧ್ಯೆ ಪರಸ್ಪರ ವಿರೋಧಾತ್ಮಕ ವಾಗಿದ್ದುವು. ಉದಾಹರಣೆಯಾಗಿ ಸ್ಥವಿರಕಲ್ಪಿ ಪಂಥದ ಆಗಮಗಳಲ್ಲಿ ಜಿನಕಲ್ಪಿ  ಮಾರ್ಗ ವಿರೀಧವಾದ ಸವಸ್ತ್ರ ಮುಕ್ತಿ ಸಚೇಲಕ ಮುನಿಧರ್ಮದ ಮೌಲಿಕತೆ ಪ್ರತಿಪಾದಕವಾದ ಭ.ವೃಷಭ ಮತ್ತು ಭ.ಮಹಾವೀರ ತೀರ್ಥಂಕರರ ಮಧ್ಯವರ್ತಿ ಕಾಲೀನರಾದ

ಇಪ್ಪತ್ತೆರಡು ತೀರ್ಥಂಕರರು ಸಚೇಲಕ ಮುನಿಧರ್ಮ ಹಾಗೂ ಚಾಉ ಊಜ್ಞಾ ಮಧರ್ಮದ ಉಪದೇಶಕರಾಗಿದ್ದರು ಎಂಬಿವೇ ಮೋದಲಾದ ಅಂಶಗಳಿದ್ದುವು.ಸ್ಥವಿರಕಲ್ಪಿ ಪಂಥದ ಪ್ರಭಾವಕ್ಕೆ ಒಳಗಾಗಿದ್ದ ದೇವರ್ಧಿಗಣಿಯವರು ಈ ವಿರೋ ಧಾಂಶಗಳನ್ನು ಪರಿಹರಿಸುವ ಯತ್ನ ಮಾಡಿ ಸಾಧ್ಯವಾದಷ್ಟೂ ಸ್ಥವಿರಕಲ್ಪಿಧರ್ಮ ಪೋಷಕವಾದ ಅಂಷಗಳನ್ನು ಆಗಮ ಗ್ರಂಥಗಳಲ್ಲಿ ಅಗತ್ಯವಿದ್ದೆಡೆಗಳಲ್ಲಿ ಸಂಯೋಜನೆ ಮಾಡಿ ಆಗಮ ಸಂಕಲನದ ಕಾರ್ಯವನ್ನು ಪೂರಯಿಸಿದರು. ಈಗ ಉಪಲಬ್ಧವಿರುವ ಶ್ವೇತಾಂಬರ ಪಂಥದ ಆಗಮ ಗ್ರಂಥಗಳು ಇವೇ ಆಗಿವೆ.

ನಷ್ಟ ಆಗಮ ಅಥವಾ ನಷ್ಟ ಆಗಮಭಾಗ–ಹನ್ನೆರಡನೆಯ ಅಂಗ ದೃಷ್ಟಿವಾದದ ಅರ್ಥಸಹಿತವಾದ ಸೂತ್ರ ಪಾಠವನ್ನು ಪರಿಪೂರ್ಣವಾಗಿ ತಿಳಿದಿದ್ದವರಲ್ಲಿ ಶ್ರು.ಕೇ. ಭದ್ರಬಾಹು ಸ್ವಾಮಿಯರು ಕೊನೆಯವರು ಎಂಬುದು ಶ್ವೇತಾಂಬರ ಮತ್ತು ದಿಗಂಬರ ಎರಡೂ ಪಂಥಗಳ ಅಭಿಮತವಾಗಿರುವುದು ತಿಳಿದ ಸಂಗತಿಯಾಗಿದೆ. ಶ್ರು. ಕೇ. ಭದ್ರಬಾಹು ಸ್ವಾಮಿಯವರ ಬಳಿಕ, ದಿಗಂಬರ ಪಂಥದ ಅಭಿಮತದಂತೆ, ದಶ ಪೂರ್ವಗಳನ್ನು ಶಬ್ದಾರ್ಥಗಳಿಂದ ಪರಿಪೂರ್ಣವಾಗಿ, ಎಂದರೆ ಅಭಿನ್ನ ರೀತಿಯಿಂದ ತಿಳಿದಿದ್ದವರೂ ಹಾಗೂ ಮಿಕ್ಕ ನಾಲ್ಕು ಪೂರ್ವಗಳನ್ನು ಏಕದೇಶ ರೀತಿಯಿಂದ ತಿಳಿದವರೂ ಆಗಿದ್ದ ಅಭಿನ್ನ ದಶಪೂರ್ವಿಗಳಾದ ವಿಶಾಖಾಚಾರ್ಯರೇ ಮುಂತಾದ ಆಚಾರ್ಯರ ಪರಿಪಾಟಿಯು ೧೮೩ ವರ್ಷಕಾಲ ಇದ್ದಿತು, ಈ ಪಂಥದ ಐತಿಹ್ಯದಂತೆ ಶ್ರು. ಕೇ. ಭದ್ರಬಾಹು ಸ್ವಾಮಿಯವರು ವೀ. ನಿ. ಸಂ. ೧೬೨ರಲ್ಲಿ ದಿವಂಗತರಾಗಿರು ವುದರಿಂದ ಪ್ರಸ್ತುತ ಅಭಿನ್ನದಶಪೂರ್ವಿಗಳ ಪರಿಪಾಟಿಯು ವೀ. ನಿ. ಸಂ (೧೬೨+ ೧೮೩) ೩೪೫ರಲ್ಲಿ ಕೊನೆಗೊಂಡಿದೆ. ಆದರೆ, ಶ್ವೇತಾಂಬರ ಪಂಥದ ಮಾನ್ಯತೆಯಂತೆ, ಶ್ರು. ಕೇ. ಭದ್ರಬಾಹುಸ್ವಾಮಿಗಳವರಲ್ಲಿ ಸ್ಥೂಲಭದ್ರಸ್ವಾಮಿಯವರು ದೃಷ್ಟಿ ವಾದಾಂಗದ ಅಧ್ಯಯನ ನಡೆಸಿ ಮೊದಲ ಹತ್ತು ಪೂರ್ವಗಳನ್ನು ಶಬ್ದಶಃ ಮತ್ತು ಅರ್ಥಶಃ ತಿಳಿದಿದ್ದು ಕೊನೆಯ ನಾಲ್ಕು ಪೂರ್ವಗಳ ಸೂತ್ರಪಾಠವನ್ನುಶಬ್ದಮಾತ್ರ ದಿಂದ ತಿಳಿದವರಾಗಿದ್ದರೆಂಬುವುದನ್ನು ಮತ್ತು ಇವರನ್ನು ಕೊನೆಯ ದ್ವಾದಶಾಂಗ ಚತುರ್ದಶ ಪೂರ್ವಿ ಎಂಬುದಾಗಿ ಮಾನ್ಯತೆ ಮಾಡಿರುವುದನ್ನು ಹಿಂದೆ ತಿಳಿಸಿದೆ. ಆದರೆ ಇವರು ಶ್ರು. ಕೇ. ಭದ್ರಬಾಹು ಸ್ವಾಮಿಯವರಲ್ಲಿ ದೃಷ್ಟಿವಾದಾಂಗದ ಅಧ್ಯಯನ ನಡೆಸಿದುದರ ಕಥನ ವಿಶ್ವಾಸಾರ್ಹವಾಗಿಲ್ಲವೆಂದು

ಹಿಂದೆ ನಿರೂಪಿಸಲಾಗಿದೆ. ಇದೂ ಅಲ್ಲದೆ ಶ್ವೇತಾಂಬರ ಪಂಥದ್ದೇ ಆದ ಖರತರಗಚ್ಛ ಪಟ್ಟಾವಲಿಯಲ್ಲಿ, 'ವೃದ್ಧ ಪ್ರವಾದ'ವೆಂಬ ನಿರ್ದೇಶನದೊಡನೆ, ಹೇಳಿರುವ ಪ್ರಕಾರ ಸ್ಥೂಲಭದ್ರರು ವಸ್ತುದ್ವಯ ದಿಂದ ನ್ಯೂನವಾದ ದಶಪೂರ್ವಗಳನ್ನು ಸೂತ್ರ ಮತ್ತು ಅರ್ಥಗಳಿಂದ ಪಠನ ಮಾಡಿದ್ದು. ಅಂತ್ಯದ ನಾಲ್ಕು ಪೂರ್ವಗಳ ಸೂತ್ರಮಾತ್ರದ ಅಧ್ಯಯನ ಮಾಡಿದವರಾಗಿ ದ್ಧಾರೆ.[೩೯] ಇದರಂತೆ ಇವರು ದಶಪೂರ್ವಗಳನ್ನೂ ಪೂರ್ಣವಾಗಿ ಅಧ್ಯಯನ ಮಾಡಿಲ್ಲ ವೆಂದು ಸೂಚಿತವಾಗುವುದು. ಇದರ ಹೊರತಾಗಿ, ಇತರ ಎಲ್ಲ ಆಧಾರಗಳಂತೆ ಇವರು ದಶಪೂರ್ವಗಳನ್ನು ಸೂತ್ರಗಳನ್ನು ಮತ್ತು ಅರ್ಥಸಹಿತ ಪೂರ್ಣವಗಿ ಅಧ್ಯಯನ ಮಾಡಿದ್ದಾರೆ. ಮಿಕ್ಕ ನಾಲ್ಕು ಪುರ್ವಗಳನ್ನು ಸೂತ್ರ ಮಾತ್ರ ಪಠಣ ಮಾಡಿದ್ದರೂ ಅದರ ಪಾಠವು ಅವರ ಅನಂತರದ ಶಿಷ್ಯ ಸಂತತಿಗೆ ಲಭ್ಯವಾಗಲಿಲ್ಲವಾಗಿ ಕೊನೆಯ ಆ ನಾಲ್ಕು ಪೂರ್ವಗಳು ಆ ಕಾಲಕ್ಕೇ ನಷ್ಟವಾದುವು. ಸ್ಥೂಲಭದ್ರಸೂರಿಯವರ ಅನಂತರ ಅನುಕ್ರಮವಾಗಿ ಮಹಾಗಿರಿ, ಸುಹಸ್ತಿಸೂರಿ, ಶ್ರೀಗುಣ ಸುಂದರ, ಶ್ಯಾಮಾರ್ಯ, ಸ್ಕಂದಿಲಾಚಾರ್ಯ, ರೇವತೀ ಮಿತ್ರಸೂರಿ, ಶ್ರೀಧರ್ಮ, ಭದ್ರಗುಪ್ತ, ಶ್ರೀಗುಪ್ತ ಮತ್ತು ವಜ್ರಸೂರಿ–ಈ ಹತ್ತು ಯುಗಪ್ರಧಾನಪ್ಪವರರು ದಶಪೂರ್ವಧಾರಿ ಗಳಾಗಿದ್ದರೆಂದು ಹೇಳಿದೆ.[೪೦] ಈ ದಶಪೂರ್ವಿಗಳಲ್ಲಿ ಕೊನೆಯವರು ವಜ್ರಸೂರಿ ಯವರು. ಇವರ ಬಳಿ ಆರ್ಯರಕ್ಷಿತಸೂರಿಯವರು ೯ ಪೂರ್ವಗಳು ಮತ್ತು ೧೦ನೇ ಪೂರ್ವದ ೨೪ ಜವಿಯಗಳ ಅಧ್ಯಯನ ಮಾಡಿದ್ದರು. ಇವರ ಬಳಿಕ ಪೂರ್ವಗಳ ಜ್ಞಾನವು ಕಾಲಾನುಕ್ರಮವಾಗಿ ಕುಂದುತ್ತಾ ನಡೆದು ವೀ. ನಿ. ಸಂ. ೧೦೦೦ದ ಸಮಯಕ್ಕೆ ಎಲ್ಲ ಪೂರ್ವಗಳೂ ವಿಸ್ಮೃತವಾದುವಾಗಿ ದೃಷ್ಟಿವಾದವು ನಷ್ಟ ಹೊಂದಿತು. ಹೀಗೆ ದೃಷ್ಟಿವಾದವು ನಷ್ಟವಾದ ಬಗ್ಗೆ 'ದಿ ಕೆನಾನಿಕಲ್ ಲಿಟರೇಚರ್ ಆಫ್ ದಿ ಜೈನಾಸ್' ಕರ್ತೃಗಳು–"ನನ್ನ ನಮ್ರತೆ ತುಂಬಿದ ಅಭಿಮತವೆಂದರೆ, ದೃಷ್ಟಿವಾದವು. ಅದ ರಲ್ಲಿಯೂ ಅದರ ಪ್ರಧಾನಭಾಗವಾದ ಪುವ್ವಗಯವು, ನೆನಪಿನಲ್ಲಿಟ್ಟುಕೊಳ್ಳಲು, ಅಧ್ಯಯನಮಾಡಲು ಅತ್ಯಂತ ಕಷ್ಟಕರವಾಗಿದ್ದ ಕಾರಣದಿಂದ, ಹಾಗೂ ಅದರ ಗಮಗಳು ಮತ್ತು ಭಂಗಗಳು, ಇವುಗಳಲ್ಲಿಯೂ ಎರಡನೆಯದಕ್ಕೆ ಗಣಿತಜ್ಞಾನದ ವಿಶೇಷ ಸಾಮರ್ಥ್ಯದ ಅಗತ್ಯ ಹೊಂದಿದ್ದ ಕಾರಣದಿಂದ, ನಷ್ಟವಾಯಿತು. ಸಂಗ್ರಹ ವಾಗಿ ಹೇಳುವುದಾದರೆ ಹನ್ನೆರಡನೆಯ ಅಂಗವು ಭೇಧಿಸಲು ದುಸ್ಸಾಧ್ಯವಾದ ಕಗ್ಗಂ ಟಾಗಿದ್ದಿತು. (**In short, t his 12th Anga**

**was a har nut to crack )"** ಎಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. (ಪು. ೭೭)

[೪೧] ಆಚಾರಾಂಗದ ಪ್ರಥಮ ಶ್ರುತಸ್ಕಂಧದ ಒಂಬತ್ತು ಅಧ್ಯಯನಗಳಲ್ಲಿ ೭ ನೆಯ (ಅಥವಾ ಸಮವಾಯದ ಆಧಾರದಂತೆ ೯ನೆಯ) ಅಧ್ಯಯನವಾದ ಮಹಾಪರಿಣ್ಣವು, ಕನಿಷ್ಟ ಮಿತಿಯ ಕಾಲಗಣನೆಯಂತೆ, ಶೀಲಾಂಕಸೂರಿಯವರ ಕಾಲಕ್ಕೆ ನಷ್ಟವಾಗಿದ್ದಿತು. ಎರಡನೆಯ ಶ್ರುತಸ್ಕಂಧದಲ್ಲಿ ಭದ್ರಬಾಹು ಸ್ವಾಮಿಯವರ ಕಾಲದಲ್ಲಿದ್ದ ನಿಸೀಹ ಚೂಲಾ ಈಗ ದೊರೆಯುವುದಿಲ್ಲ.

ನಂದೀಯಲ್ಲಿರುವ ನಿರೂಪಣೆಯಾಧಾರದಿಂದ ಹೇಳುವುದಾದರೆ ಈಗ ಉಪಲಬ್ದ ವಿರುವ ನಾಯಾಧಮ್ಮಕಹಾ ಅಂಗವು ಸಮುದ್ರದ ಒಂದು ಹನಿ ಮಾತ್ರದಂತಾಗಿದೆ. ಇದರ ನೂರಾರು ಆಖ್ಯಾಯಿಕೆಗಳು, ಉಪಾಖ್ಯಾಯಿಕೆಗಳು ಮತ್ತು ಆಖ್ಯಾಯಿಕೋಪಾ ಖ್ಯಾಯಿಕೆಗಳು ನಷ್ಟವಾಗಿವೆ. ೭ರಿಂದ ೧೧ರವರೆಗಿನ ಅಂಗಗಳು ಸಂಖ್ಯೇಯ ಸಹಸ್ರ ಪದಗಳುಳ್ಳವಾಗಿದ್ದುವೆಂದು (ನಂದೀ. ಸೂ. ೫೨–೫೬)ಹೇಳಿದೆ. ಈಗ ಇವುಗಳೂ ಕೂಡ ಪೂರ್ಣರೂಪದಲ್ಲಿ ದೊರೆಯುವುದಿಲ್ಲ.

ನಂದೀಯಲ್ಲಿರುವ ನಿರೂಪಣೆಯಾಧಾರದಿಂದ ಹೇಳುವುದಾದರೆ ಈಗ ಉಪಲಬ್ಧವಿರುವ ನಾಯಾಧಮ್ಮಕಹಾ ಅಂಗವು ಸಮುದ್ರದ ಒಂದು ಹನಿ ಮಾತ್ರದಂತಾಗಿದೆ. ಇದರ ನೂರಾರು ಆಖ್ಯಾಯಿಕೆಗಳು, ಉಪಾಖ್ಯಾಯಿಕೆಗಳು ಮತ್ತು ಆಖ್ಯಾಯಿಕೋಪಾ ಖ್ಯಾಯಿಕೆಗಳು ನಷ್ಟವಾಗಿವೆ. ೭ರಿಂದ ೧೧ರವರೆಗಿನ ಅಂಗಗಳು ಸಂಖ್ಯೇಯ ಸಹಸ್ರ ಪದಗಳುಳ್ಳವಗಿದ್ದುವೆಂದು (ನಂದೀ. ಸೂ೫೨–೫೬) ಹೇಳಿ ಈಗ ಇವುಗಳೂ ಕೂಡ ಪೂರ್ಣರೂಪದಲ್ಲಿ ದೊರೆಯುವುದಿಲ್ಲ.

ನಂದೀ(ಸೂ. ೫೫)ಯಲ್ಲಿ ೧೦ನೇಯ ಅಂಗದ ಪರಿಮಾಣದ ಬಗ್ಗೆ ಕಾಣೇಸಿರುವುದರ ಪರಿಗಣನೆಯೊಡನೆ 'ಪಣ್ಹವಾಗರಣ'ದ ಪರಿಮಾಣವನ್ನು ಕುರಿತು ಮುಂದಿನ ಎರಡು ನಿರ್ಣಯಗಳಲ್ಲಿ ಯಾವುದಾದರೊಂದನ್ನು ಅಂಗೀಕರಿಸಬೇಕಾಗುವುದು.

೧. ಪುರಾತನವಾದ ೧೦ನೇಯ ಅಂಗವು ನಿಶ್ಯೇಷವಾಗಿ ಕಳೆದು ಹೋಗಿದ್ದು ಅದರ ಬದಲಾಗಿ ಅದರೊಡನೆ ಸದೃಶವಾದದ್ದನ್ನು, ಅಭಯಸೂರಿದೇವರಿಂದ ಮುನ್ನ ಯಾರೋ, ರಚನೆ ಮಾಡಿ ಅದನ್ನು ಆ ಹೆಸರಿನಿಂದ ಕರೆದಿದ್ದಾರೆ. ಅಥವಾ–

೨.  ೨. ಈಗ ಇರುವ ಪಣ್ಹವಾಗರಣವು ಹಳೆಯದರ ಒಂದು ಅಂಶ ಮಾತ್ರವಾಗಿದ್ದು ಇದರ ಅಂತರ್ಗತ ವಸ್ತುವು ನಂದೀಯಲ್ಲಿ ಈ ಪೂರ್ಣವಾಗಿ ನಿರೂಪಿತವಾಗಿಲ್ಲ[೪೧] 'ದಿ ಕೆನಾನಿಕಲ್ ಲಿಟರೇಚರ್ ಆಫ್ ದಿ ಜೈನಾಸ' ಕರ್ತೃ ಶ್ರೀ ಕಾಪಾಡಿಯಾ ಅವರು ದಿಗಂಬರ ಜೈನ ಪಂಥದ ಮಾನ್ಯತೆಗಳ ಬಗ್ಗೆ ಅಲ್ಲಲ್ಲಿ ತಮ್ಮ ಅಂತರಂಗದ ಅಸದ್ಭಾವನೆಯನ್ನು ಬಿಂಬಿಸುವ ಮಾತುಗಳನ್ನು ಹೇಳಿದ್ದಾರೆ. ಇವುಗಳಲ್ಲಿ ಒಂದೆರಡ ನ್ನಾದರು ಇಲ್ಲಿ ಪರ್ಯಾಲೋಚಿಸಬೇಕಾಗಿದೆ.

೩.  "ದಿಗಂಬರರಲ್ಲಿ ಕೆಲವರು ಹೇಳಿರುವಂತೆ, ಚಂದ್ರಗುಪ್ತ ಮೌರ್ಯನ ರಾಜ್ಯಭಾರ ಕಾಲದಲ್ಲಿ ಉಂಟಾದ ದುರ್ಭಿಕ್ಷದ ಕಾರಣದಿಂದ ಎಲ್ಲ (ಅಂಗ) ಆಗಮ ಸಾಹಿತ್ಯವು ಮರೆವಾಯಿತು, ಮತ್ತು ಶ್ವೇತಾಂಬರರಿಂದ ಪಾಟಲೀಪುತ್ರದಲ್ಲಿ ರೂಪಿತವಾದ ಆಗಮ ಸಾಹಿತ್ಯವು (ಚಿಂದಿಗಳನ್ನು ಜೋಡಿಸಿ ಮಾಡಿದ) ತೇಪೆಯಾಗಿದ್ದು ಮೌಲಿಕವಾದುದಾಗಿಲ್ಲ." (ಪು ೬೭) ಈ ರೀತಿಯಾಗಿ ಯಾರು ಹೇಳಿದ್ದಾರೆ ಎಲ್ಲಿ ಹೇಳಿದ್ದಾರೆ ಎಂಬು  ದರ ಸೂಚನೆ ಇಲ್ಲವಾಗಿದೆ. ಆದರೂ ದಿಗಂಬರರಲ್ಲಿ ಕೆಲವರು ಹೇಳಿರುವರೆಂಬ ಈ ಹೇಳಿಕೆಯು ಭಾಗಶಃ ಸತ್ಯವಿದೆ. ಶ್ವೇತಾಂಬರ ಕಥನಕಾರರೇ ಹೇಳಿರುವಂತೆ ಸಾಧು ಸಮ್ಮೇಳನದಲ್ಲಿ ಸೇರಿದ ಸಾಧುಗಳಲ್ಲಿ ಯಾರು ಯಾರಿಗೆ ಎಷ್ಟು ಎಷ್ಟು ತಿಳಿದಿದ್ದಿತೋ ಅದಷ್ಟಷ್ಟನ್ನು ಓಟ್ಟು ಕೂಡಿಸಿ ಹನ್ನೊಂದು ಅಂಗಗಳ ಆಗಮವನ್ನು ರೂಪಿಸಲಾಯಿತು. ಇದನ್ನು ತೇಪೆಯ ಕೆಲಸವೆಂದು ಹೇಳಿರುವುದರಲ್ಲಿ ತಪ್ಪಾದರೂ ಏನು ? ಅನೇಕ ಸಾಧುಗಳಿಂದ ಒಟ್ಟುಗೂಡಿಸಿ ರೂಪಿತವಾದ ಹನ್ನೊಂದು ಅಂಗಗಳ ಸಾಹಿತ್ಯವು ಮೂಲರೂಪದಿಂದ ಕ್ರಮಬದ್ಧವಾಗಿದೆ, ದೋಷರಹಿತವಾಗಿ ಮೌಲಿಕತೆ ಹೊಂದಿದೆ ಎಂಬುದನ್ನು ಪ್ರಮಾಣೀಕರಿಸಿದವರು ಯಾರು ? ಆ ಸಾಧು ಸಮ್ಮೇಳನದಲ್ಲಿ ಯಾರೊ ಬ್ಬರಾಗಲಿ ಪೂರ್ಣರೂಪದಿಂದ ಹನ್ನೊಂದು ಅಂಗಗಳ ಸಾಹಿತ್ಯವನ್ನು ನೆನೆಪಿನಲ್ಲಿಟ್ಟು ಕೊಂಡಿರಲಿಲ್ಲವಾದ್ದರಿಂದ ಹೊಸದಾಗಿ ರೂಪಿತವಾದ ಈ ಆಗಮದ ಪ್ರಮಾಣೀ ಕತೆಯನ್ನು ತೋರುವಂತಹವರು ಯಾರೂ ಇರಲೇ ಇಲ್ಲ. ಈ ಕಾರಣದಿಂದ ಇದರ ಪ್ರಮಾಣೀಕತೆಯನ್ನು ಪ್ರಶ್ನಿಸಿರುವುದಲ್ಲಿ ಅಸಂಬದ್ಧತೆಯಾದರೂ ಏನಿದೆ ? ಈ ಆಗಮ ಸಾಹಿತ್ಯವು ಆ ಕಾಲದಲ್ಲಿ

ರೂಪಿತವಾಯಿತೆಂದು ಹೇಳಲಾಗಿರುವುದರ ಐತಿಹಾಸಿಕತಥ್ಯವನ್ನು ಹಿಂದೆ ಪರ್ಯಾಲೋಚನೆ ಮಾಡಲಾಗಿದೆ. ಇದನ್ನು ಪುನಃ ಇಲ್ಲಿ ಗಮನಕ್ಕೆ ತಂದುಕೊಳ್ಳಬಹುದಾಗಿದೆ.

ಶ್ರೀ ಕಪಾಡಿಯಾ ಅವರು ಇದೇ ಪ್ರಸಂಗದಲ್ಲಿ ಮುಂದುವರಿದು–"ಅವರು (ದಿಗಂಬರರು) ವೀ. ನಿ. ಸಂ. ೬೮೩ನೇ ವರ್ಷ ಅಂತ್ಯಗೊಂಡ ಸಮಯಕ್ಕಷ್ಟರಲ್ಲಿ ಜೈನ ಆಗಮವು ಪೂರ್ಣವಾಗಿ ಮರೆಯಾಗಿ ಹೋಯಿತೆಂದು ನಂಬುತ್ತಾರೆ. ಇದು ಬಹುವಿಚಿತ್ರವಾದುದೆನಿಸುತ್ತದೆ. ಕಾಲಾನುಕ್ರಮದಲ್ಲಿ ಕೆಲವು ಕೃತಿಗಳು ಅಥವಾ ಅವುಗಳ ಭಾಗಗಳು ಪ್ರತಿಕೂಲವಾದ ಸನ್ನಿವೇಶಗಳಿಂದಾಗಿ ವಿಸ್ಮೃತವಾದುವೆಂದರೆ ಗ್ರಹಿಸಬಹುದು. ಆದರೆ ವೀ. ನಿ. ಸಂ. ೬೮೩ರಲ್ಲಿ ಅಥವಾ ಅದಕ್ಕೆ ಹತ್ತಿರವಾದ

ಸಮಯದಲ್ಲಿ ಯಾವುದೇ ಪ್ರಕಾರದ ವಿನಾಶಕರವಾದ ಘಟನೆ ಅಥವಾ ಅತಿಮಾನುಷ ರೀತಿಯದಾದ ಘಟನೆಯ ಕಾರಣದಿಂದಾಗಿ ಆಗಮವು ನಷ್ಟವಾಯಿತೆಂದು ಹೇಳಿದ್ದಲ್ಲಿ ಅದು ಸಕಾರಣವೆನಿಸುತ್ತಿದ್ದಿತು. ಇಂತಹುದೇನೂ ಸಂಭವಿಸದೆಯೇ ಆಗಮವು ಲವ ಲೇಶವೂ ಉಳಿಯದಂತೆ ಲುಪ್ತವಾಯಿತೆಂದರೆ ಅದು ನಮ್ಮ ತಿಳಿವಿಗೆ ಗೋಚರಿಸುವಂತಹುದಲ್ಲ. ನನಗೆ ತಿಳಿದಿರುವಂತೆ ಇಂಡಿಯಾ ದೇಶದ ಚರಿತ್ರೆಯಲ್ಲಿ ಇಂತಹ ವಿನಾಶಕರ ಘಟನೆ ನಡೆಯಿತೆಂಬುದರ ಬಗ್ಗೆ ದಾಖಲಾತಿಗಳಿಲ್ಲ." ಶ್ರೀ ಕಪಾಡಿಯಾ ಅವರು ಈ ಪ್ರಸ್ತಾವಕ್ಕೆ ಸಂಬಂಧಿಸಿದಂತೆ ೧ನೇ ಅಡಿ ಟಿಪ್ಪಣಿಯಲ್ಲಿ ಒಂದು ರಸವತ್ತಾದ ಸಾಹಿತ್ಯವನ್ನೇ ಸೃಷ್ಟಿಸಿ ತಮ್ಮ ವಿಚಾರವನ್ನು ಮುಂದಿನಂತೆ ಮಂಡಿಸಿ ದ್ದಾರೆ. "ಜೈನ ಆಗಮವನ್ನು ಪೂರ್ಣರೀತಿಯಿಂದ ಇಲ್ಲವೆ ಭಾಗಶಃ ತಿಳಿದಿದ್ದ ಪ್ರತಿಯೊಬ್ಬ ವ್ಯಕ್ತಿಯ ಅಥವಾ ಎಲ್ಲ ವ್ಯಕ್ತಿಗಳಮರಣಕ್ಕೆ ಕಾರಣವಾಗಿದೆ ಎನ್ನಬಹುದಾದ ಕೆಲವಾದರೂ ಮಹಾನದಿಗಳು ದಡಮೀರಿ ಹರಿದುವೆಂಬ, ಅಥವಾ ಸುತ್ತ ಮುತ್ತಲಿನ ಪ್ರದೇಶವನ್ನು ಮುಳುಗಿಸಿವಂತಹ ಅರೇಬಿಯಾ ಸಮುದ್ರ ಅಥವಾ ಹಿಂದೂ ಸಾಗರಗಳು ಉಕ್ಕಿ ಮೇರೆ ಮೀರಿ ಹರಿದುವೆಂಬ ಘಟನೆಯಾಗಲಿ ಎಲ್ಲಿಯೂ ಉಲ್ಲೇಖಗೊಂಡಿಲ್ಲ. ಈ ದೇಶವನ್ನು ಮುಳುಗಿಸಿದಂತಹ ಜಲಪ್ರಳಯದ ಬಗ್ಗೆಯೂ ಹೇಳಿಕೆಯಿಲ್ಲ. ಯಾವುದೇ ಪ್ರದೇಶದ ಭಾಗವನ್ನು ನಿರ್ಮೂಲಗೊಳಿಸುವಂತಹ ಲಾವಾ ವನ್ನು ಉಕ್ಕಿಸಿದ ಜ್ವಾಲಾಮುಖಿಯ ಬಗ್ಗೆಯೂ ಹೇಳಿಕೆಯಿಲ್ಲ. ಜೈನರು ವಾಸಮಾಡುವ ದೇಶದ

ಮೇಲೆಕ್ರೂರದಳ್ಳುರಿಯು ಕೈಚಾಚಿದ ಬಗ್ಗೆಯೂ ಹೇಳಿಕೆಯಿಲ್ಲ, ಜನರ ವಿನಾಶಕ್ಕೆ ಕಾರಣವಾದ, ಬೃಹತ್ ಇಲ್ಲವೆ ಅಲ್ಪ ಪ್ರಮಾಣದ ಭೂಕಂಪದ ಬಗ್ಗೆಯೂ ಹೇಳಿಕೆಯಿಲ್ಲ. ಎಲ್ಲಿಯೇ ಆಗಲಿ ಭೂಮಿಯು ಬಾಯ್ದೆರೆದು ತನ್ನ ಹಿಡಿತಕ್ಕೆ ಸಿಕ್ಕ ಎಲ್ಲವನ್ನೂ ಕಬಳಿಸಿದ ಬಗ್ಗೆಯಾಗಲಿ ಹೇಳಿಕೆಯಿಲ್ಲ."

ಶ್ರೀ ಕಪಾಡಿಯಾ ಅವರಿಗೆ ದಿಗಂಬರ ಪಂಥದ ಶ್ರುತಾವತರಣದ ನಿಜ ಐತಿಹ್ಯ ತಿಳಿದೇ ಇಲ್ಲವೆಂದು ಕಾಣುತ್ತದೆ.ಅಥವಾ ತಿಳಿದಿದ್ದರೂ ಅದನ್ನು ಮರೆಮಾಚಿ ದಿಗಂಬರ ಪಂಥದ ಬಗ್ಗೆ ತಮಗಿರುವ ತೀವ್ರ ಅಸಹನೆ–ಅಸದ್ಭಾವನೆಯ ಅಭಿವ್ಯಕ್ತಿಗೆ ಸಾಧನ ವನ್ನಾಗಿ ಉಪಯೋಗಿಸಿಕೊಂಡಿದ್ದಾರೆ. ದಿಗಂಬರ ಶ್ರುತಾವತಾರದ ಯಾವುದೇ ಐತಿಹ್ಯ ಮೂಲದಲ್ಲಾಗಲಿ ಅದರ ಆಗಮವು ವೀ. ನಿ. ಸಂ. ೬೮೩ರ ಸಮಯಕ್ಕೆ ಪೂರ್ಣವಾಗಿ ನಷ್ಟವಾಯಿತೆಂದು ಹೇಳಿಯೇ ಇಲ್ಲ. ವಾಸ್ತವವಾಗಿ ಹೇಳಿರುವುದು ಆಗಮ ಗ್ರಂಥಗಳನ್ನು ಪೂರ್ಣ ರೀತಿಯಿಂದ ತಿಳಿದಿದ್ದ ಮುನಿಗಳ ಪರಂಪರೆ ಈ ಸಮಯಕ್ಕೆ ಕೊನೆಗೊಂಡಿತು ಎಂದು ಹೇಳಿ, ಇಲ್ಲಿಂದ ಮುಂದೆ ಚತುರ್ದಶ ಪೂರ್ವ ಗಳೂ ಸೇರಿದಂತೆ ಎಲ್ಲ ಆಗಮಗಳನ್ನು ಏಕದೇಶ ರೀತಿಯಿಂದ ತಿಳಿದಿದ್ದ ಮುನಿಜನರಿದ್ದರೆಂದು ಹೇಳಿರುವುದಲ್ಲದೆ ಅವರ ಹೆಸರುಗಳನ್ನೂ ಹೇಳಿದೆ. (ಶ್ರುತಾವತಾರ–ಇಂದ್ರನಂದಿಸ್ವಾಮಿ) ಇಂತಹ ಮುನಿವರರಲ್ಲಿ ಆಗ್ರಾಯಣೀಯ ಪೂರ್ವದ ಕಮ್ಮಪಯಡಿ ಪ್ರಾಭೃತವನ್ನು ಪೂರ್ಣವಾಗಿ ತಿಳಿದಿದ್ದ ಧರಸೇನರು ಒಬ್ಬರು, [ಷ. ಆಗಮ. ೧, ೧, ೧. ಸೋಲಾಪುರ ಪ್ರಕಾಶನ (ಧವಲಾ ಟಿಕೆ) ಪು. ೬೮]. ಇವರು ಆಚಾರಂಗದ ಪೂರ್ಣಪಾಠಿಗಳೂ ಆಗಿದ್ದರೆಂದು ಬೃಹತ್ಕಥಾಕೋಶದಲ್ಲಿ ಹೇಳಿರುವುದನ್ನು ಹಿಂದೆ ವಿಶದಪಡಿಸಿದೆ. ಇವರಿಂದ ಕಮ್ಮ ಪಯಡಿಯ ಉಪದೇಶ ಪಡೆದ ಪುಷ್ಪದಂತ ಮತ್ತು ಭೂತಬಲಿ ಸ್ವಾಮಿಯವರು ಅದನ್ನು ಲಿಪಿಬದ್ಧಗೊಳಿಸಿ, ಷಟ್ಖಂಡಾಗಮ ಎಂಬ ಹೆಸರಿತ್ತಿರುವ ಸಂಗತಿ ಪ್ರಸಿದ್ಧ ಸಂಗತಿ. ಹೀಗೆಯೇ ಗುಣಧರಸ್ವಾಮಿಯವರು ಪೂರ್ವ ಗಳಲ್ಲಿ ೫ನೆಯಾದ ಜ್ಞಾನಪ್ರವಾದ ಪೂರ್ವದಲ್ಲಿ ಒಳಗೊಂಡಿದ್ದ ಪ್ರಾಭೃತವನ್ನು ತಿಳಿದಿದ್ದು ಅದನ್ನು ಅವರೇ ಸ್ವತಃ ಸಂಗ್ರಹಿಸಿ 'ಕಷಾಯಪಾಹುಡ' ಗ್ರಂಥ ರಚನೆಮಾಡಿ ನಾಗಹಸ್ತಿ ಮತ್ತು ಆರ್ಯಮಂಕ್ಷುಗಳಿಗೆ ವ್ಯಾಖ್ಯಾನಪೂರ್ವಕ ಉಪದೇಶಿಸಿ ದ್ದಾರೆ, ಶ್ವೇತಾಂಬರ ಪಂಥದ ಹೇಳಿಕೆಯಂತೆಯೇ ನಾಗಹಸ್ತಿಯವರು ೫ ಪೂರ್ವಗಳನ್ನು

ತಿಳಿದವರಾಗಿದ್ದಾರು. ಇಷ್ಟಲ್ಲದೆ ಈ ಆಗಮಗಳಿಗೆ ಟೀಕೆಗಳನ್ನು ರಚಿಸಿದ ಯತಿವೃಷಭ, ಉಚ್ಚರಣಾಚಾರ್ಯ, ಕುಂದಕುಂದ ಸ್ವಾಮಿಯವರೇ ಮುಂತಾದವರೂ ಆಗಮಗಳ ಏಕದೇಶಾತ್ಮಕ ಜ್ಞಾನಸಂಪನ್ನರಾಗಿದ್ದರು. ಕುಂದಕುಂದಸ್ವಾಮಿಯವರ ಗ್ರಂಥಗಳು, ವಟ್ಟಕೇರಸ್ವಾಮಿಯವರ ಮೂಲಾಚಾರ ಇವೆಲ್ಲವೂ ನೇರವಾಗಿ ಆಗಮ ಗ್ರಂಥಗಳಿಂದ ಅವತರಣಗೊಂಡ ಏಕದೇಶಾತ್ಮಕ ಆಗಮ ಗ್ರಂಥಗಳಾಗಿವೆ ಎಂಬುದು ಅಸಹನೆ ಅಸದ್ಭಾವದ ದೃಷ್ಟಿದೋಷವಿಲ್ಲದವರಿಗೆ, ಗೋಚರಿಸುವುದು. ದಿಗಂಬರರ ಈ ಆಗಮ ಗ್ರಂಥಗಳ ಅಧಿಕೃತ ಪ್ರಮಾಣೀಕತೆಯನ್ನು ಕೆಲವರು ಪ್ರಶ್ನಿಸಿರುವರೆಂದು ಹೇಳಿದೆ. (ಪೂ. ಸೂ. ದಿ. ಕೆ. ಲಿ. ಆಫ್ ದಿ ಜೈನಾಸ್, ಪು. ಸಂ. ೭೫) ಈ ಅಸಂಬಂಧ್ಧ ಪ್ರಶ್ನೆ ಕುಂದಕುಂದರ ಗ್ರಂಥಗಳಲ್ಲಿ ಯಾವ ಪಂಚಾಸ್ತಿಕಾಯ ಷಡದ್ರವ್ಯ ನವ ಪದಾರ್ಥ ಮುಂತಾದ ತತ್ವಗಳು ಪ್ರರೂಪಿತವಾಗಿವೆಯೋ ಅವುಗಳೇ ಶ್ವೇತಾಂಬರ ಆಗಮಗಳಲ್ಲಿಯೂ ಪ್ರರೋಪಿತವಾಗಿವೆಯಾದ್ದರಿಂದ ಈ ಆಗಮಗಳ ಬಗ್ಗೆಯೂ ಅದೇ ಪ್ರಮಾಣಿಕತೆಯ ಪ್ರಶ್ನೆ ಸಹಜವಾಗಿ ಅನ್ವಿತವಾಗುವುದು. ಆಗಮವು ವೀ. ನಿ. ಸಂ. ೬೮೩ರಷ್ಟರಲ್ಲಿ ಪೂರ್ಣವಾಗಿ ನಷ್ಟವಾಯಿತೆಂದು ದಿಗಂಬರ ಪಂಥದವರು ಹೇಳಿದ್ದಾರೆಂಬ ಆರೋಪವಲ್ಲದೆ, ಅದು ಹಾಗೆ ನಷ್ಟವಾಗಲು ಕಾರಣವಾದ ಆಘಾತ ಉತ್ಪಾತವಾವುದೂ ಕಂಡುಬರುವುದಿಲ್ಲ ಎಂದು ಶ್ರೀ ಕಪಾಡಿಯಾರವರು ಕಾವ್ಯಾತ್ಮಕ ವಾಗಿ ಅಣಕವಾಡಿರುವುದನ್ನು ಹಿಂದೆ ಉಲ್ಲೇಖಿಸಿದೆ. ಶ್ವೇತಾಂಬರ ಆಗಮ ಸಂಕಲನದ ಪ್ರತಿಯೊಂದು ಘಟನೆಗೂ ೧೨ ವರ್ಷಗಳ ದುರ್ಭಿಕ್ಷದ ಕಥೆ ಸೃಷ್ಟಿಸಿ ಅಂತಹ ಕಥೆಗಳನ್ನು ದಿಗಂಬರ ಪಂಥದವರು ಹೇಳದಿರುವುದು ಇವರ ಈ ಅಣಕಕ್ಕೆ ಕಾರಣ ಕುಂದರು ವಟ್ಟಕೇರರು ಷಟ್ಖಂಡಾಗಮವನ್ನು ನಿಬದ್ದ ಮಾಡಿದ ಪುಷ್ಪದಂತ ಮತ್ತು ಭೂತಬಲಿಸ್ವಾಮಿಯವರ ಕಿರಿಯ ಸಮಕಾಲೀನರಾಗಿದ್ದಾರೆ. ಅನುಕ್ರಮವಾಗಿ ಇವರು ಗಳಿಂದ ರಚಿತವಾಗಿರುವ ತಿಲೋಯಪಣ್ಣತ್ತಿ. ಪಂಚತ್ಥಿಕಾಯಾದಿ ಪಾಹುಡಗಳು, ಮೂಲಾಚಾರ, ಮೂಲಾರಾಧನಾ ಮುಂತಾದ ಕೃತಿಗಳು ದಿಗಂಬರ ಪಂಥದ ಆಗಮ ಗ್ರಂಥಗಳಲ್ಲಿ ಪರಿಗಣನೆ ಹೊಂದುವುವು ಎಂಬುದನ್ನು ನಿರಾಕರಿಸುವಂತಿಲ್ಲ.

ಪ್ರಸ್ತುತ ಪ್ರಸಂಗದಲ್ಲಿ ಶ್ವೇತಾಂಬರ ಪಂಥದ ಮಾನ್ಯತೆಯಂತೆ ಜಿನಕಲ್ಪ ಮತ್ತು ಸ್ಥವಿರ ಕಲ್ಪಗಳ ಬಗ್ಗೆ ವಿವರಣೆಯ ಅಗತ್ಯವಿದೆ. ಶ್ವೇತಾಂಬರ ಪಂಥದಲ್ಲಿ ಮುನಿ ಧರ್ಮವನ್ನು 'ಅಚೇಲಕ' ಮತ್ತು 'ಸಚೇಲಕ' (ದುವೇಧಮ್ಮೋ)ಎಂದು ಎರಡು ಪ್ರಕಾರವುಳ್ಳದ್ದನ್ನಾಗಿ ಹೇಳಿದೆ. ಇವೆರಡರಲ್ಲಿ ಮೊದಲನೆಯದಾದ ಅಚೇಲಕ ಧರ್ಮವು ಜಿನಕಲ್ಪವಾಗಿದೆ ಮತ್ತು ಸಚೇಲಕ ಧರ್ಮವು ಸ್ಥವಿರಕಲ್ಪವಾಗಿದೆ. 'ಅಚೇಲಕ' ಎಂದರೆ ವಸ್ತ್ರವನ್ನು ಹೊದಿರದ ನಗ್ನ ಮುನಿ ಆಚಾರ ಧರ್ಮವಾಗಿದೆ ಮತ್ತು (ಸಂತರು  ತ್ತರೋ=) 'ಸಚೇಲಕ' ಎಂದರೆ ವಸ್ತ್ರಸಹಿತ ಅಥವಾ ವಸ್ತ್ರಧಾರಕ ಮುನಿ ಆಚಾರಧರ್ಮವಾಗಿದೆ.

ಆದಿತೀರ್ಥಂಕರನಾದ ವೃಷಭ ಸ್ವಾಮಿ ಮತ್ತು ಅಂತಿಮ ತೀರ್ಥಂಕರನಾದ ಮಹಾವೀರಸ್ವಾಮಿಯವರೀರ್ವರ ಕಾಲದ ಮುನಿಗಳು ಜಿನಕಲ್ಪ–ಅಚೇಲಕ ಧರ್ಮಪಾಲಕ ರೆಂದು ಮತ್ತು ಮಧ್ಯಕಾಲದ ಅಜಿತಾದಿ ಪಾರ್ಶ್ವನಾಥ ಪರ್ಯಂತರಾದ ಇಪ್ಪತ್ತೆರಡು ತೀರ್ಥಂಕರರ ಕಾಲದ ಮುನಿಗಳು ಸ್ಥವಿರಕಲ್ಪಿ–ಸಚೇಲಕ ಧರ್ಮಪಾಲಕರೆಂದು ಹೇಳಿದೆ. ಭ. ಮಹಾವೀರನ ಕಾಲದಲ್ಲಿ ಪಾರ್ಶ್ವನಾಥ ತೀರ್ಥ ಂಕರನ ತೀರ್ಥ ಪರಂಪರೆಯ (ಸಚೇಲಕಧರ್ಮದ) ಕೇಶಿಕುಮಾರಶ್ರಮಣ ಮತ್ತು ಭ.ಮಹಾವೀರನ (ಅಚೇಲಕ ಧರ್ಮದ) ಗೌತಮ ಗಣಧರರ ಸಂವಾದದಲ್ಲಿ ಈ ವಿಷಯದ ನಿರೂಪಣೆ ಯಿದೆ.[೪೨] ಇದರ ಆಧಾರದಿಂದ ಆಧುನಿಕ ವಿದ್ವಾಂಸರು ಭ. ಮಹಾವೀರನ ಮುನಿ ಸಂಘದಲ್ಲಿ ಅಚೇಲಕ ಮತ್ತು ಸಚೇಲಕ ಧರ್ಮಗಳ ಎರಡೂ ಪಂಥಗಳ ಮುನಿಗಳು ಸಂಮಿಳಿತರಾಗಿದ್ದರೆಂಬ ಅಭಿಮತವುಳ್ಳವರಾಗಿದ್ದಾರೆ. ಈ ಸಂಗತಿಯನ್ನು ಕುರಿತಂತೆ ಮೂಡುವ ಒಂದು ಪ್ರಶ್ನೆಯನ್ನು ಇಲ್ಲಿ ವಿವೇಚಿಸಬೇಕಾಗಿದೆ.

ಆದಿತೀರ್ಥಂಕರ ವೃಷಭನಾಥ ಮತ್ತು ಅಂತಿಮ ತೀರ್ಥಂಕರ ಮಹಾವೀರರ ಮಧ್ಯ ಕಾಲದವರಾದ ಅಜಿತಾದಿ ಪಾರ್ಶ್ವನಾಥ ಪರ್ಯಂತರಾದ ಇಪ್ಪತ್ತೆರಡು ತೀರ್ಥಂಕರರ ಕಾಲದಲ್ಲಿ ಸಚೇಲಕ ಮುನಿಧರ್ಮವಿದ್ದಿತೇ? ಎಂಬುದು ಪ್ರಶ್ನೆ. ಈ ಪ್ರಶ್ನೆಗೆ ಮೊದಲನೆ ಯದಾಗಿ ಬೌದ್ಧಧರ್ಮದ ಆಗಮ ತ್ರಿಪಿಟಿಕ ಮೂಲದಲ್ಲಿ ದೊರಕುವ ಐತಿಹಾಸಿಕ ಸಂಗತಿಯನ್ನು ಗಮನಿಸಬೇಕಾಗಿದೆ. ಭ. ಬುದ್ಧನು ಸ್ವತಃ ಸಾರಿಪುತ್ತನಿಗೆ ಹೇಳಿರುವಂತೆ, ತಾನು ಬೋಧಿಸಂಪನ್ನನಾಗುವ ಮುಂಚಿನ ಸಾಧನೆಯ

ತಪಸ್ಸಿನ ಆಚರಣೆಯ ಕಾಲ ದಲ್ಲಿ ನಗ್ನನಾಗಿದ್ದು ಭಿಕ್ಷಾಚರ್ಯೆಯಿಂದ ದೊರಕಿದ ಆಹಾರವನ್ನು ಪಾಣಿಪಾತ್ರದಿಂದ ಭುಂಜಿಸುತ್ತಿದ್ದುದೇ ಮುಂತಾದ ಸಂಗತಿಗಳನ್ನು ಹೇಳಿದ್ದಾನೆ.[೪೩] ಇಲ್ಲಿ ಹೇಳಿರುವ ಪ್ರತಿಯೊಂದು ಅಂಶವೂ ದಿಗಂಬರ ಪಂಥದ ಮುನಿಗಳ ಆಚಾರವಿಧಿಯೇ ಆಗಿದೆ. ಆದರೆ ಭ. ಗೌತಮನು ಸಾಧನೆಯ ಕಾಲದಲ್ಲಿ ಆಚರಿಸಲಾಯಿತೆಂದು ಹೇಳಲಾಗಿರುವ ಮೇಲ್ಕಂಡ ಅಚೇಲಕ ಮುನಿಧರ್ಮದ ತಪಸ್ಸು ನಿಶ್ಚಿತವಾಗಿ ಭ.ಮಹಾವೀರನ ಉಪದೇಶದ ಆಧಾರದ್ದಾಗಿರದೆ ಭ.ಪಾರ್ಶ್ವನಾಥನ ಉಪದೇಶದ ಆಧಾರ ಹೊಂದಿರು ವುದಾಗಿಯೆಂದು ಹೇಳಲು ಸಾಕ್ಷ್ಯಾಧಾರವಿದೆ.

ಶ್ರೇಣಿಕ–ಬಿಂಬಸಾರನ ಸಮಕಾಲೀನರಾದ ಭ.ಬುದ್ದ ಮತ್ತು ಭ. ಮಹವೀರ ರಿಬ್ಬರೂ ಸಮಕಲೀನರಾಗಿದ್ದರೆಂಬುದು ನಿರ್ವಿವಾದದ ಐತಿಹಾಸಿಕ ಸಂಗತಿ. ಬೌದ್ದ ಆಗಮಗಳಲ್ಲಿ ಹಾಗು ಇತರ ಇತಿವೃತ್ತಕೃತಿಗಳಲ್ಲಿ ದೊರಕುವ ಹೇಳಿಕೆಗಳ ಆಧಾರದಿಂದ ಭ. ಮಹಾವೀರನು ನಿರ್ವಾಣ ಹೊಂದಿದ ಅನಂತರದ ಎರಡು ಇಲ್ಲವೆ ಮೂರು ವರ್ಷಗಳ ಸಮಯದಲ್ಲಿ ಭ. ಬುದ್ದನು ನಿರ್ವಾಣ ಹೊಂದಿರುವನೆಂದು ತಜ್ಞ ವಿದ್ವಾಂಸರು ಹೇಳಿದ್ದಾರೆ. ಭ. ಬುದ್ದನು ತನ್ನ ೮೦ನೇ ವಯಸ್ಸಿನಲ್ಲಿ ವೈಶಾಖ ಪೂರ್ಣಿಮೆಯಂದು ನಿರ್ವಾಣ ಹೊಂದಿದ್ದಾನೆ. ಈ ಸಮಯದಿಂದ ಎರಡುವರೆ ವರ್ಷಗಳ ಹಿಂದೆ ಭ. ಮಹಾವೀರನು ತನ್ನ ೭೨ನೇ ವಯಸ್ಸಿನಲ್ಲಿ ಕಾರ್ತಿಕಮಾಸದಲ್ಲಿ ನಿರ್ವಾಣ ಹೊಂದಿದ್ದಾನೆ. ಇದರಂತೆ ಭ. ಮಹಾವೀರನು ನಿರ್ವಾಣ ಹೊಂದಿದ ಸಮಯದಲ್ಲಿ ಭ. ಬುದ್ದನು (೮೦–೩=) ೭೭ ವರ್ಷ ವಯೋಮಾನದವವನಾಗಿದ್ದನು ಎಂದು ಸ್ಥೂಲವಾಗಿ ಹೇಳಬಹುದು.(ವಾಸ್ತವವಾಗಿ ಇವರೀರ್ವರ ನಿರ್ವಾಣಸಮಯಗಳ ಮಧ್ಯೆ ಎರಡೂವರೆ ವರ್ಷಗಳ ಅಂತರವಿದೆ.)ಈ ಗಣನೆಯನುಸಾರ, ಭ. ಬುದ್ದನು ವಯಸ್ಸಿನಲ್ಲಿ ಭ.ಮಹಾವೀರನಿಗಿಂತ (೭೭–೭೨) ೫ ಇಲ್ಲವೆ ೬ ವರ್ಷಗಳಷ್ಟು ಹಿರಿಯನಾಗಿದ್ದನು. ಭ. ಬುದ್ಧನು ತನ್ನ ೩೫ನೆಯ ವರ್ಷ ವಯೋಮಾನಕ್ಕಾಗಲೇ ತನ್ನ ಸಾಧನೆಯ ತಪಸ್ವೀ ಜೀವನವನ್ನು ಪೂರಯಿಸಿ ಬೋಧಿಸಂಪನ್ನನಾಗಿ ತನ್ನ ಧರ್ಮ ಚಕ್ರದ ಪ್ರವರ್ತನೆ ಮಾಡಿದ್ದನು. ಭ. ಬುದ್ಧನ ಈ ೩೫ ವರ್ಷ ವಯೋಮಾನದ ಸಮಯದಲ್ಲಿ ಭ. ಮಹಾವೀರನು ಹೆಚ್ಚೆಂದ ಹೆಚ್ಚು ೩೫–೫=೩೦ ವರ್ಷ ವಯೋ ಮಾನದವನಾಗಿದ್ದನು. ಜೈನ ಧರ್ಮದ ಪಂಥದ ಆಮ್ನಾಯಾನುಸಾರ ಭ. ಮಹಾವೀರನು ತನ್ನ ೩೦ನೇ ವರ್ಷ ವಯೋಮಾನದಲ್ಲಿ ಪ್ರವ್ರಜಿತನಾಗಿ ೧೨

ವರ್ಷಗಳ ತಪಸ್ಸಿನ ಅನಂತರ ಕೇವಲ ಜ್ಞಾನಸಂಪನ್ನನಾಗಿ ತನ್ನ ಧರ್ಮತಿರ್ಥದ ಪ್ರವರ್ತನೆ ಮಾಡಿದ್ದಾನೆ. ಆದ್ದರಿಂದ ಭ. ಬುದ್ಧನ ಸಾಧನೆಯ ತಪಸ್ಸಿನ ಕಾಲದಲ್ಲಿ ಭ. ಮಹಾವೀರನ ಉಪದೇಶದ ಅಚೇಲಕ (ದಿಗಂಬರ) ಧರ್ಮವು ಪ್ರವರ್ತಿತವಾಗಿರಲಿಲ್ಲವೆಂದು ನಿಶ್ಚಿತ ವಾಗುವುದು [೪೪]. ಭ. ಮಹಾವೀರನಿಗಿಂತ ಸುಮಾರು ೨೦೦ ವರ್ಷಗಳಷ್ಟು ಮುಂಚಿತವಾಗಿ ಭ. ಪಾರ್ಶ್ವನಾಥನ ಧರ್ಮವು ಪ್ರವರ್ತಿತವಾಗಿದ್ದಿತೆಂದು ಈಗ ಸಾಧಾರಣವಾಗಿ ಚರಿತ್ರಕಾರರು ಒಪ್ಪಿರುವ ಸಂಗತಿಯಾಗಿದೆ. ಆದ್ದರಿಂದ ಭ. ಬುದ್ಧನು ತನ್ನ ತಪ ಸ್ಸಾಧನೆಯ ಕಾಲದಲ್ಲಿ, ಸ್ವತಃ ಆಚರಿಸಿದನೆಂದು ಹೇಳಲಾಗಿರುವ ಅಚೇಲಕ ಧರ್ಮವು ಭ. ಪಾರ್ಶ್ವನಾಥನ ಉಪದೇಶದನುಸಾರಿಯಾದುದಾಗಿದ್ದಿತೆಂದು ನಿಶ್ಚಿತವಾಗುವುದು. 'ಭ. ಬುದ್ಧನು (ಬುದ್ಧಕೀರ್ತಿಯು) ಶ್ರೀ ಪಾರ್ಶ್ವನಾಥ ತೀರ್ಥಂಕರನ ಧರ್ಮತೀರ್ಥ ದಲ್ಲಿ ದಿಗಂಬರ ಮುನಿದೀಕ್ಷೆ ಹೊಂದಿದ್ದು ಅನಂತರ ಪರಿಭ್ರಷ್ಟನಾದನು' ಎಂಬ ದಿಗಂಬರ ಪಂಥದ ಐತಿಹ್ಯವಿದೆ[೪೫]. ಇದರಿಂದಲೂ ಭ. ಬುದ್ಧನು ಭ. ಪಾರ್ಶ್ವನಾಥ ನಿಂದ ಉಪದಿಷ್ಟವಾಗಿದ್ದ ಅಚೇಲಕ–ದಿಗಂಬರ ಮುನಿಧರ್ಮಪಾಲನೆ ಮಾಡಿದ್ದನೆಂದು ಸಮರ್ಥಿತವಾಗುವುದು. ಈ ಕಾರಣಗಳಿಂದ ಭ. ಪಾರ್ಶ್ವನಾಥ ತೀರ್ಥಂಕರನಿಂದಉಪದಿಷ್ಟವಾಗಿದ್ದ ಮುನಿಧರ್ಮವು ಅಚೇಲಕ (ಜಿನಕಲ್ಪ) ಮುನಿಧರ್ಮವಾಗಿದ್ದಿತೆಂದು ಪ್ರಮಾಣೀಕೃತವಾಗುವುದು. ಈ ವಿಷಯವಾಗಿ ಮತ್ತೂ ಒಂದು ಅಪವಾದಾ ತ್ಮಕವಾದ ಅಂಶವನ್ನು ಇಲ್ಲಿ ಪರಿಶೀಲಿಸಬೇಕಾಗಿದೆ. ಶ್ವೇತಾಂಬರ ಪಂಥದ ಪ್ರಸಿದ್ಧ ವಿದ್ವಾಂಸರಲ್ಲೊಬ್ಬರು ಬೌದ್ಧ ಆಗಮ ಸಾಹಿತ್ಯದಲ್ಲಿ 'ಏಕಸಾಟಿಕ' (ಒಂದು ವಸ್ತ್ರ ಧಾರಕ) ನಿರ್ಗ್ರಂಥರನ್ನು ಕುರಿತ ಹೇಳಿಕೆಯಿದೆಯೆಂದು ಮತ್ತು ಇದು ಸಚೇಲಕ ಮುನಿಗಳ ಸೂಚಕವಾಗಿರುವುದೆಂದೂ ಹೇಳಿದ್ದಾರೆ. ಆದರೆ ದಿಗಂಬರ ಆಮ್ನಾಯ ದನುಸಾರ ಉತ್ತಮ ಶ್ರಾವಕರಾದ ಐಲಕರು 'ಏಕಸಾಟಿಕ' ನಿಯಮಪಾಲಕರಾಗಿ ಮುನಿಸಂಘದಲ್ಲಿಯೇ ಇರುತಿದ್ದರು. ಆದ್ದರಿಂದ ಬೌದ್ಧ ಆಗಮದ 'ಏಕಸಾಟಿಕ' ಎಂಬುದು ಶ್ವೇತಾಂಬರ ಮಾನ್ಯತೆಯ 'ಸಚೇಲಕ' ಮುನಿಗಳ ಸೂಚಕವಾಗಿದೆಯೆಂದು ಹೇಳಲಾಗುವುದಿಲ್ಲ. ಪ್ರಸ್ತುತ ಪ್ರಸಂಗದಲ್ಲಿ ಶ್ರೀಯುತರಾದ ಜೆ. ಬಿ. ಬುಹ್ಲರ್ ಅವರು ಮತ್ತು ಬರ್ಗೆಸ್ ಅವರು 'ದಿ ಇಂಡಿಯನ್ ಸೆಕ್ಟ್ ಆಫ್ ಇದ ಜೈನಸ್'ನಲ್ಲಿ ವ್ಯಕ್ತಪಡಿಸಿರುವ ಅಭಿಪ್ರಾಯವು ಗಮನಾರ್ಹವಾಗಿದೆ. (ಪು.೩೧) 'ನಿಗಂಠನಾಥಪುತ್ತ' ಎಂಬುದು

‘ನಿಗಂಠ’ ಮತ್ತು ‘ನಾಥ ಪುತ್ತ’ ಎಂಬ ಎರಡು ಪದಗಳ ಸಂಯೋಜನೆಯ ಸಮಸ್ತಪದವಾಗಿದ್ದು ‘ನಿಗಂಠ’ವು ಹಳೆಯದಾದ ಜೈನಧರ್ಮ ಪಂಗಡದ ಸೂಚಕ ವಾಗಿದೆ, ಮತ್ತು ‘ನಿಗಂಠನಾತಪುತ್ತ’ ಎಂಬ ಒಟ್ಟು ಪದವು ಆ ಹಳೆಯ ಜೈನಧರ್ಮದ ಪುನರುತ್ಥಾನಕಾರವಾದ ಮಾಹಾವೀರನ ಸೂಚಕವಾಗಿದೆ. . . (ಮುಂದುವರಿದು ಪು. ೩೬) ತಮ್ಮ ಧರ್ಮಕ್ಕೆ ಇತರ ಧರ್ಮದವರನ್ನು ಮತಾಂತರಗೊಳಿಸಿಕೊಂಡ (ಬೌದ್ಧರ) ಕಥನಗಳಿವೆ. ಇವುಗಳಲ್ಲಿ ಭ. ಬುದ್ಧನ ಉಪ ದೇಶದ ಮೂಲಕ ಅಥವಾ ಅವನ ಶಿಷ್ಯರ ಮೂಲಕ ನಿರ್ಗ್ರಂಥ ಧರ್ಮಪಂಗಡದವರನ್ನು ಮತಾಂತರಗೊಳಿಸಿದುದರ ಬಗ್ಗೆ ಅನೇಕ ಹೇಳಿಕೆಗಳಿವೆ . . . (ಮತ್ತೂ ಹೇಳಿರುವಂತೆ) ಭ. ಬುದ್ಧನ ಶಿಷ್ಯರು, ಗೌರವ ಮಾನ್ಯತೆ ಪಡೆಯುವುದಕ್ಕಾಗಿ ನಿರ್ಗ್ರಂಥರ ಅನುಕರಣೆ ಮಾಡಿದರು ಮತ್ತು ನಿರ್ವಸ್ತ್ರ  ಎಂದರೆ ಉಡಿಗೆ ಇಲ್ಲದವರಾಗಿ ಸಂಚರಿಸಿದರು, ವಸ್ತ್ರಧರಿಸದಿದ್ದುದರಿಂದ ಅವರನ್ನು ಜನವು ’ಪವಿತ್ರರಾದ ನಿರ್ಗ್ರಂಥರೆಂದು ಗ್ರಹಿಸುತ್ತಿದ್ದಿತು"–‘ನಿಗಂಠ’ ಪದವು ಭ. ಮಹಾವೀರನಿಗಿಂತ ಪೂರ್ವಕಾಲೀನವಾದ ಜೈನಧರ್ಮದ ಪಂಗಡದ ಸೂಚಕವಾಗಿದೆ ಯೆಂದು ಶ್ರೀ ಬುಲ್ಹರ್ ಮತ್ತು ಶ್ರೀ ಬರ್ಗೆಸ್ ಅವರು ಅಭಿಪ್ರಾಯಪಟ್ಟಿರುವುದನ್ನು ಹಿಂದೆ ತಿಳಿಸಲಾಗಿದೆ. ಅಲ್ಲದೆ ಭ. ಬುದ್ಧನ ಧರ್ಮ ಪ್ರವರ್ತನೆಯಾದ ಸುಮಾರು ಹನ್ನೆರಡು ವರ್ಷಗಳ ಬಳಿಕ ಭ. ಮಹಾವೀರನ ಧರ್ಮತೀರ್ಥವು ಆರಂಭವಾಗಿದೆ ಯೆಂದು ಹಿಂದೆ ಪ್ರಮಾಣೀಕರಿಸಲಾಗಿದೆ. ಆದ್ದರಿಂದ ಇಲ್ಲಿ ಉಲ್ಲೇಖಿಸಿರುವ ‘ನಿಗಂಠ’ ಪದವು ಭ. ಮಹಾವೀರನಿಂದ ಹಿಂದಿನ ಕಾಲದ ತೀರ್ಥಂಕರ ಭ. ಪಾರ್ಶ್ವನಾಥನ ಶಿಷ್ಯ ಸಂತತಿಗೆ ಸೇರಿದ ನಿರ್ಗ್ರಂಥ ಅಚೇಲಕ ಮುನಿಗಳ ಧರ್ಮದ ಸೂಚಕ ವಾಗಿದೆಯೆಂದು ಸ್ಪಷ್ಟ ವಾಗುವುದು. ಈ ವಿಷಯದ ಬಗ್ಗೆ ವಿಚಾರ ವಿಚಕ್ಷಣ ಶ್ರೀ ಕಾಮತಾ ಪ್ರಸಾದ್ ಅವರ ‘ಜಿನಕಲ್ಪ ಔರ್ ಸ್ಥವಿರಕಲ್ಪ ಪರ್ ಶ್ವೇತಾಂಬರ ಸಾಧು ಶ್ರೀ ಕಲ್ಯಾಣ ವಿಜಯ ಜೀ’ ಲೇಖನವನ್ನು ಜೈನ ಸಿದ್ಧಾಂತ ಭಾಸ್ಕರ ಪು. ೭೨–೮೮ ಮತ್ತು (ಭಾಗ ೧೦, ಕಿರಣ ೨) ಇದಕ್ಕೆ ಸೇರಿದ ‘ಜೈನ ಆಂಟಿಕ್ವೆರಿ’ ಸಂಪಾದಕೀಯ ನೋಡಬೇಕು.

ಪ್ರಸಂಗ ವಶವಾಗಿ ಒಂದು ವಿಶೇಷ ಸಂಗತಿಯನ್ನು ಹೇಳಿದಲ್ಲಿ ಅದು ವಿಷಯಾಂತರವಾಗಲಾರದು : ಬೌದ್ಧರು ಅನ್ಯಧರ್ಮೀಯರನ್ನು ತಮ್ಮ ಧರ್ಮಕ್ಕೆ ಪರಿವರ್ತಿತರನ್ನಾಗಿ ಮಾಡಿಕೊಳ್ಳಲು ನಿರ್ಗ್ರಂಥ ಯತಿಗಳಂತೆ ನಗ್ನರಾಗಿ ಸಂಚರಿಸಿದರೆಂಬುದು ಈ ಹಿಂದಿನ ಹೇಳಿಕೆಯಿಂದ ಸ್ಪಷ್ಟವಾಗಿದೆ. ಇದಲ್ಲದೆ ಭ.

ಬುದ್ದನ ಪ್ರಭಾವಶಾಲೀ  ವ್ಯಕ್ತಿತ್ವವು ಬೌದ್ದ ಧರ್ಮಕ್ಕೆ ಅನ್ಯಧರ್ಮೀಯರ ಮತಾಂತರಕ್ಕೆ ಕಾರಣವಾಗಿದೆ ಯೆಂಬುದೂ ಸೂಚಿತವಾಗಿದೆ.ಈ ಸನ್ನಿವೇಶದಲ್ಲಿ ಭ. ಪಾರ್ಶ್ವನಾಥನ ಧರ್ಮ ಪಂಥಾನುಯಾಯಿಗಳಾಗಿದ್ದ ನಿರ್ಗ್ರಂಥ ಧರ್ಮೀಯ ಶ್ರಾವಕ ವರ್ಗ ಮತ್ತು ಮುನಿ ವರ್ಗದ ಬಹುಸಂಖ್ಯಾತರು ಸ್ವಧರ್ಮದಿಂದ ವಿಚಲಿತರಾಗಿ ಬೌದ್ದಧರ್ಮವನ್ನು ಅಂಗೀಕರಿಸಿದ್ದಲ್ಲಿ ಅದು ನಂಬಲಾರದಂತಹುದೇನಲ್ಲ ಇದು ನಿರ್ಗ್ರಂಥ ಧರ್ಮ ಕ್ಕಾಗಿರುವ ತೀವ್ರ ಅಪಾಯಕಾರಿಯಾದ ಆಪತ್ತಿಯಾಗಿದೆ ಇಂತಹ  ಆಪತ್ತಿಯಕಾಲ ದಲ್ಲಿ ಭ. ಮಹಾವೀರನು ಉದಯಿಸಿ ನಿರ್ಗ್ರಂಥ ಧರ್ಮವನ್ನು ಪುನರುತ್ಥಾನಗೊಳಿಸಿ ಅದಕ್ಕೆ ಪುನಃ ಸ್ವಾಸ್ಥ್ಯವನ್ನು ತಂದುಕೊಟ್ಟು ಅದನ್ನು ಪುನಃ ಅತ್ಯಂತ ಪ್ರಭಾವಶಾಲಿ ಯಾದುದನ್ನಾಗಿ ಮಾಡಿದನು. ಆದ್ದರಿಂದ ವ್ಯವಹಾರಿಕವಾಗಿ ಹೇಳುವುದಾದರೆ ಅವನನ್ನು ನಿರ್ಗ್ರಂಥ ಧರ್ಮೀಯರು ತಮ್ಮ ಪರಮಾರಾಧ್ಯನಾದ ತೀರ್ಥಂಕರನನ್ನಾಗಿ ಕಂಡು ಪೂಜಿಸಿದ್ದಾರೆ, ಎಂಬ ಐತಿಹಾಸಿಕ ತಥ್ಯವನ್ನು ಇಲ್ಲಿ ಕಾಣಬಹುದು.

ಅಜಿತಾದಿ ಪಾರ್ಶ್ವನಾಥ ಪರ್ಯಾಂತರಾದ ಇಪ್ಪತ್ತೆರಡು ತೀರ್ಥಂಕರರೂ, ಆದಿ ಮತ್ತು ಅಂತಿಮ ತೀರ್ಥಂಕರರಾದ ವೃಷಭ ಮತ್ತು ಮಹಾವೀರರಂತೆ ಮುನಿಗಳಿಗೆ ಅಚೇಲಕ ಧರ್ಮವನ್ನೇ ಉಪದೇಶಿಸಿದ್ದರೆಂಬುದುದನ್ನು ಮತ್ತೂ ಒಂದು ಆಧಾರದಿಂದ ಸಾಕ್ಷೀಕರಿಸಬಹುದು. ಬಹು ಪ್ರಾಚೀನ ಕಾಲದಿಂದಲೂ ಜೈನಧರ್ಮೀಯರು ತೀರ್ಥಂಕರ ಜಿನಮೂರ್ತಿಗಳನ್ನು ಪೂಜಿಸುತ್ತಾ ಬಂದಿದ್ದಾರೆ. ಸುಮಾರು ಹದಿನೈದನೇ ಶತಮಾನಕ್ಕಿಂತ ಪೂರ್ವಕಾಲೀನವಾದ ಮೂರ್ತಿಗಳೆಲ್ಲವೂ ನಗ್ನ ಮೂರ್ತಿಗಳೇ ಆಗಿವೆ. ಈ ಮೂರ್ತಿಗಳಲ್ಲಿ ಗಣನಾರ್ಹವಾಗಿರುವ ಅನೇಕ ಮೂರ್ತಿಗಳು ಭ.ಪಾರ್ಶ್ವನಾಥನ ಮೂರ್ತಿಗಳಾಗಿವೆಯೆಂದು ಆ ಮೂರ್ತಿಗಳ ನೆತ್ತಿಯ ಮೇಲ್ಭಾಗದಲ್ಲಿ ಹರಡಿಕೊಂಡಿರುವ ಸರ್ಪದ ಹೆಡೆಗಳಿಂದ ಗುರುತಿಸಬಹುದು.[ಳ೬]ಇದರಿಂದಲೂ ಭ. ಪಾರ್ಶ್ವನಾಥನು ಮುನಿಗಳಿಗೆ 'ಅಚೇಲಕ' ಮುನಿಧರ್ಮವನ್ನೇ ಆದೇಶಿಸಿದ್ದನೆಂದು ಸಾಕ್ಷೀಕೃತವಾಗುವುದು.

ಈ ರೀತಿಯಾಗಿ ಈ ಮೇಲೆ ಹೇಳಲಾಗಿರುವ ಎಲ್ಲ ಆಧಾರಗಳಿಂದ ಭ. ಮಹಾವೀರನಿಂದ ಹಿಂದಿನ ಕಾಲದ ಭ. ಪಾರ್ಶ್ವನಾಥ ತಿರ್ಥಂಕರನು ಅಚೇಲಕಧರ್ಮದ ಉಪದೇಶಕನಾರುವನೆಂದು ನಿಶ್ಚಿತವಾಗುವುದಾದ್ದರಿಂದ ಭ.ಮಹಾವೀರನ ಕಾಲದ ಮುನಿಸಂಘದಲ್ಲಿ ಅಚೇಲಕ ಮತ್ತು ಸಚೇಲಕ

ಪಂಥಗಳೆರಡರ ಮುನಿಗಳೂ ಸಂಮಿಳಿತರಾಗಿದ್ದರೆಂಬ ಅಭಿಪ್ರಾಯವು ಸರ್ವಥಾ ನಿರಾಕೃತವಾಗುವುದು. ಶ್ವೇತಾಂಬರ ಪಂಥದ ಹೇಳಿಕೆಯಂತೆಯೆ ಭ. ಮಾಹಾವೀರನಿಂದ ಮುನಿಗಳಿಗೆ ಜಿನಕಲ್ಪ–ಅಚೇಲಕ ಧರ್ಮವು ಉಪದಿಷ್ಟವಾಗಿದೆ. ನಾವು ಈಗಲೂ ಭ. ಮಹಾವೀರನಧರ್ಮತೀರ್ಥದವರೇ ಆಗಿದ್ದೇವೆ. ಹೀಗಿರುವಲ್ಲಿ ಜಂಬೂಸ್ವಾಮಿಯವರ ನಿರ್ವಾಣದೊಡನೆ 'ಜಿನಕಲ್ಪ' ಅಚೇಲಕ ಧರ್ಮವು ಅಂತ್ಯಗೊಡು ಸಚೇಲಕ ಧರ್ಮಪಂಥ ಮಾತ್ರ ಮುಂದುವರಿಯಿತೆಂಬ ಶ್ವೇತಾಂಬರ ಪಂಥದ ಮಂತವ್ಯದ ವಾಸ್ತವಿಕತೆಯು ನಿರಾಧಾರವಾದದ್ದೆನಿಸಿ ನಿರಾಕೃತವಾಗುವುದು.

ಪ್ರಸ್ತುತ ವಿಷಯದ ಸ್ಪಷ್ಟತೆಗಾಗಿ ದಿಗಂಬರ ಧರ್ಮಪಂಥದನುಗುಣವಾದ 'ಜಿನಕಲ್ಪ' ಮತ್ತು 'ಸ್ಥವಿರಕಲ್ಪ'ಗಳ ಅರ್ಥವನ್ನು ವಿಶದಪಡಿಸಬೇಕಾದ ಅಗತ್ಯವಿದೆ. ದಿಗಂಬರ ಪಂಥದ ಧರ್ಮದನುಗುಣವಾಗಿ ಆಚಾರಧರ್ಮವು 'ಮುನಿಧರ್ಮ'ಮತ್ತು 'ಶ್ರಾವಕಧರ್ಮ' (ದುವೇಧರ್ಮ್ಮೋ) ಎಂದು ಎರಡು ಪ್ರಕಾರವಾಗಿದೆ. ಪುನಃ ಮುನಿಧರ್ಮವು 'ಜಿನಕಲ್ಪ' ಮತ್ತು 'ಸ್ಥವಿರಕಲ್ಪ' ಎಂಬ ಎರಡು ಭೇದಗಳುಳ್ಳದ್ದಾಗಿದೆ.

"ಅದಿನ್ನೂತಪಸ್ಸಾಧನೆಯಲ್ಲಿ ನಿರತರಾಗಿರುವ, ಉತ್ತಮ ಸಂಹನನವುಳ್ಳ ನಾಲ್ಕು ಜ್ಞಾನಸಂಪನ್ನರಾದ ಜಿನರು ಪ್ರತಿಕ್ರಮಣವಿಲ್ಲದಿರುವ (ಅಥವಾ ನಿಯತಪ್ರತಿಕ್ರಮಣ ವಿಲ್ಲದಿರುವ) 'ಸಾಮಾಯಿಕ' ವೆಂಬ ಏಕಯಮ (ಒಂದು ವ್ರತದ) ಧರ್ಮದಲ್ಲಿ ನಡೆಯುವರು. ಆ ಜಿನರು, ಇತರ ಮುನಿಗಳಿಗೆ, ಕಾಲವನ್ನನುಸರಿಸಿ, ಮತ್ತು ಅವರ ಬಲ, ಆಯುಷ್ಯ, ಜ್ಞಾನವನ್ನು ದೃಷ್ಟಿಯಲ್ಲಿರಿಸಿಕೊಡು, ವ್ರತಭಂಗವಾದರೆ ಪ್ರಾಯು ಶ್ಚಿತ್ತದಿಂದ ದೋಷವನ್ನು ಪರಿಹರಿಸಿ ಪುನಃ ವ್ರತಧಾರಣೆ ಮಾಡುವುದೆಂಬ ಛೇದೋಪ ಸ್ಥಾಪನಾ ಎಂಬ ಹದಿಮೂರು ಭೇಧಗಳನ್ನೊಳಗೊಂಡ ಚಾರಿತ್ರವನ್ನು ಉಪದೇಶಿಸಿ ದರು.[೪೭]"ಜನಬಿಡವಾದ ಎಡೆಯಲ್ಲಿ ವಾಸಿಸುವ, ಇಂದ್ರಿಯ ವಿಷಯಗಳನ್ನು ಸದಾ ಕಾಣುತ್ತಿರುವ ಇವನಿಗೆ (ಮುನಿಗೆ) ಇಂದ್ರಿಯಾರ್ಥಗಳ ಬಾಹುಲ್ಯಾದಿ ನಿಮಿತ್ತಿ ದಿಂದ ಮನಸ್ಸು ವ್ಯಗ್ರಗೊಳ್ಳಬಹುದು. ಆದ ಕಾರಣ ಜಿನಕಲ್ಪ ಮತ್ತು ಸ್ಥವಿರಕಲ್ಪ ಯೋಗಿಗಳಿಗೆ, ವಿವಿಕ್ತಶಾಯಿತ್ವ (ನಿರ್ಜನ ಪ್ರದೇಶದಲ್ಲಿ ಮಲಗುವುದು) ಮತ್ತು ವನದಲ್ಲಿ ವಾಸಿಸುವುದು ಎಂಬುದು ಸಾಧಾರಣವಾದ ಮಾರ್ಗವಾಗಿದೆ.[೪೮]" ಮುನಿಗಳಿಗೆ ಮಧ್ಯ ಕಾಲದ ಇಪ್ಪತ್ತೆರಡು ತೀರ್ಥಂಕರರು ಸಾಮಾಯಿಕ

ಸಂಯಮವನ್ನು ಉಪದೇಶಿ ಸಿದರು. ಆದರೆ (ಪ್ರಥಮ ಮತ್ತು ಅಂತಿಮ ತೀರ್ಥಂಕರ ರಾದ) ವೃಷಭ ಮತ್ತು ಮಹಾವೀರರು ಛೇದೋಪಸ್ಥಾಪನಾ ಸಂಯಮವನ್ನು ಉಪದೇಶಿಸಿದರು. ಪ್ರಥಮ ಮತ್ತು ಅಂತಿಮ ತೀರ್ಥಂಕರರ ಧರ್ಮವು ಪ್ರತಿಕ್ರಮಣ ಸಹಿತವಾದುದು, ಆದರೆ ಮಧ್ಯಕಾಲದ ತೀರ್ಥಂಕರರ ಧರ್ಮವು (ವ್ರತಚರ್ಯೆಗೆ) ಅಪರಾಧವಾದಷ್ಟಕ್ಕೆ ಮಾತ್ರ ಪ್ರತಿಕ್ರಮಣದ ಆಚರಣೆ ಹೊಂದಿದ್ದಿತು.[೪೯] ಇಲ್ಲಿ ಸಾಮಾಯಿಕ ಸಂಯಮ ಮತ್ತು ಛೇದೋಪಸ್ಥಾಪನಾ ಸಂಯಮಗಳ ಮಧ್ಯೆ ಇರುವ ವ್ಯತ್ಯಾಸವೇನೆಂಬುದನ್ನು ತಿಳಿಯಬೇಕಾದ ಅಗತ್ಯವಿದೆ. 'ಸರ್ವಪಾಪ ನಿವೃತ್ತಿರೂಪ ಸಾಮಾಯಿಕದ ಅಪೇಕ್ಷೆಯಿಂದ ವ್ರತವು ಒಂದು (ಏಕಯಮ) ಎನಿಸುವುದು. ಅದೇ ವ್ರತವು ಛೇದೋಪ ಸ್ಥಾಪನಾಪೇಕ್ಷೆಯಿಂದ (ಅಹಿಂಸಾ, ಅಮೃಷಾವಾದ(=ಸತ್ಯ), ಅಸ್ತೇಯ, ಬ್ರಹ್ಮಚರ್ಯ ಮತ್ತು ಅಪರಿಗ್ರಹ ಎಂದು) ಐದು ಪ್ರಕಾರವಾಗುವುದು. (ಸರ್ವಾರ್ಥಸಿದ್ಧಿ ೭–೧– ವ್ಯಾಖ್ಯಾನ)

ಮೇಲಿನ, ದಿಂಗಬರ ಪಂಥದ ಮಾನ್ಯತೆಯಂತೆ, ಜಿನಕಲ್ಪಿ ಮುನಿಗಳ ಮತ್ತು ಸ್ಥವಿರ ಕಲ್ಪಿ ಮುನಿಗಳ ಆಚಾರಧರ್ಮದಲ್ಲಿ ಪ್ರತಿಕ್ರಮಣದ ಆಚಾರ ವಿಧಾನದಲ್ಲಿ ವ್ಯತ್ಯಾಸ ವಿದ್ದಿತಲ್ಲದೆ ದಿಗಂಬರತ್ವದ ಬಗ್ಗೆ ಯಾವ ವ್ಯತ್ಯಾಸವೂ ಇಲ್ಲವೆಂದು ಸ್ಪಷ್ಟವಾಗುವುದು.

ಇನ್ನು ಶ್ವೇತಾಂಬರ ಪಂಥದಲ್ಲಿ ಹೇಳಲಾಗಿರುವ ಜಿನಕಲ್ಪಿ ಮಾರ್ಗದ ಐತಿಹಾಸಿಕ ಸಂಗತಿಯನ್ನು ಪರಿಶೀಲಿಸಬೇಕಾಗಿದೆ. ಜಂಬೂಸ್ವಾಮಿಯವರ ಕಾಲಾನಂತರದಲ್ಲಿ ಜಿನಕಲ್ಪ ಕೊನೆಗೊಂಡಿತೆಂಬ ಐತಿಹ್ಯವನ್ನು ಹಿಂದೆ ಹೇಳಿದೆ.[೫೦] ಆದರೆ, ಸ್ಥೂಲಭದ್ರ ಸ್ವಾಮಿಯವರಿಗೆ ಆರ್ಯಮಹಾಗಿರಿ ಮತ್ತು ಆರ್ಯಸುಹಸ್ತಿಯವರು ಇಬ್ಬರು ಪ್ರಧಾನ ಶಿಷ್ಯರು ಇದ್ದು ಇವರಲ್ಲಿ ಆರ್ಯಮಹಾಗಿರಿಯವರು ಜಿನಕಲ್ಪಿ ಆಚಾರ ಪಾಲಕರೆಂದು ಹೇಳಿದೆಯಲ್ಲದೆ, ಮುನಿಸಂಘದಲ್ಲಿ ಶಿಥಿಲಾಚಾರ ಏರ್ಪಟ್ಟ ಬಗ್ಗೆ ಇವರು ಅಸಮಾಧಾನಪಟ್ಟು ಆರ್ಯ ಸುಹಸ್ತಿಯವರನ್ನು ತರ್ಜನೆ ಮಾಡಿದರೆಂದೂ ಹೇಳಿದೆ. ಆರ್ಯ ಮಹಾಗಿರಿಯವರ ಶಿಷ್ಯ ಪೀಳಿಗೆಯನ್ನು ನಂದಿ ಸೂತ್ರದಲ್ಲಿ ಹೇಳಿದೆ.[೫೧] ಇದಲ್ಲದೆ ಆರ್ಯ ಸುಹಸ್ತಿಯವರ ಶಿಷ್ಯ ಪೀಳಿಗೆಯನ್ನು, ಖರತರಗಚ್ಛ ಮತ್ತು ತಪಾಗಚ್ಛ ಪಟ್ಟಾವಲಿಗಳಲ್ಲಿ ಹೇಳಿದೆ.[೫೨] ಈ ರೀತಿಯಿಂದ ಸ್ಥೂಲಭದ್ರಸ್ವಾಮಿ ಯವರ ಬಳಿಕ ಪ್ರಧಾನವಾಗಿ ಅರ್ಯಮಹಾಗಿರಿಯವರ ಮತ್ತು ಆರ್ಯಾಸುಹಸ್ತಿ ಯವರ ಅನುಕ್ರಮಗಳ ಎರಡು ಶಿಷ್ಯಪೀಳಿಗೆಗಳು

ಬೆಳೆದು ಬಂದಿವೆ. ಈ ಎರಡು ಪೀಳಿಗೆಗಳಲ್ಲಿ ಆರ್ಯಮಹಾಗಿರಿಯವರ ಶಿಷ್ಯಾನುಕ್ರಮದ ಪೀಳಿಗೆಯು ಜಿನಕಲ್ಪ ಮಾರ್ಗಾನುಸಾರಿಯಾದುದೂ, ಆರ್ಯ ಸುಹಸ್ತಿಯವರ ಶಿಷ್ಯಾನುಕ್ರಮವು ಸ್ಥವಿರಕಲ್ಪ ಮಾರ್ಗಾನುಸಾರಿಯಾದುದೂ ಆಗಿದ್ದುವೆಂಬುದರಲ್ಲಿ ಸಂಶಯಪಡುವಂತಿಲ್ಲ. ಆಚಾರಾಂಗದಲ್ಲಿ ಜಿನಕಲ್ಪ-ಅಚೇಲಕ ಮತ್ತು ಸ್ಥವಿರಕಲ್ಪ-ಸಚೇಲಕ ಮುನಿಗಳ ಆಚರಣೆಯನ್ನೂ ಕುರಿತು ನಿರೂಪಣೆಯಿದೆ. ಆಚೇಲಕ ಅಥವಾ ಜಿನಕಲ್ಪಿ ಮುನಿಯ ಬಗ್ಗೆ ಹೆರ್ಮನ್ ಜಾಕೋಬಿಯವರು ಕೊಟ್ಟಿರುವ ವಿವರಣೆಯನ್ನು ಪ್ರಸ್ತುತ ಪ್ರಸಂಗದಲ್ಲಿ ಗಮನಿಸಬೇಕಾಗಿದೆ.[೫೩]'ಅಚೇಲಕ ಎಂದರೆ ಅನ್ವರ್ಥರೀತಿಯಿಂದ, ಬಟ್ಟೆ ಧರಿಸದಿರು'ವನು ಎಂದರ್ಥ. ಆದರೆ ಈ ಅರ್ಥವು ಜಿನಕಲ್ಪಕನಿಗೆ ಸಂಬಂಧಿಸಿದಂತೆ ಹೇಳುವಾಗ ಮಾತ್ರ ಸಮನ್ವಿತವಾಗುವುದು. ಜಿನಕಲ್ಪಿಕನು ಬಟ್ಟೆ ಧರಿಸದಿರುವಮುನಿ, ತನ್ನ ಕೈಯ್ಯ ಬೊಗಸೆಯನ್ನು (ಪಾಣಿಪಾತ್ರವನ್ನು)ಭಿಕ್ಷಾಪಾತ್ರೆಯಾಗಿ ಉಪಯೋಗಿಸುವನು. ರಜೋ ಹರಣ ಮತ್ತು ಮಾತನಾಡುವಾಗ ಬಾಯಿಗೆ ಅಡ್ಡವಾಗಿ ಹಿಡಿಯಲು ಉಪಯೋಗಿಸುವ ಮುಖವಸ್ತ್ರಿಕೆ, ಇವೆರಡು ಮಾತ್ರ ಅವನ ಉಪಯೋಗ ಸಾಮಗ್ರಿಗಳು. (ನೋಡಿ, ವಿಚಾರ ಚಕ್ಷು ಶ್ರೀ ಕಾಮತಾ ಪ್ರಸಾದ್ ಜೈನ್ ಅವರ 'ಜಿನಕಲ್ಪ ಔರ್ ಸ್ಥವಿರಕಲ್ಪ ಪರ್ ಶ್ವೇ. ಸಾಧು ಶ್ರೀ ಕಲ್ಯಾಣ ವಿಜಯ ಜೀ' ಜೈನ ಸಿದ್ದಾಂತ ಭಾಸ್ಕರ ಭಾಗ ೧೦, ಕಿರಣ೨, ಪುಟ ೭೮)-ಈ ವಿವರಣೆಯಿಂದ ಇಲ್ಲಿ ಪ್ರಸ್ತುತವಾಗಿರುವ ಜಿನಕಲ್ಪ ಅಥವಾ ಅಚೇಲಕ ಮುನಿಧರ್ಮವು ದಿಗಂಬರ ಮುನಿಧರ್ಮದಿಂದ ಭಿನ್ನವಾದು ದೆಂಬುದು ಸ್ಪಷ್ಟವಿದೆ. ದಿಂಗಬರ ಮುನಿಗಳಲ್ಲಿ ಯಾವಾಗಲಾಗಲಿ ಮುಖವಸ್ತ್ರಿಕೆಯ ಉಪಯೋಗವಿಲ್ಲ. ಭಿಕ್ಷಾಚರ್ಯೆವಿಧಿಯಲ್ಲಿ ಪಾಣಿಪಾತ್ರ ಸಮಾನತರವಾಗಿದ್ದರೂ ಆಹಾರ ಪಡೆಯುವ ವಿಧಾನದಲ್ಲಿ ವ್ಯತ್ಯಾಸವಿದೆ. ಆದ್ದರಿಂದ ಶ್ವೇತಾಂಬರ ಪಂಥ ಮಾನ್ಯವದ ಜಿನಕಲ್ಪಿ-ಅಚೇಲಕ ಮುನಿ ಆಚಾರಧರ್ಮ ಮತ್ತು ದಿಗಂಬರಮುನಿ ಆಚಾರಧರ್ಮಗಳು ಭಿನ್ನತರವಾದುವಾಗಿವೆ. ವೀ. ನಿ. ಸಂ. ೮೩೦ರಷ್ಟರಲ್ಲಿ ಮಥುರೆಯಲ್ಲಿ ಸ್ಕಂದಿಲಾಚಾರ್ಯರ ನೇತೃತ್ವದಲ್ಲಿ ಸಾಧುಸಮ್ಮೇಳನದಲ್ಲಿ ಒಂದು ಜಿನಕಲ್ಪಿ ಸಾಧುಗಳ ಆಚಾರ ಪ್ರಾಧಾನ್ಯತೆಯುಳ್ಳದಾಗಿಯೂ ಮತ್ತೊಂದು ಸ್ಥವಿರಕಲ್ಪಿ ಸಾಧು ಗಳ ಪ್ರಾಧಾನ್ಯತೆಯುಳ್ಳದಾಗಿಯೂ ಇದ್ದಿತೆಂದು ಹೇಳಬಹುದಾಗಿದೆ. ಈ ಎರಡೂ ಆಗಮ ಸಂಕಲನಗಳ ಮಧ್ಯೆ ಕಂಡು ಬಂದ ಭಿನ್ನತೆಯನ್ನು ವೀ. ನಿ. ಸಂ. ೯೮೦ ಅಥರ್ವಾ೯೩ ವರ್ಷಗಳ ಸಮಯದಲ್ಲಿ

ದೇವರ್ಧಿಗಣಿಯವರು ಸಾಧ್ಯವಾದಷ್ಟು ನಿವಾರಣೆ ಮಾಡಿ[ಜಿಳ] ಆಗಮವನ್ನು ಪುನಃ ಸಂಕಲನೆ ಮಾಡಿ ಪುಸ್ತಕಾರೂಢ ಮಾಡಿದ  ಐತಿಹಾಸಿಕತೆ ಯನ್ನು ಹಿಂದೆ ವಿವರಿಸಿದೆ. ದೇವರ್ಧಿಗಮಿಯವರ ನೇತೃತ್ವದಲ್ಲಿ ನಡೆದ ಆಗಮ ಸಂಕಲನದ ಸಮಯದಲ್ಲಿಯೂ ಸ್ಕಂದಿಲರ ಶಿಷ್ಯಾನುಕ್ರಮದ ಸ್ಕಾಂದಿಲೀಯರು ಮತ್ತು-ನಾಗಾರ್ಜುನರ ಶಿಷ್ಯಾನುಕ್ರಮದ ನಾಗಾರ್ಜುನೀಯರು ಇದ್ದರೆಂದೂ ಶ್ರೀ ಕಪಾಡಿಯಾ ಅವರ ಅಭಿಪ್ರಾಯವಿದೆ.[ಜಿಜಿ] ಈ ಎರಡು ಜಿನಕಲ್ಪಿ ಮತ್ತು ಸ್ಥವಿರಕಲ್ಪಿ ಸಾದುಪಂಗಡಗಳು ಮೂಲತಃ ಸ್ಥೂಲಭದ್ರ ಸ್ವಾಮಿಯವರ ಏಕೈಕ ಸಂತತಿಯವರಾಗಿ ದ್ದರೂ ಕಾಲಾನುಕ್ರಮದಲ್ಲಿ ಭಿನ್ನಮತಗಳೇರ್ಪಟ್ಟು ಪರಸ್ಪರ ಮೇಲುಗಾರಿಕೆಯ ಬಗ್ಗೆ ವಾದ ವಿವಾದಗಳು ಉಂಟಾಗಿವೆಯೆಂದು ಹೇಳಬಹುದಾಗಿದೆ. ಈ ಬಗ್ಗೆ ಪೂಜ್ಯ ಮುನಿಪಥಮಲ್ ಅವರ ಅಸಂಕ್ಲಿಷ್ಟ ಸಮತಾ ಭಾವದ ಮುಂದಿನ ಹೇಳಿಕೆಯು ಪ್ರಸ್ತುತ ಪ್ರಸಂಗದಲ್ಲಿ ಗಮನಾರ್ಹವಾಗಿದೆ.

"ಒಬ್ಬ ಮುನಿ ಎರಡು ವಸ್ತ್ರಗಳನ್ನು ಮತ್ತೊಬ್ಬ ಮುನಿ ಮೂರು ವಸ್ತ್ರಗಳನ್ನು ಮತ್ತೂ ಒಬ್ಬ ಮುನಿ ಒಂದೇ ವಸ್ತ್ರವನ್ನು ಹೊದಿರಬಹುದು. ಹೀಗಲ್ಲದೆ ಬೇರೊಬ್ಬ ಮುನಿಯು  ಅಚೇಲ(ವಸ್ತ್ರ ಹೊದಿಲ್ಲದವ)ನಾಗಿರಬಹುದು. ಇವರು ಪರಸ್ಪರವಾಗಿ ಅವಜ್ಞೆ (ಒಬ್ಬರು ಮತ್ತೊಬ್ಬರನ್ನು ಕೀಳಾಗಿ ಕಾಣುವ ಭಾವ) ಹೊಂದಬಾರದು;  ಏಕೆಂದರೆ ಆಚಾರವಿಧಿ ಎಲ್ಲವೂ ಜಿನಾಜ್ಞಾಸಮ್ಮತವಾದುದು. ಈ ಆಚಾರ ಭೇಧವು ಶರಿರದ ಶಕ್ತಿಯ ಹಾಗೂ ಧೃತಿಯ ಉತ್ಕರ್ಷ ಮತ್ತು ಅಪಕರ್ಷಗಳ ಆಧಾರ ಹೊದಿದೆ. ಆದ ಕಾರಣ ಸಚೇಲ ಮುನಿಯನ್ನು ತಮಗಿಂತ ಕೀಳಾದವ ನೆಂದು ಕಾಣಬಾರದು. ಯಾವ ಮುನಿಗಳು ಮಹಾವ್ರತದ ಪಾಲನೆ ಮಾಡುವರೋ ಮತ್ತು ಉದ್ಯತ ವಿಹಾರಿಗಳಾಗಿರುವರೀ ಅವರೆಲ್ಲರೂ ಜಿನಾಜ್ಞಾಧಾರಕರು.[ಜಿಟ]

ಇಲ್ಲಿ ಹೇಳಿರುವ ಸಚೇಲ ಮುನಿಗಳು ಶ್ವೇತಾಂಬರ ಪಂಥದ ಮಾನ್ಯತೆ ಹೊಂದಿದ ಸ್ಥವಿರಕಲ್ಪಿಗಳಾಗಿದ್ದು ವರ್ತಮಾನ ಕಾಲದ ಶ್ವೇತಾಂಬರ ಪಂಥದ ಪೂರ್ವಜರಾಗಿರು ವರೆಂಬುದರಲ್ಲಿ ಸಂದೇಹವಿಲ್ಲ. ಆದರೆ ಅಚೇಲಕ ಮುನಿಗಳು ಯಾರು ಎಂಬ ಪ್ರಶ್ನೆ ಏರ್ಪಡುವುದು. ಅಚೇಲ ಮುನಿ ಪಂಥವು ಶ್ವೇತಾಂಬರ ಮಾನ್ಯತೆಯಂತೆ ಜಿನಕಲ್ಪಿ ಪಂಥವಾಗಿದೆ. ಆದರೆ ಇದೇ ಶ್ವೇತಾಂಬರ ಪಂಥದ ಮಾನ್ಯತೆಯಂತೆ ಜಿನಕಲ್ಪಿ ಪಂಥವು ಮಹಾವೀರ ತೀರ್ಥಂಕರನ ಅನಂತರದಲ್ಲಿ ಮೂರನೆಯ ಮತ್ತು

ಅಂತಿಮ ಕೇವಲಿಯಾದ ಜಂಬೂಸ್ವಾಮಿಯವರ ಜೊತೆಯಲ್ಲಿಯೇ ಕೊನೆಗೊಂಡಿದೆ. ಇಷ್ಟಾ ದರೂ ಇದನ್ನು ಸ್ಥೂಲಭದ್ರಸ್ವಾಮಿಯವರ ಪ್ರಧಾನ ಜ್ಯೇಷ್ಠ ಶಿಷ್ಯರಾದ ಮಹಾಗಿರಿ ಯವರು ಪುನಃ ಆಚರಣೆಯಲ್ಲಿ ತಂದರೆಂಬುದೂ ಇದೇ ಶ್ವೇತಾಂಬರ ಮತದ
ಹೇಳಿಕೆಯಾಗಿದೆ. ಇಷ್ಟು ಮಾತ್ರವಲ್ಲ, ಸ್ಥೂಲಭದ್ರಸ್ವಾಮಿಯವರ ಮತ್ತೊಬ್ಬ ಪ್ರಧಾನ ಶಿಷ್ಯರಾದ ಸುಹಸ್ತಿಯವರು ಮತ್ತು ಅವರ ಶಿಷ್ಯವರ್ಗದಿಂದ ಮುನಿಗಳಲ್ಲಿ ಶಿಥಿಲ ಆಚಾರವು ರೂಢಿಗತವಾಯಿತೆಂದೂ ಹೇಳಿದೆ. ಇದರಿಂದ ಶ್ವೇತಾಂಬರ ಪಂಥದ ಪೂರ್ವಜರಲ್ಲಿಯೇ ಜಿನಕಲ್ಪಿ ಮತ್ತು ಸ್ಥವಿರಕಲ್ಪಿ ಎಂಬ ಎರಡು ಪಂಥಗಳು ಪ್ರಚಲಿತವಾದುವೆಂದು ಸ್ವಯಂ ಸ್ಪಷ್ಟವಾಗುವುದು. ಈ ಜಿನಕಲ್ಪಿಗಳು ದಿಗಂಬರ ಪಂಥದ ಪೂರ್ವಜರಂತೂ ಅಲ್ಲ. ಏಕೆಂದರೆ ಮಹಾಗಿರಿ ಸೂರಿಯವರ ಶಿಷ್ಯ ಪ್ರಶಿಷ್ಯಾನುಕ್ರಮವು ದಿಗಂಬರ ಪಂಥದ ಪೂರ್ವಾನ್ವಯದ ಗುರುಶಿಷ್ಯಪರಂಪರೆ ಯಿಂದ ಭಿನ್ನವಾದುದಾಗಿದೆ. ಇಷ್ಟಾದರೂ ಮಹಾಗಿರಿ ಸೂರಿಯವರಿಂದ ಪುನಃ ಆಚರಣೆಗೆ ಬಂದು ಪ್ರವರ್ತಿತವಾದ ಜಿನಕಲ್ಪಿಪಂಥ ಮತ್ತು ದಿಗಂಬರ ಪಂಥದ ಪೂರ್ವಕಾಲೀನ ಗುರುಶಿಷ್ಯಾನ್ವಯಗಳ ಮಧ್ಯೆ ಯಾವುದೇ ರೀತಿಯಾದಾದ ಸಂಬಂಧ ವಿದ್ದಿರಬಹುದೆ? ಎಂಬುದು ಪ್ರಶ್ನೆ.

ದಿಗಂಬರ ಪಂಥದಲ್ಲಿ ಉಳಿದು ಬಂದಿರುವ ಐತಿಹ್ಯದನುಗುಣವಾಗಿ ದ್ವಾದಶಾಂಗ ಚತುರ್ದಶ ಪೂರ್ವಿ ಶ್ರುತ ಕೇವಲಿ ಭದ್ರಬಾಹುಸ್ವಾಮಿಯವರ ಜೊತೆಯಲ್ಲಿ ದಕ್ಷಿಣಾ ಪಥವನ್ನು ಸೇರಿ ದೀರ್ಘಕಾಲದವರೆಗೆ ದಕ್ಷಿಣದ ದಮಿಳನಾಡು ಮುಂತಾದ ಪ್ರದೇಶ ಗಳಲ್ಲಿ ವಿಹಾರ ಮಾಡಿದ ಮುನಿಗಣವು ಕಳೆದ ಬಳಿಕ ಉತ್ತರ ಭಾರತದೇಶದ ಮಧ್ಯ ಪ್ರದೇಶಕ್ಕೆ ಮರಳಿ ಹೋಯಿತು. ದುಷ್ಕಾಲ ಸಮಯದಲ್ಲಿ ಉತ್ತರ ಭಾರತ ದಲ್ಲಿಯೇ ಉಳಿದಿದ್ದ ಮುನಿಗಣಗಳು ಶಿಥಿಲಾಚಾರ ಹೊದಿರುವುದನ್ನು ಕಂಡು ಪುನಃ ಪ್ರಾಯಶ್ಚಿತ್ತ ಹೊಂದಿ ಶುದ್ದ ಸಾಧು ಆಚಾರವನ್ನು ಧಾರಣೆಮಾಡುವಂತೆ ಆಮುನಿ ಗಣಗಳಿಗೆ ಹೇಳಲಾಗಿ ಅವರಲ್ಲಿ ಕೆಲವರು ಅದರಂತೆ ಶುದ್ದ ಆಚಾರ ಧಾರಣೆ ಮಾಡಿದರು. ಆದರೆ ಕೆಲವರು ಅದಕ್ಕೊಪ್ಪದೆ ಅರ್ಧಗಪ್ಪಡಿಗ ತೀರ್ಥ ಪ್ರವರ್ತನೆ ಮಾಡಿದರೆಂದುಹಿಂದೆ ಹೇಳಿದೆ. ಇಲ್ಲಿ ಶ್ವೇತಾಂಬರ ಮತ್ತು ಮತ್ತುದಿಗಂಬರ ಐತಿಹ್ಯಗಳಲ್ಲಿ ಪರಸ್ಪರ ಪೂರಕವಾದ ಸಮಾನತೆಯಿರುವುದನ್ನು ಕಾಣಬಹುದು: ದಕ್ಷಿಣದಿಂದ ಮರಳಿ ಬಂದ ಮುನಿಗಣದ ಆದೇಶದಂತೆ ಮಹಾಗಿರಿ ಸೂರಿಯವರು

ಮತ್ತು ಅವರ ಅನುಯಾಯಿಗಳಾದ ಶಿಷ್ಯರು ಪುನಃಶುದ್ಧಾಚರಣೆಯನ್ನು ಕೈಗೊಂಡು ನಗ್ನ (ಜಿನಕಲ್ಪಿ) ಧರ್ಮಪಂಥವನ್ನು ಅನುಸರಿಸಿದ್ದಾರೆ.[೫೭] ಆದರೆ ಸುಹಸ್ತಿಯವರು ಮತ್ತು ಅವರ ಅನುಯಾಯಿ ಶಿಷ್ಯರು ಅರ್ಧಗಪ್ಪಡ ತೀರ್ಥದ (ಎಂದರೆ ಶ್ವೇತಾಂಬರ ಪಂಥ ಮಾನ್ಯತೆಯ ಸ್ಥವಿರಕಲ್ಪದ) ಪ್ರವರ್ತನೆ ಮಾಡಿದ್ದಾರೆ. ಸುಹಸ್ತಿಯವರ ಈ ವರ್ತನೆ ಆರ್ಯಮಹಾಗಿರಿಸೂರಿಯವರ ದೃಷ್ಟಿಯಲ್ಲಿ ಸಮೀಚೀನವಾದುದಾಗಿರಲಿಲ್ಲವೆಂದು ಹಿಂದೆ ಉಲ್ಲೇಖಿಸಿರುವ "ಮುಂದೆ ನಮ್ಮೀರ್ವರ ಸಂಭಂದವಿರುವುದಿಲ್ಲ . . . ಹಾಗೆ ಹೇಳುವುದಾದರೆ ನಿನ್ನ ದೋಷವಾದರು ಏನು ? ಹಿಂದೆ ಭಗವಂತ ಮಹಾವೀರ ಸ್ವಾಮಿಯು 'ನನ್ನ ಶಿಷ್ಯ ಸಂತತಿಯಲ್ಲಿ ಸ್ಥೂಲಭದ್ರ ಮುನಿಯ ಅನಂತರ ಸಾಧುಗಳ ಸಾಮಾಚಾರಿಯು ಹೆಚ್ಚುಹೆಚ್ಚಾಗಿ ಪತಿತವಾಗುವುದು' ಎಂದು ಹೇಳಿರುವನಷ್ಟೆ. ಸ್ಥೂಲ ಭದ್ರ ಮುನಿಯ ಬಳಿಕ ನಾವೇ ತೀರ್ಥಪ್ರವರ್ತಕರಾಗಿರುವೆವು. ಆಗ ಭಗವಾನ್ ಮಹಾವೀರ ಸ್ವಾಮಿಯು ಹೇಳಿದ ಮಾತು ಈಗ ನಿನ್ನಿಂದ ಸತ್ಯವಾಗಿಸಲ್ಪಟ್ಟಿದೆ" ಎಂಬ ಹೇಳಿಕೆಯಿಂದ ಸೂಚಿತವಾಗುವುದು. ಈ ರೀತಿಯಾಗಿ ಶ್ವೇತಾಂಬರ ಪಂಥದಲ್ಲಿ ಈಗ ಸ್ಥವಿರಕಲ್ಪ ಎಂಬ ಮಾನ್ಯತೆ ಹೊದಿರುವ ಅರ್ಧಗಪ್ಪಡಿಗ ಪಂಥವು ಉದಯಿಸಿತಾದರೂ ಅದು ನಗ್ನ (ಜಿನಕಲ್ಪಿ) ಧರ್ಮಪಂಥದಿಂದ ಪೂರ್ಣ ರೀತಿಯಿಂದ ಬೇರ್ಪಟ್ಟು ಸ್ವತಂತ್ರವಾದ ಅಸ್ತಿತ್ವ ಹೊಂದಿತೆಂದು ಹೇಳಲಾಗುವುದಿಲ್ಲ. ಈ ಪಂಗಡಗಳು ಉದಯಿಸಿದ ಕಾಲದಲ್ಲಿ ಜೈನಧರ್ಮ ಪಂಥದ ಮುನಿಗಣವು ಶ್ವೇತಾಂಬರ ಅಥವಾ ದಿಗಂಬರ ಎಂಬ ಹೆಸರುಗಳನ್ನು ಹೊಂದಿರದೆ 'ನಿರ್ಗ್ರಂಥ' ಮುನಿಗಣ ಎಂಬ ಹೆಸರನ್ನು ಹೊಂದಿದ್ದಿತು. ಇದರಂತೆ ನಗ್ನ ಮುನಿಗಣ' ಮತ್ತು ಅರ್ಧಗಪ್ಪಡಿಗ ಮುನಿಗಣಗಳೆರಡೂ 'ನಿರ್ಗ್ರಂಥ ಮುನಿಗಣ ' ಎಂಬ ಹೆಸರಿನಿಂದಲೇ ಮುಂದುವರಿದುವು. ಇಷ್ಟಾದರೂ ಕಾಲಾನುಕ್ರಮದಲ್ಲಿ ನಗ್ನ ಮುನಿಗಣ ಮತ್ತು ಅರ್ಧಗಪ್ಪಡಿಗ ಮುನಿಗಣಗಳ ಮಧ್ಯೆ ಮತಭೇಧ ಹೆಚ್ಚುತ್ತಾ ನಡೆದು ಪರಸ್ಪರ ಮೇಲು ಕೀಳೆಂಬ ಭಾವನೆ ಏರ್ಪಟ್ಟು ಪರಸ್ಪರ ದೂಷಣೆಗಳೂ ಸಂಘಟಿಸಿವೆ. ಈ ಸಂಗತಿಯ ಚಿತ್ರಣ ವನ್ನು ಹಿಂದೆ ಹೇಳಿರುವಂತೆ ಪೂಜ್ಯ ನತ್ಮಲ್ ಮುನಿಯವರು ಆಚಾರಾಂಗ ವೃತ್ತಿ ಪತ್ರದ ಆಧಾರದಿಂದ[೫೮] ಮಾಡಲಾಗಿರುವುದನ್ನು ಹಿಂದೆ ಉಲ್ಲೇಖಿಸಿದೆ.

ನಿರ್ಗ್ರಂಥ ಮುನಿಸಂಘವು ಒಡೆದು ಪ್ರಧಾನವಾಗಿ ದಿಗಂಬರ ಮತ್ತು ಶ್ವೇತಾಂಬರ ಎಂಬ ಎರಡು ಪಂಥಗಳಾಗಿ ಏರ್ಪಟ್ಟ ಬಗ್ಗೆ ಈ ಎರಡೂ ಪಂಥಗಳಲ್ಲಿ ತಮ್ಮ ತಮ್ಮದೇ ಆದ ಐತಿಹ್ಯಗಳು ಉಳಿದುಬಂದಿದೆ: ದಿಗಂಬರ ಪಂಥದಲ್ಲಿ ಕ್ರಿ. ಶ. ಹತ್ತನೇ
ಶತಮಾನದ ದೇವಸೇನರು, ತಮ್ಮ ದರ್ಶನ ಪಾಹುಡದಲ್ಲಿ ಹೇಳಿರುವಂತೆ, ವಿಕ್ರಮ ರಾಯನು ಮರಣ ಹೊಂದಿದ ೧೩೬ನೇ ವರ್ಷದಲ್ಲಿ ಸೌರಾಷ್ಟ್ರದ ವಲಭಿಯಲ್ಲಿ ಶ್ರೀ ಭದ್ರಬಾಹುಗಣಿಯ ಶಿಷ್ಯ ಶಾಂತಿ ಆಚಾರ್ಯನ ಶಿಷ್ಯನಾದ ಜಿನಚಂದ್ರನಿಂದ (ಸೇವಡ) ಶ್ವೇತಾಂಬರ ಸಂಘವು ಉತ್ಪನ್ನವಾಯಿತು.[೫೯] ಇದಲ್ಲದೆ ನಂದಿ ಆಮ್ನಾಯ ಪಟ್ಟಾವಲಿ 'ಇ' ಆವೃತ್ತಿಯಲ್ಲಿ ಮೂರನೇ ಭದ್ರಬಾಹು ಸ್ವಾಮಿಯವರ ಕಾಲದಲ್ಲಿ ಶ್ವೇತಾಂಬರರು ಉದಯಿಸಿ ತಮ್ಮ ಪಟ್ಟಾವಲಿಯ ಪ್ರವರ್ತನೆ ಮಾಡಿದರೆಂದು ಹೇಳಿದೆ.[೬೦] ಹೀಗೇಯೆದಿಂಗಬರ ಪಂಥವು ವೀ. ನಿ. ಸಂ. ೬೦೯(ವಿ. ಸಂ. ೧೩೯)ರಲ್ಲಿ ಹುಟ್ಟಿತೆಂದು ಶ್ವೇತಾಂಬರ ಪಂಥದ ಹೇಳಿಕೆಯಿದೆ. ಆದರೆ ಈ ಹೇಳಿಕೆಯಲ್ಲಿರುವ ಕಾಲಗಣನೆಯ ಬಗ್ಗೆ ಪರಿಶಿಲನೆ ಮಾಡಬೇಕಾದ ಅಗತ್ಯವಿದೆ. ಪೂಜ್ಯ ಮುನಿಪಥ್ ಮಲ್ ಅವರು 'ಕಿಂ ವದಂತಿಯ ಅನುಸಾರ ವೀರ ನಿರ್ವಾಣದ ೬೦೯ನೇ ವರ್ಷದ ಬಳಿಕ ದಿಗಂಬರ ಸಂಪ್ರದಾಯವು ಮೂಡಿತೆಂಬುದು ಶ್ವೇತಾಂಬರರ ಮಾನ್ಯತೆ' ಎಂದು ಹೇಳಿದ್ದಾರೆ.[೬೧] ಇದಲ್ಲದೆ 'ಸ್ಥಾನಂಗದಲ್ಲಿ ಏಳುನಿಹ್ನವಗಳ ಉಲ್ಲೇಖ ಮಾತ್ರವಿದೆ, ಮತ್ತು ವಸ್ತ್ರವನ್ನು ತ್ಯಜಿಸಿ ಸಂಘದಿಂದ ಬೇರ್ಪ 'ಬೋಟಿಕೆ' (ದಿಗಂಬರೋತ್ಪತ್ತಿ) ಎಂಬ ಎಂಟನೆಯ ನಿಹ್ನವನ್ನು ಜಿನಭದ್ರಗಣಿಯವರು ಹೇಳಿದ್ದಾರೆ' ಎಂದೂ ಪೂಜ್ಯ ಮುನಿಪಥ್‌ವಲ್ ಅವರು ಹೇಳಿದ್ದಾರೆ.[೬೨] ಇದಕ್ಕೆ ಸಂಬದಿಸಿದಂತೆ ಗಮನಿಸಬೇಕಾಗಿರುವ ಮತ್ತೂ ಒಂದು ಅಂಶವೆಂದರೆ ಈ ಪೂಜ್ಯ ಮುನಿಯವರು ಕೋಷ್ಟಕದಲ್ಲಿ ಕಾಣಿಸಿರುವಂತೆ[೬೩] ಏಳನೆಯ ನಿಹ್ನವವು ವೀ. ನಿ. ಸಂ. ೬೦೯ರಲ್ಲಿ ಸಂಘಟಿಸಿದೆಯಾದುದರಿಂದ ಎಂಟ ನೆಯದಾದ 'ಬೋಟಿಕ' ನಿಹ್ನವು ವೀ. ನಿ. ಸಂ ೬೦೯ರಿಂದ ಕೆಲವು ವರ್ಷಗಳಾದರು ಕಳೆದ ಬಳಿಕ ಸಂಘಟಿಸಿದೆ ಎಂಬ ಗಣನೆ ಮಾಡಬೆಕಾಗುವುದು. ಇದೇ ವಿಷಯವಾಗಿ ಶ್ವೇತಾಂಬರ ಪಂಥದ ವಿಜಯಗಣದ ಪ್ರಧಾನಾಚಾರ್ಯ ಆತ್ಮಾರಾಂಜಿ ಅವರು ತಮ್ಮ 'ಜೈನ ಮತವೃಕ್ಷ'ದಲ್ಲಿ ಕೊಟ್ಟಿರುವ ಸಂಗತಿಯನ್ನು ಗಮನಕ್ಕೆ ತಂದುಕೊಳ್ಳ ಬೇಕಾದ ಅವಶ್ಯಕತೆಯಿದೆ.

"ವೀ. ನಿ. ಸಂ.  ೬೦೯ರಲ್ಲಿ ಕೃಷ್ಣಸೂರಿಯವರ ಶಿಷ್ಯ ಶಿವಭೂತಿ ಸಹಸ್ರಮಲ್ಲನು ದಿಗಂಬರ ಪಂಥದ ಉತ್ಪತ್ತಿ ಮಾಡಿದನು. ಅವನಿಗೆ ಕೌಂಡಿನ್ಯ ಮತ್ತು ಕೌಷ್ಟವೀರ ರೆಂಬ ಇಬ್ಬರು ಶಿಷ್ಯರು, ಇವರಿಬ್ಬರ ಬಳಿಕ ಧರಸೇನ, ಭೂತಬಲಿ ಮತ್ತು ಪುಷ್ಪದಂತ ಎಂಬುವರಾದರು.ಇವರು ವೀ. ನಿ. ಸಂ. ೬೮೩ರಲ್ಲಿ (?) ತಿಂಗಳ ಶುಕ್ಲಪಕ್ಷ ಪಂಚಮಿ ಯಂದು ೭೦.೦೦೦ ಶ್ಲೋಕ ಪ್ರಮಾಣದ ಧವಲಾ, ೬೦,೦೦೦ ಶ್ಲೋಕ ಪ್ರಮಾಣದ ಜಯಧವಲಾ ಮತ್ತು ೪೦,೦೦೦ ಶ್ಲೋಕ ಪ್ರಮಾಣದ ಮಹಾಧವಲಾ ಎಂಬ ಮೂರು ಶಾಸ್ತ್ರಗಳ ರಚನೆ ಮಾಡಲು ಆರಂಭಿಸಿದರು.ಈ ಮೂರು ಶಾಸ್ತ್ರಗಳು ಈವತ್ತಿಗೂ ಕರ್ನಾಟಕ ದೇಶದಲ್ಲಿ ಉಳಿದು ಬಂದಿದೆ. ಇವುಗಳ ಋಣದ ಮೂಲಕ ನೇಮಿಚಂದ್ರನು ಚಾಮುಂಡ(ರಾಯ)ನಿಗಾಗಿ ರಚಿಸಿದನು. ಈ ಮೂರು ಶಾಸ್ತ್ರಗಳಿಗಿಂತ ಪ್ರಾಚೀನವಾದ ಮತ್ತಾವ ಶಾಸ್ತ್ರವು ದಿಗಂಬರರಲ್ಲಿ ದೊರಕುವುದಿಲ್ಲ. ಬಳಿಕ ದಿಗಂಬರರು ನಂದಿ ಮುಂತಾದ ನಾಲ್ಕು ಶಾಖೆಗಳಾಗಿ ವಿಭಾಜಿತರಾದರು. ಅಲ್ಲಿಂದ ಮುಂದೆ ಮೂಲ ಸಂಘ ಕಾಷ್ಠಾಸಂಘ, ಮೊಥುರ ಸಂಘ, ಮತ್ತು ಗೊಪ್ಪ ಸಂಘ ಎಂಬ ಪಂಥಗಳು ಮೂಡಿದವು. ಇದರ ಬಳಿಕ ಇನ್ನೂ ಮುಂದೆ ವೀಸಪಂಥಿ, ತೇರಾಪಂಥಿ, ಗುಮಾನ ಪಂಥಿ ಮತ್ತು ಟೋಟಪಂಥಿ, ಎಂದರೆ ಮೂರ್ತಿಗಳ ಸ್ಥಾನದಲ್ಲಿ ಪುಸ್ತಕಗಳನ್ನು ಪೂಜಿಸುವ ಪಂಥಗಳಾದುವು. ಪ್ರಾರಂಭಕ್ಕೆ ಶಿವಭೂತಿಯು ನಗ್ನ ಪಂಥವನ್ನು ಆರಂಭಿ ಸಿದನು, ಬಳಿಕ ಸ್ತ್ರೀಯರಿಗೆ ಮುಕ್ತಿಯಿಲ್ಲವೆಂದು ಉಪದೇಶಿಸಿದನು."

ಶಿವಭೂತಿಯು ನಗ್ನ ಪಂಥವನ್ನು ಆರಂಭಿಸಿದ ಬಗ್ಗೆ ಶ್ವೇತಾಂಬರರಲ್ಲಿ ಒಂದು ಕಥೆಯಿದೆ : "ರಥವೀರಪುರದಲ್ಲಿ ಶಿವಭೂತಿಯೆಂಬ ಕ್ಷತ್ರಿಯನಿದ್ದನು. ಅವನು ತನ್ನ ರಾಜನಿಗೋಸ್ಕರ ಹಲವು ಯುದ್ಧಗಳನ್ನು ಜಯಿಸಿದನು. ಅದರಿಂದಾಗಿ ರಾಜನು ಅವನನ್ನು ಬಹಳವಾಗಿ ಗೌರವಿಸುತ್ತಿದ್ದನು. ಇದರಿಂದ ಅವನು ಬಹಳ ಅಹಂಕಾರಿ ಯಾದನು. ಒಂದು ದಿನ ಶಿವಭೂತಿಯು ಅಪರಾತ್ರಿಯಲ್ಲಿ ಮನೆಗೆ ಬರಲು ಅವನನ್ನು ತಾಯಿಯು ಗದರಿಸಿ ಅವನಿಗೆ ಬಾಗಿಲು ತೆಗೆಯಲಿಲ್ಲ. ಆಗ ಅವನು ಒಂದು ಮಠವನ್ನು ಸೇರಿ ಸಾಧುವಾದನು. ಇದನ್ನು ತಿಳಿದ ರಾಜನು ಆ ಸಾಧುವಿಗೆ ಒಂದು ಬಹುಮೂಲ್ಯದ

ವಸ್ತ್ರವನ್ನು ಉಪಹಾರವಾಗಿತ್ತನು. ಆಚಾರ್ಯನು ಆ ವಸ್ತ್ರವನ್ನು ಹಿಂದಕ್ಕೆ ಕೊಡ ಬೇಕೆಂದು ಆ ಸಾಧುವಿಗೆ ಅಪ್ಪಣೆ ಮಾಡಿದನು.ಆದರೆಶಿವಭೂತಿಯೂ ಅದಕ್ಕೆ ಒಪ್ಪಲಿಲ್ಲ. ಆಗ ಆಚಾರ್ಯನು ಆವಸ್ತ್ರವನ್ನು ತುಂಡು ಮಾಡಿ ಆ ತುಂಡುಗಳನ್ನು ತನ್ನ ಆಸನಕ್ಕೋಸ್ಕರ ಉಪಯೋಗಿಸಿಕೊಡನು. ಇದರಿಂದ ಶಿವಭೂತಿಯೂ ಬಹಳ ವಾಗಿ ಕೋಪಗೊಂಡು ಮಹಾವಿರನಂತೆ ನಾನೂ ವಸ್ತ್ರವನ್ನುಧರಿಸುವುದಿಲ್ಲವೆಂದು ಪ್ರತಿಜ್ಞೆ ಮಾಡಿ ವಸ್ತ್ರ ತ್ಯಾಗ ಮಾಡಿದನು. ಅವನ ಸಹೋದರಿಯೂ ಅವನನ್ನೇ ಅನುಸರಿಸಿದಳು. ಆಗ ಶಿವಭೂತಿಯು, ಸ್ತ್ರೀಯರು ನಗ್ನರಾಗಬಾರದೆಂದು ತಡೆದನು. ಹಾಗೆಯೇ ಸ್ತ್ರೀಯರು ಮುಕ್ತಿಯನ್ನು ಪಡೆಯಲಾರರೆಂದೂ ಅವನು ಪ್ರಕಟಮಾಡಿದನು. ಈಪ್ರಕಾರ ಮಹಾವೀರನ ನಿರ್ವಾಣದಿಂದ ೬೦೯ವರ್ಷಗಳ ತರುವಾಯ ಬೋಟಕರ ಉತ್ಪತ್ತಿಯಾಯಿತು. ಅವರಿಂದಲೇ ಈ ದಿಗಂಬರ ಸಂಪ್ರದಾಯವು ಹುಟ್ಟಿತು.[೬೪]

ಈ ಕಥೆಯ ಐತಿಹಾಸಿಕತೆಯನ್ನು ವಿಮರ್ಶಿಸಬೇಕಾದ ಅಗತ್ಯವಿಲ್ಲ. ಆದರೂ ಸ್ಥಾನಾಂಗದಲ್ಲಿ ಇಲ್ಲದಿರುವ ಮತ್ತೊದು ನಿಹ್ನವನ್ನು ಸೃಷ್ಟಿಸಿ ಶ್ವೇತಾಂಬರ ಪಂಥದ ಗಣ್ಯ ಆಚಾರ್ಯರು ತಮ್ಮ ದಾಯಾದ್ಯ ಪಂಥವದ ದಿಗಂಬರ ಪಂಥದ ಬಗ್ಗೆ ಕುತ್ಸಿತ ಭಾವನೆಯನ್ನು ಈ ಕಥೆಯ ಮೂಲಕ ವ್ಯಕ್ತಪಡಿಸಿರುವುದು ಸ್ಪಷ್ಟವಿದೆ. ಇದು ಹೇಗೆಯೇ ಇರಲಿ. ಈ ಹಿಂದೆ ಉಲ್ಲೇಖಿಸಿರುವ ಆಚಾರ್ಯ ಆತ್ಮಾ ರಾಂಜಿಯವರ ಹೇಳಿಕೆಯು ಒಂದೆರಡು ಅಂಶಗಳನ್ನು ಈಗ ಪರ್ಯಾಲೋಚನೆ ಮಾಡಬೇಕಾಗಿದೆ. 'ಧವಲಾ, ಜಯಧವಲ ಮತ್ತು ಮಹಾಧವಲಾಎಂಬ ಮೂರು ಶಾಸ್ತ್ರಗಳು ಧರಸೇನ,ಭೂತಬಲಿ ಮತ್ತು ಪುಷ್ಪದಂತರ ರಚನೆಗಳಾಗಿವೆ' ಎಂಬ ಇವರ ಹೇಳಿಕೆ ದಿಗಂಬರ ಪಂಥದ ವಾಸ್ತವಿಕತೆಯ ಬಗ್ಗೆ ಇವರಿಗಿರುವ ತಿಳಿವಳಿಕೆ ಎಷ್ಟು ಎಂಬುದನ್ನು ಸ್ಪಷ್ಟಪಡಿಸುವುದು. ಇಷ್ಟಾದರು ಇವರು ಕೃಷ್ಣ ಸೂರಿಯವರನ್ನು ಹೆಸರಿಸುವುದರಲ್ಲಿ ಇರುವ ಐತಿಹಾಸಿಕ ಸಂಗತಿ ಗಮನಾರ್ಹವಾಗಿದೆ.

ಮಥುರಾ ಪುರಾತತ್ತ್ವದಲ್ಲಿ ಅಂಕಿತವಾಗಿರುವಂತೆ "ಶಿಲಾಪಟ್ಟದ ಮೇಲ್ಭಾಗದಲ್ಲಿ ಸ್ತೂಪದ ಎರಡು ಕಡೆಗಳಲ್ಲಿ ನಾಲ್ಕು ತೀರ್ಥಂಕರ ಮೂರ್ತಿಗಳಿವೆ. ಇವುಗಳಲ್ಲಿ ಮೂರನೆಯದು

ಸರ್ಪಫಣಾಲಂಕೃತವಾಗಿರುವ ಪಾರ್ಶ್ವನಾಥ ಮೂರ್ತಿ. ನಾಲ್ಕನೆ ಯದು ಸಂಭವನೀಯವಾಗಿ ಭ.ಮಹಾವೀರನದು. ಮೊದಲಿನವೆರಡು ಋಷಭ ಮತ್ತುನೇಮಿನಾಥರ ಮೂರ್ತಿಗಳಾಗಿರಬೇಕು. ಆದರೆ ತೀರ್ಥಂಕರ ಮೂರ್ತಿಗಳಿಗೆ ಲಾಂಛನ ವಿಲ್ಲ. ವಸ್ತ್ರದ ಚಿಹ್ನೆಯೂ ಇಲ್ಲ. ಶಿಲಾಪಟ್ಟದ ಕೆಳಭಾಗದಲ್ಲಿ ಒಬ್ಬ ಹೆಂಗಸು ಇದ್ದಾಳೆ. ಅವಳ ಎದುರಿನಲ್ಲಿ ನಗ್ನ ಮುನಿ ಇದ್ದಾನೆ, ಇವನ ಹೆಸರನ್ನು 'ಕಣ್ಹಶ್ರಮಣ' ಎಂದು ಅಂಕಿತಮಾಡಿದೆ. ಈ ಶ್ರಮಣನ ಒಂದು ಕೈಯಲ್ಲಿ (ಸಂಮಾರ್ಜಿನೀ)ರಜೋಹರಣ ವಿದೆ ಮತ್ತು ಎಡಗೈಯಲ್ಲಿ ಒಂದು ವಸ್ತ್ರದ ತುಂಡು ಇದೆ,ಮಿಕ್ಕಂತೆ ಮೈಯಿ ಬೆತ್ತಲೆ ಯಾಗಿದೆ. ಈ ಪಟ್ಟಿಕೆಯ ಮೇಲೆ (ಶ್ವೇತಾಂಬರ)ಕೋಟ್ಯಯ ಗಣದ ಆಚಾರ್ಯರ ಹೆಸರುಗಳು ಅಂಕಿತವಾಗಿವೆ. ಈ ಶ್ರವಣರು (ತಮ್ಮ ಉಪಾಶ್ರಯ ದಿಂದ) ಹೊರಗೆ ಹೋಗುವ ಸಂದರ್ಭಗಳಲ್ಲಿ ತಮ್ಮ ಗುಹ್ಯ ಭಾಗವನ್ನು ಮರೆಮಾಡಿ ಕೊಳ್ಳಲೋಸುಗ ಮುಂಗೈಯ್ಯಮೇಲೆ ವಸ್ತ್ರವನ್ನು ತೂಗುಹಾಕಿಕೊಳ್ಳುತ್ತಿದ್ದರೆಂದು ಕಂಡು ಬರುತ್ತದೆ.[೬೫]"

ಈ ಮೇಲಿನ ಉಲ್ಲೇಖದಲ್ಲಿ ಹೆಸರಿಸಿರುವ ಕಣ್ಹ ಶ್ರಮಣ (ಕೃಷ್ಣ ಶ್ರಮಣನ) ಹೆಸರು ಕಲ್ಪಸೂತ್ರದಲ್ಲಿ ಹೆಸರಿಸಿರುವ ಆರ್ಯಕೃಷ್ಣನಾಗಿರಬೇಕೆಂದು ಕೆಲವರ ಅಭಿಪ್ರಾಯವಿದೆ. [೬೬] ಪ್ರಾಯಶಃ ಆತ್ಮಾರಾಂಜಿಯವರು ಇವರನ್ನೇ ಕೃಷ್ಣಸೂರಿ ಎಂದು ಹೆಸರಿಸಬೇಕಾದ ಸಂಭವವಿದೆ. ಕಲ್ಪಸೂತ್ರದಲ್ಲಿ ಆರ್ಯಶಿವಭೂತಿ ಎಂಬ ಹೆಸರೂ ಇದೆ. ಆದರೆ ಯಾಕೋಬಿಯವರು ಸೂಚಿಸಿರುವಂತೆ ಈ 'ಆರ್ಯ ಶಿವಭೂತಿ' ಹೆಸರು ಕೃಷ್ಣಸೂರಿಯವರ ಹೆಸರಾಗಿದೆಯೆಂದು ಹೇಳಲಾಗುವುದಿಲ್ಲ. ಇವರು ಸೂಚಿಸಿರು ವಂತೆ ಆರ್ಯಶಿವಭೂತಿಯವರ ಹೆಸರು ೧೮ನೆಯದಾಗಿಯೂ ಕೃಷ್ಣಸೂರಿಯವರ ಹೆಸರು ೧೯ನೆಯದಾಗಿಯೂ ಆಗಿವೆ.[೬೭] ಈ ಕೃಷ್ಣಸೂರಿಯವರ ಅನಂತರದಲ್ಲಿ ಮೂರನೆಯ ಅಥವಾ ನಾಲ್ಕನೆಯವರನ್ನಾಗಿ ಧರಸೇನರನ್ನು ಆತ್ಮಾರಾಂಜಿಯವರು ಹೆಸರಿಸಿದ್ದಾರೆ. ಇದರಿಂದ ಆತ್ಮಾರಾಂಜಿಯವರು ಹೇಳಿರುವ ಇತಿವೃತ್ತದಲ್ಲಿ ಎಷ್ಟೇ ಲೋಪದೋಷಗಳಿದ್ದರೂ ದಿಗಂಬರ ಮತ್ತು ಶ್ವೇತಾಂಬರ ಪಂಥ ಭೇಧಗಳು ಏರ್ಪಟ್ಟಕಾಲವನ್ನು ಸ್ಥೂಲವಾಗಿ ಅತ್ಯಂತ ಸನ್ನಿಕೃಷ್ಟವಾದುದನ್ನಾಗಿ ತೋರಿಸಿರುವ ರೆಂದು ಹೇಳಲಡ್ಡಿಯಿಲ್ಲ. ಈ ಪಂಥಭೇಧವು ಶ್ವೇತಾಂಬರ ಇತಿವೃತ್ತಾಕಾರರು

ಹೇಳಿರುವಂತೆ ವೀ. ನಿ. ಸಂ. ೬೦೯ರಲ್ಲಿ ಸಂಘಟಿಸಿರದೆ ಈ ಸಮಯದಿಂದ ಸ್ವಲ್ಪ ಕಾಲದ ಅನಂತರದಲ್ಲಿ ಸಂಘಟಿಸಿದೆಯೆಂದು ತಿಳಿಯಬೇಕಾಗಿದೆ.

ದಿಗಂಬರ ಇತಿವೃತ್ತದಂತೆ 'ವಿಕ್ರಮ ರಾಯನು ಮರಣ ಹೊಂದಿದ ೧೩೬ ವರ್ಷಗಳ ಸಮಯದಲ್ಲಿ ಶ್ವೇತಾಂಬರ ಪಂಥದ ಉದಯವಾಯಿತೆಂದು ಹಿಂದೆ ಹೇಳಿದೆ. ಸಾಧಾರಣವಾಗಿ ವಿಕ್ರಮಶಕೆಯು ವಿಕ್ರಮನ ಜನನದಿನದಾಧಾರದಿಂದ ಗಣನೆಗೆ ಬಂದಿದೆಯೆಂದು ತಿಳಿಯಲಾಗಿದೆ. ನಂದಿ ಆಮ್ನಾಯಪಟ್ಟಾವಲಿಯಲ್ಲಿ ಉಳಿದು ಬಂದಿರುವ ಐತಿಹ್ಯವೂ ಇದನ್ನೆ ಸೂಚಿಸುತ್ತದೆ:

"ಮಹಾವೀರ ಭಗವಂತನ ನಿರ್ವಾಣ ಸಮಯದಿಂದ ೪೭೦ನೇ ವರ್ಷದಲ್ಲಿ ವಿಕ್ರಮನ ಜನನವಾಯಿತು, ೮ ವರ್ಷ ಬಾಲಕ್ರೀಡೆ, ೧೬ವರ್ಷ ದೇಶಾಟನೆ ೫೬ವರ್ಷ ರಾಜ್ಯಭಾರ ಮಿಥ್ಯೋಪದೇಶನ್ ಯುಕ್ತನಾಗಿದ್ದ ಅವನು ೪೦ ವರ್ಷ ವರಜಿನಧರ್ಮವನ್ನು ಪಾಲಿಸಿ ಸುರಪದವನ್ನು ಪಡೆದನು.[೬೮]" ಇಲ್ಲಿ ಕಂಡುಬರುವ ಐತಿಹ್ಯದಂತೆ ವಿಕ್ರಮನ ಪೂರ್ವಜರು ಉಜ್ಜಯಿನಿಯಲ್ಲಿ ರಾಜ್ಯಭಾರ ನಡೆಸಿದ್ದಾರೆ. ಭ.ಮಹಾ ವೀರನ ನಿರ್ವಾಣ ಕಾಲ ನಿರ್ದೇಶಕ ಐತಿಹ್ಯ ಸಂಬಂಧಿ ಗಾಹೆಗಳಲ್ಲಿ ಸೂಚಿತವಾಗಿರು ವಂತೆ[೬೯] ವಿಕ್ರಮನ ತಂದೆ ನಭೋವಾಹನ. ವಿಕ್ರಮನ ೮ ವರ್ಷಗಳ ಬಾಲ ಕ್ರೀಡೆ ಹೇಳಿರುವುದರಿಂದ, ಇವನ ೮ನೇ ವರ್ಷವಯಸ್ಸಿನ ಸಮಯದಲ್ಲಿ ಇವನ ತಂದೆ ರಾಜಪಟ್ಟ ಕಳೆದುಕೊಂಡಿದ್ದಾನೆ. ಇವನನ್ನು ಗರ್ಧಭಿಲ್ಲನು ಸೋಲಿಸಿ ಉಜ್ಜಯಿನಿಯ ರಾಜ್ಯಭಾರದಲ್ಲಿ ವೀ. ನಿ. ಸಂ ೪೭೮ರಲ್ಲಿ ಅಧಿಷ್ಠಿತನಾಗಿದ್ದಾನೆ. ಇವನು ೧೩ ವರ್ಷಗಳ ಕಾಲ ರಾಜ್ಯಭಾರ ಮಾಡುತ್ತಾನೆ. ಇವನನ್ನು ಶಕನು (ವೀ. ನಿ. ಸಂ. ೪೭೮+೧೩=೪೯೧ ರಲ್ಲಿ)ಸೋಲಿಸಿ ೪ ವರ್ಷ ರಾಜ್ಯಬಾರ ಮಾಡುತ್ತಾನೆ. ಇದರಂತೆ ಶಕನ ರಾಜ್ಯಭಾರ ವೀ. ನಿ. ಸಂ. ೪೯೫ರಲ್ಲಿ ಕೊನೆಗೊಡಿದೆ. ವಿಕ್ರಮನು ತನ್ನ ೮ ವರ್ಷಗಳ ಬಾಲಕ್ರೀಡೆ, ೧೬ ವರ್ಷಗಳ ದೇಶಾಟನೆಯ ಬಳಿಕ, ತನ್ನ ೨೫ನೇ ವಯೋಮಾನದಲ್ಲಿ(೪೭೦+೨೫=) ವೀ. ನಿ. ಸಂ. ೪೯೫ರಲ್ಲಿ ಶಕನನ್ನು ಸೋಲಿಸಿ (ಶಕಾರಿ ಎನಿಸಿ) ಪುನಃ ಉಜ್ಜಯಿನಿಯ ರಾಜ್ಯಭಾರದಲ್ಲಿ ಅಧಿಷ್ಠಿತನಾಗಿದ್ದಾನೆ. ಆದರೆ ವಿಕ್ರಮಶಕ ಅಥವಾ ಶಕವಿಕ್ರಮ ಎಂಬ ಹೆಸರಿನೊಡನೆ ಸೇರಿರುವ 'ಶಕ' ಪದದ ಕಾರಣದಿಂದಾಗಿ ಪ್ರಾಯಶಃ ವೀ. ನಿ. ಸಂ. ೪೯೫ರಲ್ಲಿ 'ವಿಕ್ರಮ'ನು ಮರಣ ಹೊಂದಿದ್ದಾನೆ ಎಂಬ ಐತಿಹ್ಯ ಪ್ರಚಲಿತವಾಗಿದೆ. ಇದರ ಪ್ರಕಾರವೇ

ದೇವಸೇನರು,ಹಿಂದೆ ತಿಳಿಸಿರುವಂತೆ 'ವಿಕ್ಕಮಸ್ಸ ಮರಣ ಪತ್ತಸ್ಸ' ಎಂದು ಹೇಳಿ ಇಲ್ಲಿಂದ ೧೩೬ನೇ ವರ್ಷದಲ್ಲಿ ಶ್ವೇತಾಂಬರ ಪಂಥದ ಉದಯವಾಯಿತು ಎಂದುಹೇಳಿದ್ದಾರೆ. ಈ ಗಣನೆಯಂತೆ ಶ್ವೇತಾಂಬರ ಪಂಥವು ವೀ. ನಿ. ಸಂ. (೪೮೫+೧೩೬=)೬೩೧ರಲ್ಲಿ ಉದಯಿಸಿದೆ ಎಂದು ಸ್ಫುಟಗೊಳ್ಳುವುದು ಹಿಂದೆ ಪ್ರತಿಪಾದಿಸಲಾಗಿರುವಂತೆ (ತೃ) ಭದ್ರಬಾಹು ಸ್ವಾಮಿಯವರು ವೀ. ನಿ. ಸಂ. ೬೩೩ರ ಪರ್ಯಂತ ಆಚಾರ್ಯಪಟ್ಟಸ್ಥರಾಗಿದ್ದರು. ಶ್ವೇತಾಂಬರ ಪಂಥವು ಭದ್ರಬಾಹುಸ್ವಾಮಿಯವರ ಕಾಲದಲ್ಲಿ ಉದಯಿಸಿತೆಂದು ದೇವಸೇನರೇ ಹೇಳಿದ್ದಾರೆ. ಇದಲ್ಲದೆ ಹಿಂದೆ ಹೇಳಿರುವಂತೆ ನಂದಿ ಆಂನಾಯ ಪಟಾವಲಿ 'ಇ' ಆವೃತ್ತಿಯಲ್ಲಿಯೂ  ಇದನ್ನೇ ಹೇಳಿದೆ. ಆದ್ದರಿಂದ ಶ್ವೇತಾಂಬರ ಮತ್ತು ದಿಗಂಬರ ಪಂಥ ಭೇದಗಳು, ಈ ಮೇಲೆ ವಿವರಿಸಿರುವಂತೆ, (ತೃ) ಭದ್ರಬಾಹುಸ್ವಾಮಿಯವರು ನಿರ್ಗ್ರದ ಮುನಿಸಂಘದ ಆಚಾರ್ಯ ಪಟ್ಟಸ್ಥರಾಗಿದ್ದಾಗ ವೀ. ನಿ. ಸಂ. ೬೩೧ರಲ್ಲಿ ಉದಯಿಸಿವೆಯೆಂದು ಸ್ಪಷ್ಟವಾಗುವುದು.

ಉತ್ತರ ಭಾರತದಲ್ಲಿ ದುಷ್ಕಾಲ ಕಳೆದ ಅನಂತರ ಅಲ್ಲಿಗೆ ಭಾರತದಿಂದ ಹಿಂದಿರುಗಿದ ಮುನಿಸಂಘ, ಮತ್ತು ದುಷ್ಕಾಲದಲ್ಲಿ ಉತ್ತರ ಭಾರತದಲ್ಲಿಯೇ ಉಳಿದಿದ್ದ ಮುನಿಸಂಘಗಳ ಮಧ್ಯೆ ಆಚಾರವಿಚಾರಗಳಲ್ಲಿ ವ್ಯತ್ಯಾಸವೇರ್ಪಟ್ಟಿದ ಕಾರಣದಿಂದ ಈ ಎರಡು ಸಂಘಗಳ ಮಧ್ಯೆ ಆಚಾರವಿಚಾರಗಲ್ಲಿ ವ್ಯತ್ಯಸವೇರಪರ್ಟ್ಟಿದ್ದ  ಕಾರಣದಿಂದ ಈ ಎರಡು ಸಂಘಗಳ ಮದ್ಯ ಒಡಕಿನ ಅಂಕುರಾರ್ಪಣವಾಯಿತಾದರೂ ಆ ಕಾಲದಲ್ಲಿಯೇ ಈ ಸಂಘಗಳು ಪ್ರತ್ಯೇಕತೆ ಹೊಂದದೆ 'ನಿರ್ಗ್ರಂಥ' ಮುನಿಸಂಘ ಎಂಬ ಒಂದೇ ಹೆಸರಿನಿಂದ ಮುಂದುವರಿದುವೆಂದು ಹಿಂದೆ ಹೇಳಿದೆ. ಆದರೆ ಕಾಲಾನುಕ್ರಮದಲ್ಲಿ ನಗ್ನ ಮುನಿಗಳು ಮತ್ತು ವಸ್ತ್ರದ  ಉಪಯೋಗ ಪಡೆಯುತ್ತಿದ್ದ ಮುನಿಗಳ ಮಧ್ಯೆ ದಿನದಿನಕ್ಕೂ ತೀವ್ರ ಮತಭೇದವೇರ್ಪಟ್ಟಿದೆಯೆಂಬುದರಲ್ಲಿ ಸಂದೇಹವಿಲ್ಲ. ಜೈನ ಆಚಾರ ಧರ್ಮದಲ್ಲಿ ಶ್ರಾವಕ ಧರ್ಮ ಮತ್ತು ಮುನಿಧರ್ಮ ಎಂಬುವು ಎರಡು ಪ್ರಧಾನ ವಿಭಾಗಗಳು. ಶ್ರಾವಕಾಚಾರ ಧರ್ಮದಲ್ಲಿ ಹನ್ನೊಂದು ಪ್ರತಿಮೆ ಅಥವಾ ನೆಲೆಗಳಿವೆ. ಇವುಗಳಲ್ಲಿ ಹನ್ನೊಂದನೆಯದು ಉದ್ದಿಷ್ಟ ತ್ಯಾಗ ಪ್ರತಿಮೆ ಎಂಬ ಉತ್ಕೃಷ್ಟ ಶ್ರಾವಕ ನೆಲೆಯಾಗಿದೆ. 'ಮನೆಯನ್ನು ತೊರೆದು ಮುನಿಗಳ ಬಳಿ

ಹೋಗಿ ಅವರಿಂದ ವ್ರತಗಳನ್ನು ಕೈಗೊಂಡು, ಭಿಕ್ಷೆಯ ಮೂಲಕ ಆಹಾರವನ್ನು ಭುಂಜಿಸಿ, ವಸ್ತ್ರದ ತುಂಡೊಂದನ್ನು ಧರಿದವನಾಗಿದ್ದು ತಪಸ್ಸು ಮಾಡುವವನು ಉತ್ಕೃಷ್ಟ ಶ್ರಾವಕನು .' ರತ್ನಕರಂಡ ಶ್ರಾವಕಾಚಾರದಲ್ಲಿ (ಶ್ಲೋ. ೧೪೭) ಹೇಳಿರುವಂತೆ ಇದು ಉತ್ಕೃಷ್ಟ ಶ್ರಾವಕನ ಲಕ್ಷಣ. ಆಚರಣೆಯಲ್ಲಿ ಕಂಡುಬರುವಂತೆ ಈ ಉತ್ಕೃಷ್ಟ ಶ್ರಾವಕ ನೆಲೆಯು ಕ್ಷುಲ್ಲಕ ಮತ್ತು ಐಲಕ ಎಂದು ಎರಡು ವಿಧವಾಗಿದೆ : ಕ್ಷುಲ್ಲಕನು ಒಂದು ತುಂಡು ವಸ್ತ್ರ ಮತ್ತು ಕೌಪೀನಧಾರಿಯಾಗಿರುವನು, ಕೂದಲುಗಳನ್ನು ಕತ್ತಿಯಿಂದ ತೆಗೆಯಿಸಿಕೊಳ್ಳುವನು, ಭಿಕ್ಷೆಯಿಂದ ಪಡೆದ ಆಹಾರವನ್ನು ಒಂದೆಡೆ ಕುಳಿತು ಕೈಯನ್ನೇ ಪಾತ್ರೆಯಾಗಿ ಉಪಯೋಗಿಸಿ ಇಲ್ಲವೆ ಒಂದು ಪಾತ್ರೆಯ ಉಪಯೋಗ ದಿಂದ ಒಂದು ಹೊತ್ತು ಮಾತ್ರ ಭುಂಜಿಸುವನು. ಪಿಂಛದ ಉಪಯೋಗವನ್ನೂ ಒಂದೆಡೆ ಹೇಳಿದೆ. ಐಲಕನು ಕೌಪೀನ ಮಾತ್ರದ ಉಪಯೋಗ ಹೊಂದಿರುವನು. ಕೂದಲನ್ನು ಲೋಚುಮಾಡಿ ಕೊಳ್ಳುವನು. ಭಿಕ್ಷೆಯ ಮೂಲಕ ಪಡೆದ ಆಹಾರವನ್ನು ಕೈಯನ್ನೇ ಪಾತ್ರೆಯಾಗಿ ಮಾಡಿಕೊಂಡು ಭುಂಜಿಸಿವನು. ಪಿಂಛದ ಮೂಲಕ ಸ್ಥಾನಾದಿ ಶುದ್ಧಿ ಮಾಡುವನು, ನಿಯಮಪೂರ್ವಕ ರಾತ್ರಿಯಲ್ಲಿ ಕಾಯೋತ್ಸರ್ಗ ಧ್ಯಾನ ಮಾಡುವನು. ಈ ಉತ್ಕೃಷ್ಟ ಶ್ರಾವಕರೆನಿಸಿದ ಕ್ಷುಲ್ಲಕ ಮತ್ತು ಐಲಕರ ಆಚಾರ ಧರ್ಮವನ್ನು ಶ್ವೇತಾಂಬರ ಪಂಥದ, ಹಿಂದೆ ಹೇಳಿರುವ ಸ್ಥವಿರ ಕಲ್ಪಿಮುನಿ ಆಚಾರಧರ್ಮದೊಡನೆ ಹೋಲಿಸಿ ನೋಡಿದಲ್ಲಿ ಈ ಮುನಿ ಆಚಾರಧರ್ಮವು ದಿಗಂಬರ ಪಂಥದ ಉತ್ಕೃಷ್ಟ ಶ್ರಾವಕನ ಆಚಾರಧರ್ಮಕ್ಕಿಂತ ಯಾವ ರೀತಿಯಿಂದಲೂ ಶ್ರೇಷ್ಠತರವಾದುದೆನಿಸಿ ಕೊಳ್ಳುವುದಿಲ್ಲ. ಆದ್ದರಿಂದ ನಿರ್ಗ್ರಂಥ ಸಾಧುಸಂಘದಲ್ಲಿ ಸ್ಥವಿರಕಲ್ಪಿ ಮುನಿಗಳನ್ನು ನಗ್ನ ಮುನಿಗಳ ಸ್ಥಾನಮಾನದಿಂದ ಕಡೆಗಣಿಸಿ ಪ್ರಾಯಶಃ ಉತ್ತಮ ಶ್ರಾವಕನ ಸ್ಥಾನಮಾನದಲ್ಲಿ ಕಾಣಲಾರಂಭಿಸಿರಬೇಕು. ಇದು ಆಚಾರಾಂಗ ವೃತ್ತಿಯ ಆಧಾರದ ಪೂಜ್ಯ ನಥಮಲ್ ಮುನಿಯವರ ಹೇಳಿಕೆಯಿಂದ ನಿಚ್ಚಳವಾಗಿ ಸಮರ್ಥಿತವಾಗು ವುದು. ಈ ಕಾರಣದಿಂದಾಗಿ ಶ್ವೇತಾಂಬರ ಪಂಥದ ಸ್ಥವಿರಕಲ್ಪಿ ಮುನಿಪಂಗಡವು (ತೃ) ಭದ್ರಬಾಹುಸ್ವಾಮಿಗಳವರ ಕಾಲದಲ್ಲಿ ಪ್ರತ್ಯೇಕಗೊಂಡು ಸ್ವತಂತ್ರಸಂಘವಾಗಿ ಉದಯಿಸಿದೆ. ಇಷ್ಟು ಮಾತ್ರವಲ್ಲ ಶ್ವೇತಾಂಬರ ಪಂಥದ ಪೂರ್ವಾನುಸೃತ ಆಗಮ ವನ್ನು ಪುರಸ್ಕರಿಸಿದ್ದ ಜಿನಕಲ್ಪಿ ಮುನಿಗಳಲ್ಲಿ ಕೆಲವರಾದರೂ ತಮ್ಮದೇ ಆದ ಸ್ವತಂತ್ರ ಸಂಘವನ್ನು ರೂಪಿಸಿಕೊಂಡಿದ್ದಾರೆ. ಇದಲ್ಲದೆ ಇವರಲ್ಲಿ ಕೆಲವರಾದರೂ ದಿಗಂಬರ

ಪಂಥದಲ್ಲಿ ಸೇರಿರುವರೆಂದು ಹೇಳಲವಕಾಶವಿದೆ. ಈ ಕಾಲದ ಕೆಲವರು ಮುನಿಗಳ ಹೆಸರುಗಳು ಶ್ವೇತಾಂಬರ ಮತ್ತು ದಿಗಂಬರ ಪರಂಪರೆಗಳೆರಡರಲ್ಲಿಯೂ ಕಂಡು ಬರುವುವಾದ್ದರಿಂದ ಮೂಲತಃ ಶ್ವೇತಾಂಬರ ಪೂರ್ವಾಮ್ನಾಯದ ಜಿನಕಲ್ಪಮಾರ್ಗಾನುಸಾರಿಯಾಗಿದ್ದ ಕೆಲವರು ದಿಗಂಬ' ಪಂಥದಲ್ಲಿ ಸೇರಿರುವರೆಂದು ಸೂಚಿತವಾಗುವುದು.

ಪ್ರಸ್ತುತ ಪ್ರಸಂಗದಲ್ಲಿ ಯಾಪನೀಯ ಮುನಿಸಂಘದ ಉದಯದ ಬಗ್ಗೆಯೂ ತಿಳಿದುಕೊಳ್ಳಬೇಕಾಗಿದೆ. ದಿಗಂಬರ ಪಂಥದಲ್ಲಿ ಉಳಿದು ಬಂದಿರುವ ಐತಿಹ್ಯದಂತೆ[೨೦] 'ಶ್ವೇತಾಂಬರ ಸಂಘದ ಸಿರಿಕಲಸನಿಂದ ಕಲ್ಯಾಣವರನಗರದಲ್ಲಿ (ಶ್ವೇತಾಂಬರ ಸಂಘದ ಉತ್ಪತ್ತಿಯಿಂದ) ೨೦೫ ವರ್ಷಗಳ ಬಳಿಕ (ಜಾಉಲಿಯ ಸಂಘ) ಯಾಪ ನೀಯ ಸಂಘವು ಉದಯಿಸಿತು'. ಶ್ವೇತಾಂಬರ ಪಂಥವು' ಹಿಂದೆ ವಿವರಿಸಿರುವಂತೆ'ವೀ. ನಿ. ಸಂ. ೬೪೧ರಲ್ಲಿ ಉದಯಿಸಿದೆಯಾದ್ದರಿಂದ ಯಾಪನೀಯ ಸಂಘವು ವೀ. ನಿ. ಸಂ. (೬೪೧+೨೦೫=) ೮೪೬ರಲ್ಲಿ ಉದಯಿಸಿದೆಯೆಂದು ನಿರ್ದೇಶಿತವಾಗುವುದು.

ಯಾಪನೀಯ ಪಂಥದ ಮುನಿಗಳು ಬಾಹ್ಯಾಚರಣೆಯಿಂದ ನಗ್ನರೇ ಆಗಿದ್ದೂ್ರ ಶ್ವೇತಾಂಬರ ಪಂಥದ ಆಗಮವನ್ನೇ ಪ್ರಾಮಾಣಿಕವೆಂದು ಮಾನ್ಯತೆ ಮಾಡಿದ್ದರು. ದಿಗಂಬರ ಪಂಥದ,ಮೇಲೆ ಹೇಳಿರುವ, ಐತಿಹ್ಯದಂತೆ ಶ್ವೇತಾಂಬರ ಪಂಥದ, ಮುನಿಗಳಿಂದ ಯಾಪನೀಯ ಪಂಥ ಉದಯಕ್ಕೆ ಬಂದಿದೆಯಾಗಿ ಶ್ವೇತಾಂಬರ ಜಿನಕಲ್ಪಿ ಮುನಿಗಳ ಪಂಗಡದವರಿಂದ ಯಾಪನೀಯ ಪಂಥವು ಪ್ರವರ್ತಿತವಾಗಿದೆಯೆಂದು ತಿಳಿಯಬೇಕಾಗುವುದು. ಹಿಂದೆ ವಿವರಿಸಿರುವಂತೆ, ವೀ. ನಿ. ಸಂ. ೮೪೦ರ ಸಮಯದಲ್ಲಿ ಸ್ಕಂದಿಲ ಸೂರಿಯವರ ನೇತೃತ್ವದಲ್ಲಿ ಮಥುರಾದಲ್ಲಿ ಶ್ವೇತಾಂಬರ ಜಿನಕಲ್ಪ ಪಂಥದ ಆಗಮ ವಾಚನೆಯು ನಡೆದಿದ್ದು ಅದಾದ ಕೇವಲ ಕೆಲವೇ ವರ್ಷಗಳಲ್ಲಿ ನಾಗಾರ್ಜುನರ ನೇತೃತ್ವದಲ್ಲಿ ಸ್ಥವಿರಕಲ್ಪಿಗಳ ಆಗಮವಾಚನೆಯು ನಡೆದಿದೆ. ಈ ಬಳಿಕ ಶ್ವೇತಾಂಬರ ಪಂಥದಲ್ಲಿ ಸ್ಥವಿರಕಲ್ಪಿ ಪಂಥದ ಪ್ರಾಬಲ್ಯದ ಕಾರಣದಿಂದಾಗಿ ಜಿನಕಲ್ಪಿ ಪಂಥದವರು ಯಾಪನೀಯ ಪಂಥ ಸ್ಥಾಪನೆಯ ಪೂರ್ವಕ ಶ್ವೇತಾಂಬರ ಪಂಥದಿಂದ ಸ್ವಾತಂತ್ರ್ಯಪಡೆದಿರುವರೆಂದು ತಿಳಿಯಬಹುದಾಗಿದೆ. ಇದಲ್ಲದೆ ಈ ಹಿಂದೆ ವಿವರಿಸಿರುವಂತೆ ಯಾಪನೀಯ ಪಂಥವು ವೀ. ನಿ. ಸಂ. ೮೪೬ರಲ್ಲಿ ಉದಯ

ಹೊಂದಿರುವುದಾದ್ದರಿಂದ ಸ್ಕಂದಿಲ ಸೂರಿಯವರ ನೇತೃತ್ವದಲ್ಲಿ ನಡೆದ ವಾಚನದ ಆಗಮವನ್ನು ಈ ಯಾಪ ನೀಯ ಪಂಥದ ಮುನಿಗಳು ಸ್ವಕೀಯ ಗೊಳಿಸಿಕೊಡಿರುವರೆಂದೂ ತಿಳಿಯಬಹು ದಾಗಿದೆ.

ಯಾಪನೀಯ ಪಂಥದ ಉದಯವಾಗುವುದಕ್ಕಿಂತ ಬಹುದೀರ್ಹಕಾಲದ ಮುಂಚಿತವಾಗಿ ದಿಗಂಬರ ಪಂಥವು ದಕ್ಷಿಣ ಭಾರತದಲ್ಲಿ, ಅದರಲ್ಲಿಯೂ ಕರ್ನಾಟಕ ಮತ್ತು ತಮಿಳನಡುಗಳಲ್ಲಿ, ವಿಶೇಷ ಮಾನ್ಯತೆಯ ನೆಲೆ ಹೊಂದಿತಾದ್ದರಿಂದ ಹೊರ ನೋಟಕ್ಕೆ ದಿಗಂಬರ ಪಂಥದ ಆಚಾರಸಂಪನ್ನವಾಗಿದ್ದ ಯಾಪನೀಯ ಪಂಥವು ಶೀಘ್ರಗತಿಯಿಂದ ಹೆಚ್ಚಾದ ವ್ಯಾಪಕತೆ ಹೊಂದಿ ಬೆಳೆದಿದೆ. ಉತ್ತರ ಕರ್ನಾಟಕದಲ್ಲಿ ಬಹುಪ್ರಭಾವಶಾಲಿಯಾಗಿ ಬೆಳೆದ ಯಾಪನೀಯ ಪಂಥದ ಅನೇಕ ದೇವಸ್ಥಾನಗಳು, ಶಾಸನಗಳು ಈಗಲೂ ಉಳಿದುಕೊಡಿವೆ. ಈ ಪಂಥದ ಮುನಿಗಳು ಮತ್ತು ಶ್ರಾವಕರು ರಚಿಸಿದ ಸಾಹಿತ್ಯವು, ಅಲ್ಪಪ್ರಮಾಣದಲ್ಲಿಯೇ ಆಗಲಿ, ಇಂದಿಗೂ ಸುರಕ್ಷಿತವಿದೆ. ಈ ಸಾಹಿತಿಗಳಲ್ಲಿ 'ಪಾಉಮಚರಿಯಂ' ರಚನಕಾರರಾದ ವಿಮಲಸೂರಿಯವರು ಶಾಕಟಾ ಯನ ವ್ಯಾಕರಣ ಎಂಬ ಹೆಸರಿನಿಂದ ಪ್ರಸಿದ್ದವಿರುವ (ಸಂಸ್ಕೃತ) ಶಬ್ದಾನುಶಾಸನ, 'ಸ್ತ್ರೀ ಮುಕ್ತಿ ಮತ್ತು ಕೇವಲಿ ಭುಕ್ತಿ ಪ್ರಕರಣ'ಗಳ ಕರ್ತೃ ಶಾಕಟಾಯನ ಪಾಲ್ಯಕೀರ್ತಿ ಸೂರಿಯವರು ; 'ಪಾಉಮಚರಿಉ,' 'ರಿಟ್ಠಣೇಮಿಚರಿಉ' ಮತ್ತು 'ಸ್ವಯಂಭೂಛಂದ' ಗಳ ರಚನಕಾರ ಕವಿ ಸ್ವಯಂಭು, ಈ ಕವಿಯ ಪುತ್ರ ತ್ರಿಭುವನ ಸ್ವಯಂಭು–ಇವರುಗಳ ಹೆಸರುಗಳು ಪ್ರಸಿದ್ದವಿವೆ. ಇವರಲ್ಲದೆ, 'ಭಗವತೀ ಆರಾಧನಾ' ಎಂಬ ನಾಮಾಂತರ ಹೊದಿರುವ ಮೂಲಾರಾಧನಾದ ಕರ್ತೃ(ಸಿವಜ್ಜ) ಶಿವಾರ್ಯರು ಮತ್ತುಈ ಕೃತಿಯ ವ್ಯಾಖ್ಯಾನಕಾರರಾದ ಅಪರಾಜಿತ ಸೂರಿಯವರು ಯಾಪನೀಯ ಪಂಥದ ಮುನಿವರ್ಯರಾಗಿದ್ದರೆಂದು ನಾಥೂರಾಂ ಪ್ರೇಮಿಯವರು ಹೇಳಿದ್ದಾರೆ. ಆದರೆ ಸುಪ್ರಸಿದ್ದ ಮಹಾಪುರಾಣ (ಆದಿಪುರಾಣ) ಕರ್ತೃಗಳಾದ ಸ್ವಾಮಿ ಜಿನಸೇನರು ಪೂರ್ವ ಕವಿಸ್ತುತಿ ಪ್ರಸಂಗದಲ್ಲಿ ಶಿವಾರ್ಯರನ್ನು 'ಶಿವಕೋಟಿ' ಎಂದು ಪ್ರಸ್ತುತಿ ಮಾಡಿದ್ದಾರೆ. ಪ್ರಾಯಿಕವಾಗಿ ಈ (ಶಿವಕೋಟಿ) ಶಿವಾರ್ಯರು, ತೃ. ಭದ್ರ ಬಾಹುಸ್ವಾಮಿಯವರ ಕಾಲದಲ್ಲಿ ದಿಗಂಬರ ಮುನಿ ಪಂಥದಲ್ಲಿ ಸೇರಿಕೊಂಡ ಜಿನಕಲ್ಪ ಪಂಥದ ಮುನಿಗಳ ಮೂಲದವರಾಗಿದ್ದಾರೆ. ಯಾಪನೀಯ ಪಂಥವು ಕ್ರಿ. ಶ. ಸುಮಾರು

೧೪ನೇ ಶತಮಾನದವರೆಗೆ ಉಳಿದುಕೊಂಡಿದ್ದು ಅನಂತರ ಕಣ್ಮರೆಯಾದಂತೆ ಕಂಡುಬರುತ್ತದೆ.ಈ ಪಂಥದವರ ಸಾಹಿತ್ಯವು ದಿಗಂಬರ ಪಂಥದಲ್ಲಿಯೇ ಸುರಕ್ಷಿತವಾಗಿ ಉಳಿದು ಬಂದಿದೆ.

ಟಿಪ್ಪಣಿಗಳು

೧ ಈ ನಿರೂಪಣೆಗೆ ಪಂಡಿತೋತ್ತಮ ಶ್ರೀ ಹೀರಾಲಾಲ್ ಕಪಾಡಿಯಾ ಅವರ 'ದಿ ಕೆನಾನಿಕಲ್ ಲಿಟರೇಚರ್ ಆಫ್ ದಿ ಜೈನಸ್' ಕೃತಿ ಆಧಾರವಾಗಿದೆ.

೨ ದಿಗಂಬರ ಜೈನ ಆಂನಾಯದಲ್ಲಿಯೂ ಇದೇ ರೀತಿಯದಾದ ಹೇಳಿಕೆಯಿದೆ. ಮಾಘನಂದಿ ಆಚಾರ್ಯರ ಶಾಸ್ತ್ರಸಾರ (ಸೂತ್ರ ೪ರ ಬಳಿಕ, ಪು. ೭ ೮ರಲ್ಲಿ)– ದುಸ್ಸಮಸುಸಮೇ ತಿಸಟ್ಠಿಪಮಾಣಸಲಾಯ ಪುರುಸಾಯ ।

ನವಮಾದಿ ಸೋಳಸಂತೇ ಸತ್ತಸುತಿತ್ಥೇ ಸುದಮಭೂಚ್ಛೇದೋ ॥ ೭ ॥

ದುಷಮ–ಸುಷಮಕಾಲದಲ್ಲಿ ೬೩ ಶಲಾಕಾಪುರುಷರು ಕ್ರಮದಿಂದ ಹುಟ್ಟುವರು. ನವಮಾದಿ (೯ನೆಯವರಿಂದ ಮೊದ ಲ್ಗೊಂಡು) ಷೋಡಶಾಂತ್ಯವಾದ (೧೬ ನೆಯವರೊಡನೆ ಕೊನೆ ಗೊಳ್ಳುವ) ಸಪ್ತ(೭) ತೀರ್ಥಾಂತದಲ್ಲಿ (ಪುಷ್ಪದಂತ ರಿಂದ ಧರ್ಮನಾಥರಪರ್ಯಂತದ ೭ ತೀರ್ಥಂಕರರ ತೀರ್ಥಕಾಲದಲ್ಲಿ) ಧರ್ಮ ವ್ಯುಚ್ಛಿತ್ತಿಯುಂ ಸಪ್ತತೀರ್ಥಾಂತರ ವರ್ಧಪಲ್ಯದ ಚತುರ್ಭಾಗೇ ದ್ವಿಭಾಗೇ ತ್ರಿಭಾಗೇ, ದ್ವಿಭಾಗೇ, ಚತುರ್ಭಾಗೇ ಪರಿಯಂತಂ ಓದುವರುಂ, ಕೇಳುವರುಂ, ಹೇಳುವರುಂ ನೆಗಳುವರುಂ ಇಲ್ಲದೆ ಆಗುವುದರಿಂದ ಶ್ರೀ ಜೈನಧರ್ಮವು ವಿಚ್ಛಿನ್ನವಾಗಿ ಪ್ರವರ್ತಿಸಿವುದು. (ಇರುವಂತೆ, ೧೬ನೇ ತೀರ್ಥಂಕರ ಶಾಂತಿ ತೀರ್ಥಂಕರನ ತೀರ್ಥದಾರಭ್ಯ ಧರ್ಮವು ಅವಿಚ್ಛಿನ್ನವಾಗಿ ಉಳಿದುಬಂದಿದೆ)

೩ ಭಗವಾನ್ ಮಹಾವೀರನ ಚರಿತೆಯ ಈ ಭಾಗಕ್ಕೆ ಯುವಾಚಾರ್ಯ ಮಹಾಪ್ರಜ್ಞ್, ಪೂಜ್ಯ ಶ್ರೀ ಮುನಿ ನಥಮಲ್ ಅವರ 'ಜೈನ ದರ್ಶನ್, ಮನನ್ ಔರ್ ಮೀಮಾಂಸಾ'ವು ಮೂಲ ಸ್ರೋತವಾಗಿದೆ. (ಅಧ್ಯಾಯ ೨) ಈ ಕೃತಿಯ ಸಂಪಾದಕರು ಪೂಜ್ಯ ಮುನಿ

ದುಲಹರಾಜ್,ಪ್ರಕಾಶನ 'ಆದರ್ಶ ಸಾಹಿತ್ಯ ಸಂಘ' ಚುರೂ (ರಾಜಾಸ್ಥಾನ) ಅಧ್ಯಾಯ ೨, ಪು. ೫೨ರಿಂದ ಪು. ೬೨ರವರೆಗೆ.

೪ ಇದೇ ಮೇಲೆ ಹೇಳಿದ ಪುಸ್ತಕ ಪು. ೮೯–೯೦.

೫ ಪ್ರೊ. ಸೂ. –ದಿ. ಕೆನಾನಿಕಲ್ ಲಿಟರೇಚರ್ ಆಫ್ ಧಿ ಜೈನಾಸ್–ಪು. ೩ರಿಂದ ಮುಂದೆ ಪುಟ ೮ರ ಒಳಗೆ.

೬ ಮೇಲಿನ ಗ್ರಂಥ ಪು. ೨೧

೭ ಮೆಲಿನ ಗ್ರಂಥ ಪು. ೩೦. ಗಮನಾರ್ಹ ಅಂಶವೆಂದರೆ ದಿಗಂಬರ ಆಮ್ನಾಯದಲ್ಲಿ ಉಪಾಂಗಗಳ ಪರಿಗಣನೆಯಿಲ್ಲವಾಗಿದೆ. ಆದರೆ ದೇಶಭಕ್ತಿಯ ಶ್ರುತಭಕ್ತಿ ದಂಡಕದಲ್ಲಿ 'ಅಂಗೋವಂಗಪ ಇಣ್ಣ. . ' ಎಂಬ ಹೇಳಿಕೆಯಿದ್ದು ಉಪಾಂಗವನ್ನು ಹೆಸರಿಸಿದೆ. ಈ ಬಗ್ಗೆ ವಿಶೇಷ ಚಿಂತನೆಯ ಅಗತ್ಯವಿದೆ.

೮ ಮೇಲಿನ ಗ್ರಂಥದ ಪು. ೩೯. ಇದು ಪ್ರೊ. ವಿಂಟರ್‌ನಿಟ್ಜ ಅವರ ಶೋಧನೆಯಾಧಾರದಂತೆ ೧. ನಿಶೀಥ, ೨. ಮಹಾನಿಶೀಥ ೩. ವ್ಯವಹಾರ, ೪. ದಶಾಶ್ರುತ ಸ್ಕಂದ ೫. ಬೃಹತ್ಕಲ್ಪ ಮತ್ತು ೬. ಜೀತಕಲ್ಪ ಇವುಗಳನ್ನು ಛೇದ ಸೂತ್ರಗಳೆಂದು ಪರಿಗಣನೆ ಮಾಡಲಾಗಿದ್ದಿತು. ಮೇಲಿನ ಗ್ರಂಥ ಪು. ೩೭.

೯ ಮೇಲಿನ ಗ್ರಂಥ ಪು. ೪೩. ಈ ಮೂಲ ಸೂತ್ರಗಳನ್ನು ಹೇಳುವಲ್ಲಿ ಮತ್ತು ಇವುಗಳ ಸಂಖ್ಯೆಯನ್ನು ಹೇಳುವಲ್ಲಿಯೂ ಮತಭೇದವಿದೆ. ಪಿಂಡನಿರ್ಯುಕ್ತಿ ಮತ್ತು ಓಘನಿರ್ಯುಕ್ತಿಗಳನ್ನು ಪ್ರತ್ಯೇಕವಾಗಿ ಗಣನೆ ಮಾಡಿ ೫ ಮೂಲಸೂತ್ರಗಳನ್ನು ಹೇಳಿದೆ. ಕೆಲವಡೆ 'ಪಕ್ಖಿಯ ಸುತ್ತ'ವನ್ನು ಸೇರಿಸಿ ಆರುಮೂಲ ಸೂತ್ರಗಳ ಗಣನೆ ಮಾಡಲಾಗಿದೆ.

೧೦ ಮೇಲೆ ಹೇಳಿದ ಗ್ರಂಥ ಪು. ೫೦, ಇವುಗಳನ್ನು ಹೇಳುವಲ್ಲಿಯೂ ಮತಭೇದವಿದೆ.

೧೧ ಮೇಲೆ ಹೇಳಿದ ಗ್ರಂಥ ಪು. ೫೮

೧೨ ಮೇಲಿನ ಗ್ರಂಥ ಪು. ೮೦, ಅಡಿ ಟಿಪ್ಪಣಿ ೧.

ದಿಗಂಬರರ ಪಂಥದ ಪ್ರಕಾರ ಇಂದ್ರಭೂತಿ ಗೌತಮ ಗಣಧರನು ದ್ವಾದಶಾಂಗವನ್ನು ರಚನೆ ಮಾಡಿದ ಬಳಿಕ ಅದನ್ನು ಸುಧರ್ಮಸ್ವಾಮಿಗೆ ಬೋಧಿಸಿದನು. ನೋಡಿ–ಷಟಖಂಡಾಗಮ,–ಸತ್ಪ್ರರೂಪಣಾ, ಖಂಡ ೧, ಪುಸ್ತಕ ೧, ಭಾಗ ೧, ಸಂಪಾದನೆ–ಶ್ರೀ ಫೂಲಚಂದ್ರಸಿದ್ಧಾಂತ ಚಕ್ರವರ್ತಿ ಶ್ಲೋಕ ೬೧ರ ಬಳಿಕ 'ತೇಣ ವಿ ಗೋದಮೇಣ ದುವಿಹಮಹಿ ಸುದಣಾಣಂ ಲೋಹಜ್ಜಸ್ಸ–ಸಂಚಾರಿದಂ'–ಲೋಹಜ್ಜ ಎಂಬುದು ಸುಧರ್ಮಸ್ವಾಮಿಯುಅ ಮತ್ತೊಂದು ಹೆಸರು. ಶ್ರ. ಬೆಳಗುಳದ ೧ನೇ ಶಾಸನದಲ್ಲಿಯೂ ಈ ಹೆಸರೇ ಇದೆ. ಶ್ರುತಾವತಾರದಲ್ಲಿ 'ಸುಧರ್ಮ' ಎಂಬ ಹೆಸರಿದೆ. (ಶ್ಲೋಕ ೬೭) ಇದರನುಗುಣವಾಗಿ ದಿಗಂಬರ ಪಂಥದ ಆಗಮ ಗ್ರಂಥಗಳ ಮೂಲಾಧಾರವು ಗೌತಮಗಣಧರನಿಂದ ಭ. ಮಹಾವೀರನ ದಿವ್ಯವಾಣಿ ಪ್ರಸರಣಗೊಂಡ ಸಮಯದಲ್ಲಿ ರಚಿತವಾದ ದ್ವಾದಶಾಂಗವೇ ಆಗಿದೆ.

೧೩ ಹೇಮಚಂದ್ರಾಚಾರ್ಯರ ಪರಿಶಿಷ್ಟ ಪರ್ವ, ಸರ್ಗ–೪ ಶ್ಲೋ. ೫೬ ರಿಂದ ೬೧.

೧೪ ಮೇಲಿನ ಪ. ಪ. ಸರ್ಗ ೪, ಶ್ಲೋ, ೫೧–೫೩.

೧೫ ಅನುಕ್ರಮವನ್ನು ಖರತರಗಚ್ಛಪಟ್ಟಾವಲಿ ಆಧಾರದಿಂದ ಕೊಡಲಾಗಿದೆ. (ಇಂಡಿಯನ್ ಆಂಟಿಕ್ವೆರಿ ವಾಲ್ಯೂಂ ೧೧, ೧೮೮೨ ಪು. ೨೪೫–೨೫೬)

೧೬ ಈ ಐತಿಹ್ಯವನ್ನು 'ಶ್ರವಣ ಭಗವಾನ್ ಮಹಾವೀರ ಗ್ರಂ . ಭಾ. ೫, ವಿಭಾಗ ೧, ಸ್ಥವಿರಾವಲಿ ಪು. ಸಂ ೨೧೦ರಿಂದ ೨೧೭ ಮತ್ತು ೨೩೨ ರಿಂದ ೨೪೩ರಿಂದ ಸಂಕಲನ ಮಾಡಿ ಇಂಗ್ಲಿಷ್ ಭಾಷೆಯಿಂದ ಕನ್ನಡಕ್ಕೆ ತರ್ಜಮೆ ಮಾಡಲಾಗಿದೆ. ಈ ಸಂಗತಿಯನ್ನು ಹೇಮಚಂದ್ರಾಚಾರ್ಯರು ತಮ್ಮ ಪರಿಷಿಷ್ಟ ಪರ್ವ–೯ ನೇ ಸರ್ಗದಲ್ಲಿ ೫೫ನೇ ಶ್ಲೋಕದಾರಭ್ಯ ಸರ್ಗದ ಕೊನೆಯವರಿಗೆ ಹೇಳಿದ್ದಾರೆ.

೧೭ ಶ್ರೀ ಮೇರುತುಂಗಾಚಾರ್ಯ ವಿರಚಿತ 'ಪ್ರಬಂಧ ಚಿಂತಾಮಣಿ' ಪ್ರಕೀರ್ಣಕ ಪ್ರಬಂಧ ಸಿಂಘೀಜೈನಗ್ರಂಥಮಾಲಾಪ್ರಕಾಶನ, ಪು. ೧೧೮– ೧೧೯ ಪೂ. ಸೂ. ದಿ, ಕೆ. ಲಿ. ಆಫ್. ದಿ ಜೈನಸ್, ಚ್ಯಾಪ್ಟರ್ ೪, ಪು. ಸಂ. ೭೧–೭೩.

೧೮ ಪೂ. ಸೂ. ದಿ. ಕೆ. ಲಿ. ಆಫ್ ದಿ ಜೈನಸ್. ಚಾಪ್ಟರ್ ೪, ಪು. ೭೫

೧೯ "ಏವಂ ಚ ಶ್ರೀ ಮಹಾವೀರಮಕ್ತೇರ್ವರ್ಷಶತೇ ಗತೇ ।

ಪಂಚ ಪಂಚಾಶದಧೀಕೇ ಚಂದ್ರಗುಪ್ತೋಭವನ್ನೃಪಃ ॥ (ಸರ್ಗ–೮, ಶ್ಲೋ.೩೩೯)

೨೦ 'ಏವಂ ಚ ಮಹಾವೀರಮುಕ್ತಿ ಸಮಯಾದೋ ಪಂಭವಣ ವರಿಸ ಸಏ ಣುಚಾಣೆ (ಉಚ್ಛಿಣ್ಣೇ) ನಂದವಂಶೇ ಚಂದಗುತ್ತೋ ರಾಯ ಜಾಉತ್ತಿ '. ಇದನ್ನು ಹೆರ್ಮನ್ ಜಾಕೋಬಿಯವರಿಂದ ಸಂಪಾದಿತ (ದ್ವೀತಿಯ ಸಂಸ್ಕರಣ–ಕಲ್ಕತ್ತ ೧೯೩೨) ಕೃತಿ ಬಿಬ್ಲಿಯೋಥಿಕಾ ಇಂಡಿಕಾ ವರ್ಕ್ ನಂ. ೯೬ 'ಸ್ಥವಿರಾವಲೀ ಚರಿತ'ಯ 'ಪರಿಶಿಷ್ಟ ಪರ್ವ'ದ ಮುನ್ನುಡಿ, ಪುಟ **XX** ಯಿಂದ ಉಲ್ಲೇಖಿಸಿದೆ.

೨೧ ನೋಡಿ. 'ಸನ್ಮತಿ ಶ್ರೀವಿಹಾರ'–(ಜೈನಧರ್ಮದ ಪ್ರಾಚೀನ ಇತಿಹಾಸ) ಎಂ. ಡಿ. ವಸಂತರಾಜ್, ಪು. ಸಂ. ೧೬೫–೧೯೪ ಮತ್ತು ಪು. ೩೦೦ರಿಂದ ೩೩೭.

೨೨ 'ವಿಕ್ರಮಾದಿತ್ಯ ಆಫ್ ಉಜ್ಜೈನ್' ಪು. ೩.

೨೩ ಈ ಸಂಗತಿಯ ವಿಶೇಷ ಪರಿಶೀಲನೆಯ ಬಗ್ಗೆ ಪೂ. ಸೂ. 'ಸನ್ಮತಿ ಶ್ರೀವಿಹಾರ' ಪು. ಸಂ. ೨೩೯ ರಿಂದ ೨೪೩ರವರೆಗೆ ನೋಡಿ.

೨೪ ತಜ್ಞರ ಬಹುಮತದಂತೆ, ಆಚಾರಾಂಗ ಸೂತ್ರದ ಭಾಷೆಯು ಕ್ರಿ. ಶ. ೧ನೇ ವಾ ೨ನೇಶತಮಾನ ಕಾಲದ್ದಾಗಿದೆ. ಡಾ. ಹೀರಾಲಾಲ್ ಜೈನರವರು ಕ್ರಿ. ಶ. ೨ನೇ ಶತಮಾನದ್ದೆಂದು ಅಭಿಪ್ರಾಯ ಪಟ್ಟಿದ್ದಾರೆ. 'ಭಾರತೀಯ ಸಂಸ್ಕೃತಿಗೆ ಜೈನ ಧರ್ಮದ ಕೊಡುಗೆ' ಪು. ೮೬

೨೫ ಬೃಹತಕ್ಕಥಾಕೋಶ–ಭದ್ರಬಾಹುಕಥನ 'ಅರ್ಧಪಾಲಕ' ಕನ್ನಡ ವಡ್ಡಾರಾಧನೆ 'ಅರ್ಧಗಪ್ಪಡಿಗ' ಪೂ.ಸೂ. ದಿ. ಕೆ. ಲಿ. ಆಫ್. ದಿ ಜೈನಸ್ ಪು. ೬೧ ನೋಡಿ ಅ. ಟಿ. ೩ ಮತ್ತು ೪.

೨೬ ಮೇಲೆ ಸೂಚಿಸಿರುವ ಗ್ರಂಥ ಪು. ೬೩. ಸಾಧು ಸಮ್ಮೇಳನದಲ್ಲಿ ಸಂಮಿಳಿತರಾದ ಸ್ಕಾಂದಿಲೀಯ ಸಂತತಿಯವರ ಈ ಸಮ್ಮೇಳನವು ವೀ. ನಿ. ಸಂ. ೯೮೦ರಲ್ಲಿ ನಡೆದಿದೆಯಾದರೆ ನಾಗಾರ್ಜುನೀಯರ ಸಂಮೇಳನವು ೯೯೩ರಲ್ಲಿ ನಡೆಯಿತೆಂಬ ಅಭಿಪ್ರಾಯವಿದೆ.

ಅಟಿ. ೧ರಲ್ಲಿ "ಶ್ರೀದೇವರ್ಧಿಗಣಿಕ್ಷಮಾಶ್ರಮಣೇನ ಶ್ರೀವೀರಾದಶೀತ್ಯಧಿಕ ನವಶತ (೯೮೦) ವರ್ಷೇ ಜಾತೇನ ದ್ವಾದಶವರ್ಷಿಯದುರ್ಭಿಕ್ಷವಶಾದ್ ಬಹುತರ ಸಾಧು ವ್ಯಾಪತ್ತೌ ಬಹುಶ್ರುತವಿಚ್ಛಿತ್ತೌ ಚ ಜಾತಾಯಾಂ. . ಭವಿಷ್ಯದ್ ಭವ್ಯ ಲೋಕೋಪಕಾರಾಯ ಶ್ರುತ ಭಕ್ತಯೇ ಚ ಶ್ರೀ ಸಂಘಾಗ್ರಹಾದಮೃತಾವಶಿಷ್ಟ ತದಾಕಾಲೀನ ಸರ್ವಸಾಧೂನ್ ವಲಭ್ಯಾ ಮಾಕಾರ್ಯತನ್ಮು ಖಾದವಿಚ್ಛಿನ್ನವಿಶಿಷ್ಟಾನ್ ನ್ಯೂನಾಧಿಕಾನ್ ತ್ರುಟಿತಾನುತ್ರುಟಿತಾನಾಗ ಮಾಲಾಪಕಾನನುಕ್ರಮೇಣ ಸ್ವಮತ್ಯಾ ಸಂಕಲಯ್ಯ ಪುಸ್ತಕಾರೂಢಾಃ, ಕೃತಾಃ ತತೋಮೂಲತೋ ಗಣಧರಭಾಷಿತಾನಾಮಪಿ ಆಗಮಾನಾಂ ಕರ್ತಾ ಶ್ರೀ ದೇವರ್ಧಿಗಣಿಕ್ಷಮಾ ಶ್ರಮಣ ಏವಜಾತಃ"–ಸಮಯ ಸುಂದರ ಸೂರಿ ಅವರ 'ಸಾಮಾಚಾರೀಶತಕ'

೨೭ 'ಯೋನಿಪ್ರಾಭೃತಂ ವೀರಾತ್ ೬೦೦ ಧಾರಸೇನಮ್' (ಬೃಹಟ್ಟಿಪ್ಪಣಿಕಾ ಜೈನ ಸಾಹಿತ್ಯ ಸಂಶೋದನ ೧, ೨ ಪರಿಶಿಷ್ಟ ); ಷಟ್ಖಂಡಾಗಮದ ಪ್ರಸ್ತಾವನೆ. ಪು. ೩೦ ಅ. ಟಿ. ಇದರ ಸಂಬಂಧವಾಗಿ 'ಅನೇಕಾಂತ' ವರ್ಷ೨, ಕಿರಣ ೯ರಲ್ಲಿಪಂ. ಜುಗುಲ್ ಕಿಶೋರ್ ಮುಖ್ತಾರರ ಲೇಖನವನ್ನು ನೋಡಬೇಕು.

೨೮ ಜೋಣಿಪಾಹುಡೇ ಭಣಿದ ಮಂತತಂತ ಸತ್ತೀ ಓ ಪೊಗ್ಗಲಾಣುಭಾಗೊತ್ತಿ ಘೇತ್ತವ್ವೋ, ಡಾ. ಹೀರಾಲಾಲ್ ಜೈನ–ಷ್ಟಟ್ಖಂಡಾಗಮ ಪ್ರಸ್ತಾವನಾ, ಪು. ೩೦

೨೯ ನೋಡಿ ಬೃಹತ್ಕಲ್ಪಭಾಷ್ಯ (೧,೧೩೦೩, ೨, ೨೬೮೧) ವ್ಯವಹಾರ ಭಾಷ್ಯ (೧. ಪು. ೫೮); ಪಿಂಡ ನಿರ್ಯುಕ್ತಿ ಭಾಷ್ಯ ೪೪–೪೬; ದಶವೈಕಾಲಿಕ ಚೂರ್ಣಿ ೧.ಪು. ೪೪. ೬೧೬; ಸೂತ್ರ ಕೃತಾಂಗಟೀಕಾ ೮.ಪು.೧೬೫ ಅ ; ಜಿನೇಶ್ವರ ಸೂರಿ –ಕಥಾಕೋಷ ಪ್ರಕರಣ.

೩೦ ಪ್ರೊ ಹೀರಾಲಾಲ್ ರಸಿಕದಾಸ್ ಕಪಾಡಿಯಾರವರ ಆಗಮೋನಂ ದಿಗ್ದರ್ಶನ, ಪು. ೨೩೪–೨೩೫.

೩೧ ಕೆಲವೆಡೆ ದಸಾ ಮೆತ್ತು ಕಪ್ಪಗಳನ್ನು ಒಂದು ಎಂದು ಅಂಗೀಕರಿಸಿದೆ, ಮತ್ತೆ ಕೆಲವೆಡೆ ವ್ಯವಹಾರ ಮತ್ತು ಕಪ್ಪವನ್ನು ಒಂದು ಎಂದು ಗ್ರಹಿಸಿ ಪಂಚಕಪ್ಪ ಮತ್ತು ಜೀತಕಪ್ಪಗಳನ್ನು ಪ್ರತ್ಯೇಕವಾದವುಗಳೆಂದು ಮಾನ್ಯ ಮಾಡಲಾಗಿದೆ. ಆರು ಎಂಬ ಸಂಖ್ಯೆಯ ಪೂರಣಕ್ಕಾಗಿ ಪ್ರಾಯಶಃ ಪಂಚಕಲ್ಪದ ಸ್ಠಾನದಲ್ಲಿ ಜೀತಕಲ್ಪವನ್ನು ಅಂಗೀಕರಿಸಿರಬಹುದಾದ ಸಂಭವವಿದೆ. 'ಸ್ಥಾನಕ ವಾಸೀ ಸಂಪ್ರದಾಯದಲ್ಲಿ ನಿಸೀಹ, ಕಪ್ಪ, ವ್ಯವಹರ ಮತ್ತು ದಸಾಸುಯಕ್ಖಂದ ಈ ನಾಲ್ಕನ್ನು ಮಾತ್ರ ಛೇಧ ಸೂತ್ರವೆಂದು ಅಂಗೀಕರಿಸಿದೆ.

೩೨ ಜಂ ಹೋತಿ ಅಪ್ಪಗಾಸಂ ತಂ ತು ನಿಸೀಹಂ ತಿ ಲೋಗ ಸಂಸಿದ್ದಂ।
ಜಂ ಅಪ್ಪಗಾಸಧಮ್ಮಂ ಅಣ್ಣಂ ಪಿ ತಯಂ ನಿಸೀಧತಿ ॥ (ನಿಶೀಥ ಸೂತ್ರ– ಭಾಷ್ಯ ೬೯)

೩೩ ಮೂಲಾಚಾರ ಎ೫.೧೯೦ಏ ಶಿವಾರ್ಯರ ಭಗವತೀ ಆರಾಧನಗಳಲ್ಲಿ ಗಾಹೆ ೧೩೦ಏ ಆಯಾರ ಜೀಯಕಪ್ಪದ ಉಲ್ಲೇಖವಿದೆ.

೩೪ ಸಮವಾಯಾಂಗ ಸೂತ್ರದಲ್ಲಿ ಉಲ್ಲೀಖಿತವಿರುವ ಉತ್ತರಾಧ್ಯಯನದ ೩೬ ಅಧ್ಯಯನಗಳಿಂದ ಸ್ವಲ್ಪ ಭಿನ್ನತೆಯುಳ್ಳದ್ದಾಗಿದೆ.

ಇಲ್ಲಿ ೨೨ ಪರೀಷಹಗಳ ಉಲ್ಲೇಖವಿದೆ. ಬೌದ್ದ ಸುತ್ತ ನಿಪಾತದಲ್ಲಿ (೩.೧೨) ಶೀತ, ಉಷ್ಣ, ಕ್ಷುದಾ, ಪಿಪಾಸಾ, ವಾತ, ಆತಪ, ದಂಶ, ಮತ್ತು ಸರೀಸೃಪಗಳನ್ನು ಎದುರಿಸಬೇಕೆಂಬ ಉಲ್ಲೇಖವಿದೆ.

೩೬ ಬೆಕ್ಕು.

೩೭ ಭಾಸ್ಕರಂ.

೩೮ ಆವಶ್ಯ–ಹರಿಭದ್ರ ಟೀಕಾ. ಪು. ೪೬೫

೩೯ ಇಂಡಿಯನ್ ಆಂಟಿಕ್ವೆರಿ ವಾಲ್ಯೂಂ XI ೧೮೮೨–ಪು. ೨೪೫–೨೫೬. "ದಶಪೂರ್ವಾಣಿ ವಸ್ತುದ್ವಯೇನ ನ್ಯೂನಾನಿ ಸೂತ್ರತೋರ್ಥಶ್ಚ ಪಪಾಠ, ಅನ್ಯಾನಿ ಚತ್ವಾರಿ ಪೂರ್ವಾಣಿ ತುಸೂತ್ರತ ಏವ ಅಧೀತವಾನ್ನಾರ್ಥತ ಇತಿ ವೃದ್ಧಪ್ರವಾದಃ'

೪೦ ಪೂ. ಸೂ. ದಿ.ಕೆ. ಲಿ. ಆಫ್. ದಿಜೈನಸ್. ಪು.ಸಂ.೧೭ ಅ. ಟಿ. ೨ ಈಸಂಗತಿಯನ್ನು ಸುಬೊಧಿಕಾ(ಪು. ೧೬೯)ದಿಂದ ಉಲ್ಲೇಖಿಸಿದ್ದಾರೆ.

೪೧ ಪೂ. ಸೂ. ದಿ. ಕೆ.ಲಿ. ಆಫ್ ದಿಜೈನಸ್ ಪು. ೭೮. ೭೯.

೪೨ ಕೇಶಿಕುಮಾರ ಪ್ರಶ್ನೇ ೨' ಶ್ರಮಣಭಗವಾನ್ ಮಹಾವೀರ' ಪು. ಸಂ. ೮೩ ಉತ್ತರಾಧ್ಯಯನ...

ಅಚೇಲಗೋ ಅ ಜೋಧಮ್ಮೋ ಜೋ ಇವೋ ಸಂತರುತ್ತರೋ ।

ದೇಸಿಓ ವದ್ಧಮಣೇಣ ಪಾಸೇಣ ಯ ಮಹಾಯಸಾ ॥೨೯॥

ಏಗಕಜ್ಜ ಪವನ್ನಾಣಂ ವಿಸೇಸೇ ಕಿಂ ಕಾರಣಂ ।

ಲಿಂಗೇ ದುಹೇ ಮೇಹಾವೀ ಕಹಂ ವಿಪ್ಪಚ್ಚಓ ನತೇ ॥ ೩೦ ॥

೪೩ ಶ್ರೀ ಧರ್ಮಾನಂದ ಕೋ ಸಾಂಬಿಯವರ 'ಗೌತಮ ಬುದ್ಧ' ದ ಶ್ರೀ ಆದ್ಯರಂಗಾಚಾರ್ಯರ ಕನ್ನಡಾನುವಾದ ಪು. ಸಂ. ೩೫–೭೭ರಲ್ಲಿ ಹೇಳಿರುವಂತೆ ಈ ಸಂಗತಿಯನ್ನು ಮಜ್ಝಿಮನಿಕಾಯ ಮಹಾಸೀಹನಾದ ಸುತ್ತ ೧೨ರಲ್ಲಿಹೇಳಿದೆ.

೪೪ ಇದೇ ಸಂಗತಿಯನ್ನು ಮತ್ತೂ ಹೆಚ್ಚು ವಿಶದವಾಗಿ ಶ್ರೇಣಿಕ ಬಿಂಬಸಾರ ,ಭ ಬುದ್ಧ ಮತ್ತು ಭ.ಮಹಾವೀರರ ಪರಸ್ಪರ ವಯೋಮಾನದ ಅಂತರಗಳನು ಹೇಳಿ ಸನ್ಮತಿ ಶ್ರೀ ವಿಹಾರದಲ್ಲಿ (ಪು.ಸಂ. ೧೭)ವಿವರಿಸಿದೆ.

೪೫ ಸಿರಿಪಾಸಣಾಹತಿತ್ಥೇ ಸರಯೂತೀರೇ ಪಲಾಸ ಣಯರತ್ಥೋ ।

ಪಿಹಿಯಾಸವಸ್ಸ ಸಿಸ್ಸೋ ಮಹಾಸುದೋ ಬುಡ್ಡಕಿತ್ತಿಮುಣೀ ॥೬॥

ತಿಮಿಪೂರಣಾಸಣೇಹಿಂ ಅಹಿಗಯ ಪಬಜ್ಜಾಓ ಪರಿಬ್ಬಟ್ಠೋ।

ರತ್ತಂಬರಂ ಧರಿತ್ತಾ ಪವಟ್ಟಿಯಂ ತೇಣ ಏಯಂತಂ ॥೭ ॥ ದೇವಸೇನರ 'ದರ್ಶನಸಾರ'

೪೬ ಪಾಟ್ಣಾದಲ್ಲಿ ದೊರೆತು ಸದ್ಯ ಲಕ್ನೋ ಪ್ರಾಚೀನ ವಸ್ತುಸಂಗ್ರಹಾಲಯದಲ್ಲಿರುವ ಮೂರ್ತಿಗಳು, ಉದಯಗಿರಿ- ಖಂಡಗಿರಿ ಮೂರ್ತಿಗಳು, ನಿಜಾಮಾಬಾದಿನ ಸಮೀಪದ ತೇರಾಗುಹೆಯಪಾರ್ಶ್ವನಾಥ ಮೂರ್ತಿಗಳು ಶ್ರವಣಬೆಳಗುಳದ ಚಂದ್ರಗಿರಿಯ ಚಂದ್ರಗುಪ್ತ ಬಸದಿಯ ಪಾರ್ಶ್ವನಾಥ ಮೂರ್ತಿ ತಮಿಳುನಾಡಿನ ಪಾರ್ಶ್ವನಾಥ 'ಸುಪಾರ್ಶ್ವನಾಥ' ಮೂರ್ತಿಗಳನ್ನು ಉದಾಹರಣೆಯಾಗಿ ಕಾಣಬಹುದು.

೪೭ ಮಹಾಪುರಾನ ಪರ್ವ -೨೦, ಶ್ಲೋ ೧೭೧, ೧೭೨.

೪೮ ಇದೇ ಗ್ರಂಥ, ಪರ್ವ ೨೧, ಶ್ಲೋ ೭೮, ೭೯.

೪೯ ಮೂಲಾಚಾರ, ಷಡಾವಶ್ಯಾಧಿಕಾರ ಶ್ಲೋ. ೩೬ ೧೨೯.

೫೦ ಪ್ರಾಯಶಃ ಈ ಹೇಳಿಕೆ ಅತ್ಯಂತ ಪ್ರಾಚೀನ ಸ್ರೋತ ಕ್ರಿ. ಶ. ೬ನೇ ಶತಮಾನದ ಜಿನಭದ್ರಗಣಿಯವರ 'ವಿಶೇಷಾವಶ್ಯಭಾಷ್ಯ'ವೆಂದು ಕಂಡು ಬರುತ್ತದೆ. ಗಾಥೆ ೨೫೯೩.

ಗಣಪರಮೋಹಿ-ಪುಲಾಏ, ಆಹಾರಗ-ಖವಣ ಉವಸಮೇ ಕಪ್ಪೇ ।

ಸಂಜಮತಿಯ ಕೇವಲಿ-ಸಿಜ್ಝಣಾಲಯ ಜಂಬುಮ್ಮಿ ವುಚ್ಚಿನ್ನಾ ॥

೫೧ 'ನಂದೀಸೂತ್ರ' ಅಖಿಲಭಾರತೀಯ ಶ್ವೇತಾಂಬರ ಸ್ಥಾ. ವಾ. ಮು. ರಾಜಕೋಟ್, ೧೯೫೮ರ ಪ್ರಕಾಶನ 'ಆವಶ್ಯಕ'ದಲ್ಲಿಯೂ ಇದರ ಬಗ್ಗೆ ಹೇಳಿಕೆಯಿದೆಯೆಂದು ಸೂಚಿಸಿದೆ. ಇಂಡಿಯನ್ ಆಂಟಿಕ್ವೆರಿ ವಾಲ್ಯೂಂ ೧೧. ೧೮೮೨.

೫೨ ಇದೇ ಮೇಲೆ ಹೇಳಿದ 'ಇಂಡಿಯನ್ ಆಂಟಿಕ್ವೆರಿ'

೫೩ 'ಜೈನ ಸೂತ್ರಸ್' ಪ್ರಾಕೃತದಿಂದ ಅನುವಾದ ಹೆರ್ಮನ್ ಜಾಕೋಬಿಯವರಿಂದ ಪಾರ್ಟ್ ೯೧,ದಿ ಆರಾಚಾರಾಂಗಸೂತ್ರ, ದಿ ಕಲ್ಪಸೂತ್ರ, ಮೋತಿಲಾಲ್ ಬನಾರಸೀದಾಸ್ ಮರು ಪ್ರಕಾಶನ,೧೯೮೦. ಬುಕ್ ೧. ಲೆಕ್ಚರ್ ೬, ಲೆಸನ್೩, ಪು. ೫೭,ಅಡಿ ಟಿಪ್ಪಣಿ ೨.

೫೪ ಹಿಂದೆ ಹೇಳಿರುವ ದಿ. ಕೆ. ಲಿ. ಆಫ್ ದಿ ಜೈನಸ್. ಪು. ೬೩.

೫೫ ಮೇಲ್ಕಾಣಿಸಿರುವ ಗ್ರಂಥವು ಪು. ಸಂಖ್ಯೆ ೬೩.

೫೬ ಪೂ. ಸೂ. ಜೈ. ಧ. ಮ. ಔ. ಮೀ. ಪು. ೧೦೨.ಮತ್ತು ಇದೇ ಗಂಥ ಪು.೧೦೩ ಅ. ಟಿ. ೧.

ಆಚಾರಾಂಗ ವೃತ್ತಿ, ಪತ್ರ.

ಜೋ ವಿ ದುವಸ್ಥ ತಿವತ್ಥೋ, ಏಗೇಣ ಅಚೇಲಗೋ ವ ಸಂಥರಇ ।

ಣ ಹು ತೇ ಹೀಲತಿ ಪರಂ ಸವ್ವೇಪಿ ಯ ತೇ ಜಿಣಾಣಾಎ ॥೧॥

ಜೇ ಖಲು ವಿಸರಿಸಕಪ್ಪಾ ಸಂಘಯಣ ಧಿಇಯಾದಿ ಕಾರಣಂ ಪಪ್ಪ।

ಣಾವಮನ್ನ ಇ ಣ ಯ ಹೀಣಂ ಅಪ್ಪಾಣಂ ಮನ್ನಈ ತೇಹಿಂ ॥೨॥

ಸವ್ವೇ ವಿ ಜಿಣಾಣಾಏ ಜಹಾವಿಹಿಂ ಕಮ್ಮ ಖವಣಟ್ಠಾಏ ।

ವಿಹರಂತಿ ಉಜ್ಜಯಾ ಖಲು ಸಮ್ಮಂ ಅಭಿಜಾಣಇ ಏವಂ ॥೩ ॥

೫೭ ಶ್ರೀ ಕಾಮತಾಪ್ರಸಾದ್ ಜೈನ ಅವರು ಇದೇ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ನೋಡಿ ಜೈ. ಸಿ. ಭಾಸ್ಕರ, ಡಿಸೆಂಬರ್ ೧೯೪೩ ಭಾಗ ೧೦ ಕಿರಣ ೨ ಪು. ೮೨.

೫೮ ಪೂ. ಸೂ. ಜೈ. ಧ. ಮ. ಮೀ. ಪು. ೯೫.

೫೯ ಭಟ್ಟಾರಕ ದೇವಸೇನರ ದರ್ಶನಸಾರ–ಬಾಂಬೆ ಬ್ರಾಂಚ್ ರಾಯಲ್ ಏಸಿಯಾಟಿಕ್ ಸೊಸೈಟಿ ಜರ್ನಲ್ ವಾಲ್ಯೂಂXVII–೧೮೮೭–ಪು. ೩೭೪.

ಛತ್ತಿಸೇ ವರಿಸ ಏ ವಿಕ್ಕಮರಾಯಸ್ಸ ಮರಣಪತ್ತಸ್ಸ।

ಸೋರಹೆ (ಟ್ಠೇ) ವಲಹೀಏ ಸೇವಡಸಂಘೋ ಸಮುಪ್ಪಣ್ಣೋ ॥೧೧॥

ಸಿರಿಭದ್ದ ಬಾಹುಗಣೇಣೋ ಸೀಸೋ ಣಾಮೇಣ ಸಂತಿ ಆಇರಿಊ ।

ತಸ್ಸ ಯ ಸೀಸೋ ದುಟ್ಠೋ ಜಿಣಚಂದೋ ಮಂದಚಾರಿತ್ತೋ ॥೧೨॥

ತೇಣ ಕಯಂ ಮದಮೇದಂ ಇತ್ಥೀಣಂ ಅತ್ಥಿ ತಬ್ಬವೇ ಮೊಕ್ಖೋ ।

ಕೇವಲಣಾಣೇಣ ಪುಣೋ ಅಟ್ಠರಕಾಣಂ (?) ತಹಾರೋಊ ॥೧೩॥

ಅಂಬರಸಹಿಊ ವಿ ಜಈ ಸಿಜ್ಝಇ ವೀರಸ್ಸ ಗಬ್ಬ ಚಾರಿತ್ತಂ ।

ಪರಲಿಂಗೇ ವಿ ಯ ಮಯತೀ ಪಾಸುಯ ಭೋಜಂ ಚ ಸವ್ವತ್ಥ ॥೧೪ ॥

ಅಣ್ಣಂ ಚ ಏವಮಾಈ ಆಮಮಲುಟ್ಠಾಇ ಮಿಚ್ಛಸತ್ಥಾ ಇಂ ।

ವಿರಿಇತ್ತಾ ಅಪ್ಪಾಣಂ ಪಡಿಟ್ಠ್ವಿಯಂ ಪಢಮಮವಿ ಣಿರವಿ ॥೧೫ ॥

೬೦ ಇಂಡಿಯನ್ ಆಂಟಿಕ್ವೆರಿ ವಲ್ಯೂಂ XXI ಫೆಬ್ರುವರಿ ೧೮೯೨, ಮಾರ್ಚ್ ೧೮೯೨ ಪು.೪೯.

೬೧ ಜೈನ ದರ್ಶನ್ ಮನನ್ ಔರ್ ಮೀಮಾಂಸಾ ಪು.೧೦೨.

೬೨ ಇದೇ ಮೇಲೆ ಹೇಳಿದ ಗ್ರಂಥ ಪು. ಸಂ.೧೦೦

೬೩

೬೪ ಹಿಂದೆ ಹೇಳಿರುವ ಇಂಡಿಯನ್ ಆಂಟಿಕ್ವೆರಿ ಪು.೭೨.

೬೫ ಜೈನ ಸಿದ್ದಾಂತ ಭಾಸ್ಕರ (ಜೈನ ಆಂಟಿಕ್ವೆರಿ) ಡಿಸೆಂಬರ ೧೯೪೩ ಭಾಗ ೧೦, ಕಿರಣ ೨ ಪು. ೮೦ ಅ. ಟಿ. ೧

೬೬ ಆಚಾರಾಂಗ ಮತ್ತು ಕಲ್ಪ ಸೂತ್ರಗಳ ಅನುವಾದ ಹೆರ್ಮನ್ ಜಾಕೋಬಿಯವರಿಂದ 'ಜೈನಸೂತ್ರಸ್' ಪು. ಸಂ. ೨೯೪ ಅ. ಟಿ. ೨. ಪ್ಯಾರಾ ೩. ಇಲ್ಲಿ 'ದುರ್ಗಯ ಕೃಷ್ಣ, ಕೌಣಕ'ಎಂದು ಹೆಸರಿದೆ.

೬೭ ಇದೇ ಮೇಲಿನ ಗ್ರಂಥ ಪು. ಸಂ. ೨೯೪.

೬೮ ನಂದಿ ಆಮ್ನಾಯ ಪಟ್ಟಾವಲಿ. ಪು. ಸೂ. ಇಂಡಿಯನ್ ಆಂಟಿಕ್ವೆರಿ ಪು. ೬೭–೬೮.

೬೯ ಇಂಡಿಯನ್ ಆಂಟಿಕ್ವೆರಿ ವಾಲ್ಯೂಂ II ಪು. ೩೬೨ ಪುಷ್ಪಮಿತ್ರ ಅಥವಾ ಪುಷ್ಯಮಿತ್ರ. ಜಿ. ಬುಲ್ಹರ್‌ಗಾಹೆಗಳು ಮೇರುತುಂಗರ ವಿಚಾರ ಶ್ರೇಣಿಯಿಂದ(?) (ಧರ್ಮಸಾಗರ ಮತ್ತು ಜಯ ವಿಜಯ ಗಣಿ)

೭೦ ಪೂ. ಸೂ. ದೇವಸೇನರ ದರ್ಶನಸಾರ. ಗಾಹೆ_

ಕಲ್ಲಾಣೇ ವರಣಯರೇ ದುಣಿಸಯೇ ಪಂಚಉತ್ತರೇ ಜಾದೋ ।

ಜಾಉಲಿಯಸಂಘಭೇಊ ಸಿರಿಕಲಸಾದೋ ಹು ಸೇವಡದೋ ॥ ೨೯ ॥

೭೧ ಜೈನ ಸಾಹಿತ್ಯ ಔರ್ ಇತಿಹಾಸ್ (ಪು. ೨೩–೪೦)

೭೨ ಶೀತೀ ಭೂತಂ ಜಗದ್ಯಸ್ಯ ವಾಚಾರಾಧ್ಯ ಚತುಷ್ಟಯಂ ।

ಮೋಕ್ಷ ಮಾರ್ಗಂ ಸಪಾಯಾನ್ನಃ ಶಿವಕೋಟಿರ್ಮುನೀಶ್ವರ (ಪರ್ವ–೧) ॥ ೪೯ ॥